ಸೋಮವಾರ, ಏಪ್ರಿಲ್ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 117 | ಪುಟ 12


www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿನ್ನದ ಸಂಭ್ರಮ



ಬೆಂಗಳೂರಿನಲ್ಲಿ ಭಾನುವಾರ ನಡೆದ ಟಿಸಿಎಸ್ ವಿಶ್ವ 10ಕೆ ಓಟದ ಎಲೀಟ್ ಪುರುಷರ ವಿಭಾಗದಲ್ಲಿ ಚಿನ್ನ ಗೆದ್ದ ಯುಗಾಂಡಾದ ಜೋಷುವಾ ಚೆಪ್ಟೆಗಿ (ಬಲ) ಅವರು ಬೆಳ್ಳಿ ಪದಕ ಜಯಿಸಿದ ಎರಿಟ್ರಿಯಾದ ಸೇಮನ್ ಟೆಸ್‌ಫಜಿರೋಜೆಸ್ ಅವರೊಂದಿಗೆ ಸಂಭ್ರಮಿಸಿದರು

ಗುರಿ ತಲುಪಿದ ಸಮಯ

ಚೆಪ್ಟೆಗಿ: 27 ನಿಮಿಷ 53 ಸೆಕೆಂಡ್

ಸೇಮನ್: 27 ನಿಮಿಷ 55 ಸೆಕೆಂಡ್

ಹಂತಕರಿಗಾಗಿ ಮುಂದುವರಿದ ಶೋಧ; ಇನ್ನೂ ಸಿಗದ ಸುಳಿವು • ಶಂಕಿತರ ಇನ್ನಷ್ಟು ಮನೆಗಳು ಧ್ವಂಸ

ಗಡಿಯಲ್ಲಿ ಉದ್ವಿಗ್ನ ಸ್ಥಿತಿ ಉಲ್ಬಣ

• ಜುಲ್ಫಿಕರ್ ಮಜೀದ್

ಶ್ರೀನಗರ: ಪಹಲ್ಗಾಮ್‌ನಲ್ಲಿ 26 ಪ್ರವಾಸಿಗರ ಹತ್ಯೆಗೈದ ಉಗ್ರರಿಗಾಗಿ ಭದ್ರತಾ ಪಡೆಗಳು ಕಳೆದ ಐದು ದಿನಗಳಿಂದ ತೀವ್ರ ಶೋಧ ನಡೆಸುತ್ತಿವೆಯಾದರೂ, ಯಾವುದೇ ಸುಳಿವು ಲಭ್ಯವಾಗಿಲ್ಲ.

ಈ ನಡುವೆ, ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಲ್ಬಣಗೊಂಡಿರುವ ಮತ್ತು ಆಂತರಿಕವಾಗಿ ದ್ವೇಷಮಯ ವಾತಾವರಣ ಸೃಷ್ಟಿಯಾಗಿರುವುದರಿಂದ ಜಮ್ಮು ಮತ್ತು ಕಾಶ್ಮೀರವು ಹೊಸ ಸಂಘರ್ಷವೊಂದರ ಅಂಚಿನಲ್ಲಿ ಬಂದು ನಿಂತಿದೆ.

ಉಗ್ರರ ಮನೆಗಳ ಧ್ವಂಸ ಮತ್ತು ಶಂಕಿತರ ಬಂಧನ ಸೇರಿದಂತೆ ಕಣಿವೆಯಾದ್ಯಂತ ವ್ಯಾಪಕ ಶೋಧ ಕಾರ್ಯಾಚರಣೆ ನಡೆದಿದೆಯಾದರೂ, ರಕ್ತಪಾತಕ್ಕೆ ಕಾರಣರಾದ ಭಯೋತ್ಪಾದಕರ ಪತ್ತೆ ಸಾಧ್ಯವಾಗಿಲ್ಲ. ಕಡಿದಾದ ಭೂಪ್ರದೇಶ ಮತ್ತು ದಾಳಿಕೋರರಿಗೆ ಮಾಹಿತಿ ನೀಡುವ ಜಾಲ ಸ್ಥಳೀಯವಾಗಿ ಸಕ್ರಿಯವಾಗಿರುವುದು ಪತ್ತೆ ಕಾರ್ಯವನ್ನು ಜಟಿಲವಾಗಿಸಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.



ಶ್ರೀನಗರದ ದಲ್ ಸರೋವರದ ಬಳಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ —ಪಿಟಿಐ ಚಿತ್ರ

ಕೇಂದ್ರ ಗೃಹ ಸಚಿವಾಲಯವು ಪಹಲ್ಗಾಮ್ ದಾಳಿಯ ತನಿಖೆಯನ್ನು ಭಾನುವಾರ ಔಪಚಾರಿಕವಾಗಿ ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಹಸ್ತಾಂತರಿಸಿದೆ. ಏ.22ರ ಹತ್ಯಾಕಾಂಡದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಮೂವರು ಭಯೋತ್ಪಾದಕರ ರೇಖಾಚಿತ್ರ ಮತ್ತು ಗುರುತನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ.

8ನೇ ಪುಟ ನೋಡಿ



ಭಯೋತ್ಪಾದಕರ ದಾಳಿಯ ಚಿತ್ರಗಳನ್ನು ನೋಡುವಾಗ ಪ್ರತಿಯೊಬ್ಬ ಭಾರತೀಯನ ರಕ್ತ ಕುದಿಯುತ್ತಿರುವುದಾಗಿ ನಾನು ಭಾವಿಸುತ್ತೇನೆ. ದೇಶದ ಏಕತೆ ಮತ್ತು 140 ಕೋಟಿ ಜನರ ಒಗ್ಗಟ್ಟು, ಭಯೋತ್ಪಾದನೆ ವಿರುದ್ಧದ ಈ ಹೋರಾಟದಲ್ಲಿ ನಮ್ಮ ದೊಡ್ಡ ಶಕ್ತಿಯಾಗಿದೆ. ಈ ಏಕತೆಯೇ ನಮ್ಮ ನಿರ್ಣಾಯಕ ಹೋರಾಟದ ತಳಹದಿಯೂ ಹೌದು

ನರೇಂದ್ರ ಮೋದಿ, ಪ್ರಧಾನಿ (ಮನದ ಮಾತು ಕಾರ್ಯಕ್ರಮದಲ್ಲಿ)

ತನಿಖೆ ಆರಂಭಿಸಿದ ಎನ್‌ಐಎ


ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ತನಿಖೆಯನ್ನು ಭಾನುವಾರ ಔಪಚಾರಿಕವಾಗಿ ಆರಂಭಿಸಿದೆ.

ಕೇಂದ್ರ ಗೃಹ ಸಚಿವಾಲಯ ಹೊರಡಿಸಿದ ಆದೇಶದ ನಂತರ ಬೆಳವಣಿಗೆ ನಡೆದಿದೆ. ಈಚೆಗಿನ ವರ್ಷಗಳಲ್ಲಿ ಕಾಶ್ಮೀರದಲ್ಲಿ ನಡೆದ ಅತ್ಯಂತ ಭೀಕರ ಭಯೋತ್ಪಾದಕ ದಾಳಿಯನ್ನು ಕೇಂದ್ರ ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ತಪ್ಪಿತಸ್ಥರನ್ನು ಮಟ್ಟಹಾಕುವ ಶಪಥ ಮಾಡಿದೆ. ದಾಳಿ ನಡೆದ ಸ್ಥಳದಲ್ಲಿ ಬುಧವಾರದಿಂದಲೇ ಮೊಕ್ಕಾಂ ಹೂಡಿರುವ ಎನ್‌ಐಎ ಅಧಿಕಾರಿಗಳು ಸಾಕ್ಷ್ಯಗಳನ್ನು ಕಲೆಹಾಕುವ ಪ್ರಕ್ರಿಯೆಯನ್ನು ತೀವ್ರಗೊಳಿಸಿದ್ದಾರೆ ಎಂದು ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



33 ವಿಶೇಷ ಪೊಲೀಸ್ ಠಾಣೆ ಕಾರ್ಯಾರಂಭ

• ಆದಿತ್ಯ ಕೆ.ಎ.

ಬೆಂಗಳೂರು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ (ಡಿಸಿಆರ್‌ಇ) ವಿಶೇಷ ಪೊಲೀಸ್ ಠಾಣೆ ಮಾನ್ಯತೆ ಲಭಿಸಿದ ಬೆನ್ನಲ್ಲೇ ರಾಜ್ಯದಲ್ಲಿ 33 ಠಾಣೆಗಳು ಕಾರ್ಯಾರಂಭ ಮಾಡಿವೆ.



ಬೆಂಗಳೂರಿನಲ್ಲಿ ಎರಡು, ಪ್ರತಿ ಜಿಲ್ಲೆಗೆ ಒಂದರಂತೆ ಒಟ್ಟು 33 ವಿಶೇಷ ಪೊಲೀಸ್ ಠಾಣೆಗಳು ಏಪ್ರಿಲ್ 14ರಿಂದ ಕೆಲಸ ಆರಂಭಿಸಿವೆ. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯುವುದು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಪಡಿಸುವುದು, ಅನ್ಯಾಯಕ್ಕೆ ಒಳಗಾದವರಿಗೆ ತ್ವರಿತವಾಗಿ ನ್ಯಾಯ ಕಲ್ಪಿಸುವ ಉದ್ದೇಶದಿಂದ ಈ ಠಾಣೆಗಳನ್ನು ಸ್ಥಾಪಿಸಲಾಗಿದೆ.

4ನೇ ಪುಟ ನೋಡಿ

'ಕಂಟ್ರೋಲ್ ರೂಂ' ಸ್ಥಾಪನೆ ಕೆಲಸ

ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಡಿಸಿಆರ್‌ಇ ಕಚೇರಿಯಲ್ಲಿ 'ಕಂಟ್ರೋಲ್ ರೂಂ' ಸ್ಥಾಪನೆಯ ಕೆಲಸಗಳು ನಡೆಯುತ್ತಿವೆ. 'ಡಿಸಿಆರ್‌ಇ ಕಚೇರಿಯಲ್ಲಿ 'ಕಂಟ್ರೋಲ್ ರೂಂ' ಇರಲಿಲ್ಲ. ಹೊಸದಾಗಿ ಸ್ಥಾಪನೆ ಮಾಡಲಾಗುತ್ತಿದೆ. ಇದು ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದೆ. ಠಾಣೆಗಳಲ್ಲಿ ದಾಖಲಾಗುವ ದೌರ್ಜನ್ಯ ಪ್ರಕರಣಗಳ ಮಾಹಿತಿಯನ್ನು ಎಸ್‌ಎಚ್‌ಒಗಳು ಈ ಕಂಟ್ರೋಲ್ ರೂಂಗೆ ನೀಡಲಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

55 ಪ್ರಕರಣ ದಾಖಲು

ವಿಶೇಷ ಠಾಣೆಗಳು ಕಾರ್ಯಾರಂಭ ಮಾಡಿದ ಬಳಿಕ ದೌರ್ಜನ್ಯ ಘಟನೆಗಳಿಗೆ ಸಂಬಂಧಿಸಿದಂತೆ ವಿವಿಧ ಠಾಣೆಗಳಲ್ಲಿ 55 ಪ್ರಕರಣಗಳು ದಾಖಲಾಗಿವೆ. ವಿಶೇಷ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸಲು ನೆರವಾಗುವ ತಂತ್ರಾಂಶದ ಕೆಲಸ ಪ್ರಗತಿಯಲ್ಲಿದೆ. ಠಾಣೆಯಲ್ಲಿರುವ ಕಂಪ್ಯೂಟರ್‌ಗಳಿಗೆ ತಂತ್ರಾಂಶ ಅಳವಡಿಸಿದ ಬಳಿಕ ಎಲ್ಲ ಪ್ರಕರಣಗಳನ್ನೂ ವಿಶೇಷ ಠಾಣೆಗೇ ವರ್ಗಾವಣೆ ಮಾಡಿಕೊಂಡು, ತನಿಖೆ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಲಂಚ ಪ್ರಕರಣ: ರವೀಂದ್ರ ಗುರುನಾಥ ಡಾಕಪ್ಪ ರಾಜೀನಾಮೆ ಅಂಗೀಕರಿಸಿ ರಾಜ್ಯಪಾಲ ಆದೇಶ

ಮಾಹಿತಿ ಆಯುಕ್ತರ ಅಮಾನತು ರದ್ದು

• ಜಯಸಿಂಹ ಆರ್.



ರವೀಂದ್ರ ಗುರುನಾಥ

ಬೆಂಗಳೂರು: ₹1 ಲಕ್ಷ ಲಂಚ ಪಡೆದ ಪ್ರಕರಣದಲ್ಲಿ ರಾಜ್ಯ ಮಾಹಿತಿ ಆಯೋಗ ಕಲಬುರಗಿ ಪೀಠದ ಆಯುಕ್ತ ರವೀಂದ್ರ ಗುರುನಾಥ ಡಾಕಪ್ಪ ಅವರ ಅಮಾನತು ಆದೇಶವನ್ನು ತೆರವು ಮಾಡಿರುವ ರಾಜ್ಯಪಾಲರು, ಅದೇ ದಿನ ರಾಜೀನಾಮೆ ಅಂಗೀಕರಿಸಿದ್ದಾರೆ.

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯ ಕಪ್ಪು ಪಟ್ಟಿಯಿಂದ ಅರ್ಜಿದಾರರೊಬ್ಬರ ಹೆಸರನ್ನು ಕೈಬಿಡಲು, ಮಾರ್ಚ್ 27ರಂದು ರವೀಂದ್ರ ಅವರು ₹1 ಲಕ್ಷ ಲಂಚ ಪಡೆಯುವಾಗ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಈ ಸಂಬಂಧ ಹಲವು ದಿನಗಳವರೆಗೆ ಅವರು ನ್ಯಾಯಾಂಗ ಬಂಧನದಲ್ಲಿ ಇದ್ದರು.

ರವೀಂದ್ರ ಅವರ ವಿರುದ್ಧ ಪ್ರಕರಣ ದಾಖಲಾದ ಬೆನ್ನಲ್ಲೇ, ಅವರನ್ನು ಸೇವೆಯಿಂದ ವಜಾ ಮಾಡುವಂತೆ ರಾಜ್ಯ ಸರ್ಕಾರವು ರಾಜ್ಯಪಾಲರಿಗೆ ಶಿಫಾರಸು ಮಾಡಿತ್ತು. ಅದರಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಾರ್ಚ್ 27ರಿಂದ ಅನ್ವಯವಾಗುವಂತೆ, ಅವರನ್ನು ಏಪ್ರಿಲ್ 1ರಂದು ಅಮಾನತು ಮಾಡಿದ್ದರು.

ಮಾಹಿತಿ ಹಕ್ಕು ಕಾಯ್ದೆಯ 17(2)ನೇ ಸೆಕ್ಷನ್ ಪ್ರಕಾರ, ಇಂತಹ ಪ್ರಕರಣಗಳನ್ನು ರಾಜ್ಯಪಾಲರು ಸುಪ್ರೀಂ ಕೋರ್ಟ್‌ನ ತನಿಖೆಗೆ ಕಳುಹಿಸಬೇಕು. ಆದರೆ, ರಾಜ್ಯಪಾಲರು ಈ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ಅವಗಾಹನೆಗೆ ಕಳುಹಿಸಿರಲಿಲ್ಲ. ರವೀಂದ್ರ ಅವರ ಅಧಿಕಾರದ ಅವಧಿ ಏಪ್ರಿಲ್ 20ಕ್ಕೆ ಕೊನೆಯಾಗುತ್ತಿತ್ತು.

'ಅವರ ಕರ್ತವ್ಯಾವಧಿ 20 ದಿನಗಳಲ್ಲಿ ಮುಗಿಯುತ್ತದೆ. ಹೀಗಾಗಿ ಸುಪ್ರೀಂ ಕೋರ್ಟ್‌ನ ತನಿಖೆಗೆ ಕಳುಹಿಸಲು ಕಾಲಾವಕಾಶ ಇಲ್ಲ. ಅವರು ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿರುವುದು ದಾಖಲೆಗಳಲ್ಲಿ ಇದೆ. ಹೀಗಾಗಿ ಇದು ಮಾಹಿತಿ ಹಕ್ಕು ಕಾಯ್ದೆಯ 17(2)ನೇ ಸೆಕ್ಷನ್ ಅಡಿ ಅಮಾನತು ಆದೇಶ ಹೊರಡಿಸಲು ತಕ್ಕುದಾದ ಪ್ರಕರಣವಾಗಿದೆ' ಎಂದಿದ್ದರು.

ಅಲ್ಲದೆ ರವೀಂದ್ರ ಅವರು ನ್ಯಾಯಾಂಗ ಬಂಧನದಲ್ಲಿ ಇದ್ದಾಗಲೇ ವಿವರಣೆ ನೀಡುವಂತೆ ರಾಜ್ಯಪಾಲರು ನೋಟಿಸ್ ನೀಡಿದ್ದರು. ವಿವರಣೆ ನೀಡಲು, ತಮಗೆ ಜಾಮೀನು ದೊರೆತ ನಂತರ 15 ದಿನ ಕಾಲಾವಕಾಶ ಬೇಕು ಎಂದು ರವೀಂದ್ರ ಅವರು ಕೋರಿದ್ದರು. ಅದನ್ನು ತಿರಸ್ಕರಿಸಿದ್ದ ರಾಜ್ಯಪಾಲರು ಏಪ್ರಿಲ್ 16ರ ಒಳಗೆ ವಿವರಣೆ ನೀಡಿ ಎಂದು ಏಪ್ರಿಲ್ 2ರಂದು ಸೂಚಿಸಿದ್ದರು.

ರವೀಂದ್ರ ಅವರು ಏಪ್ರಿಲ್ 11ರಂದು ವಿವರಣೆ ನೀಡಿದ್ದರು. ಜತೆಗೆ ಏಪ್ರಿಲ್ 16ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ವಿವರಣೆ ಮತ್ತು ರಾಜೀನಾಮೆ ಎರಡನ್ನೂ ಒಪ್ಪಿಕೊಂಡಿರುವ ರಾಜ್ಯಪಾಲರು, ಅಮಾನತು ಆದೇಶವನ್ನು ತೆರವು ಮಾಡಿದ್ದಾರೆ. ಮಾಹಿತಿ ಹಕ್ಕು ಕಾಯ್ದೆಯ 17(2)ನೇ ಸೆಕ್ಷನ್ ಪ್ರಕಾರ, ಸುಪ್ರೀಂ ಕೋರ್ಟ್‌ನ ತನಿಖಾ ವರದಿಯ ಆಧಾರದಲ್ಲೇ ರಾಜ್ಯಪಾಲರು ಇಂತಹ ಆದೇಶ ಹೊರಡಿಸಬೇಕು. ಆದರೆ ಅಮಾನತು ರದ್ದತಿ ಆದೇಶ ಹೊರಡಿಸುವಾಗಲೂ ರಾಜ್ಯಪಾಲರು ಇದನ್ನು ಸುಪ್ರೀಂ ಕೋರ್ಟ್‌ನ ಗಮನಕ್ಕೆ ತಂದಿಲ್ಲ.

ಬದಲಿಗೆ, 'ಆರೋಪಿಯ ಕರ್ತವ್ಯಾವಧಿ ಮುಗಿಯಲು ಇನ್ನು ಮೂರು ದಿನಗಳಷ್ಟೇ ಉಳಿದಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಸುಪ್ರೀಂ ಕೋರ್ಟ್‌ನ ಅವಗಾಹನೆಗೆ ಕಳುಹಿಸಿ, ವರದಿ ಪಡೆಯಲು ಅವಕಾಶವಿಲ್ಲ' ಎಂದು ರಾಜ್ಯಪಾಲರು ಆದೇಶದಲ್ಲಿ ವಿವರಿಸಿದ್ದಾರೆ.

'ಈ ಪ್ರಕರಣವು ಇನ್ನೂ ತನಿಖೆಯ ಹಂತದಲ್ಲಿ ಇದೆ. ಅಲ್ಲಿಯವರೆಗೆ ರವೀಂದ್ರ ಅವರು ಆರೋಪಿ ಅಷ್ಟೆ. ಪರಿಸ್ಥಿತಿ ಹೀಗಿರುವಾಗ ಅವರನ್ನು ಅಮಾನತು ಮಾಡುವುದು, ಸಾಬೀತಾಗದ ತಪ್ಪಿಗೆ ಶಿಕ್ಷೆ ನೀಡಿದಂತಾಗುತ್ತದೆ. ಹೀಗಾಗಿ ಅವರ ಅಮಾನತು ಆದೇಶವನ್ನು ತೆರವು ಮಾಡುತ್ತಿದ್ದೇನೆ' ಎಂದಿದ್ದಾರೆ. ಜತೆಗೆ ರವೀಂದ್ರ ಅವರ ರಾಜೀನಾಮೆಯನ್ನೂ ಒಪ್ಪಿಕೊಂಡು, ಕರ್ತವ್ಯದಿಂದ ಅವರನ್ನು ಬಿಡುಗಡೆ ಮಾಡಿದ್ದಾರೆ.

ರಾಜ್ಯಪಾಲರ ಕ್ರಮಕ್ಕೆ ಆಕ್ಷೇಪ

ರಾಜ್ಯಪಾಲರ ಈ ಕ್ರಮಕ್ಕೆ ರಾಜ್ಯದ ಹಿಂದಿನ ಕೆಲ ಮಾಹಿತಿ ಆಯುಕ್ತರು ಆಕ್ಷೇಪ ಎತ್ತಿದ್ದಾರೆ. 'ನಿಯಮಗಳ ಪ್ರಕಾರ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ಗಮನಕ್ಕೆ ತರಬೇಕಿತ್ತು. ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರಿಂದ ವರದಿಯನ್ನಾದರೂ ತರಿಸಿಕೊಳ್ಳಬೇಕಿತ್ತು. ರಾಜ್ಯಪಾಲರು ಆ ಕೆಲಸಗಳನ್ನು ಮಾಡಿಲ್ಲ. ಇದು ಮಾಹಿತಿ ಹಕ್ಕು ಕಾಯ್ದೆಯ ಸ್ಪಷ್ಟ ಉಲ್ಲಂಘನೆ' ಎಂದು ಹಿಂದಿನ ಮಾಹಿತಿ ಆಯುಕ್ತರೊಬ್ಬರು ಆರೋಪಿಸಿದರು.

'ಅಮಾನತಿನಲ್ಲಿ ಇದ್ದಾಗಲೇ, ಕರ್ತವ್ಯದ ಅವಧಿ ಮುಗಿದರೆ ಪಿಂಚಣಿ ಮತ್ತು ಇತರ ನಿವೃತ್ತಿ ಸವಲತ್ತುಗಳು ದೊರೆಯುವುದಿಲ್ಲ. ಹೀಗಾಗಿಯೇ ಅವರ ಅಮಾನತನ್ನು ಮೊದಲು ರದ್ದುಪಡಿಸಿ, ಆನಂತರ ರಾಜೀನಾಮೆಯನ್ನು ಸ್ವೀಕರಿಸಿದ್ದಾರೆ. ಈ ಮೂಲಕ ಲಂಚ ಪ್ರಕರಣದ ಆರೋಪಿಗೆ ಪಿಂಚಣಿ ಮತ್ತು ಇತರ ಸವಲತ್ತುಗಳು ದೊರೆಯುವಂತೆ ಮಾಡಿದ್ದಾರೆ' ಎಂಬುದು ಅವರ ಆರೋಪ.

ಮುಖ್ಯಾಂಶಗಳು

- ಒಂದೇ ದಿನ ಅಮಾನತು ರದ್ದು, ರಾಜೀನಾಮೆ ಅಂಗೀಕಾರ
- ಸುಪ್ರೀಂ ಕೋರ್ಟ್ ಅವಗಾಹನೆಗೆ ಸಲ್ಲಿಸದೆ ಕ್ರಮ: ಆರೋಪ

ಕನ್ನಡದ ಐಸಿರಿ ಹೆಚ್ಚಿಸುತ್ತಿರುವ 'ಚಕೋರ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕನ್ನಡ ವಿವೇಕ, ಐಸಿರಿಯನ್ನು ಹೆಚ್ಚಿಸುವ ಪಸರಿಸುವ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಚಕೋರ' ಸಾಹಿತ್ಯ, ಸಂಗೀತ ಕಾರ್ಯಕ್ರಮಗಳು ಮಾಡುತ್ತಿವೆ ಎಂದು ಕನ್ನಡ ಜಾನಪದ ಪರಿಷತ್ತಿನ ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ.ಎಚ್. ಜಯದೇವ್ ತಿಳಿಸಿದರು.

ಹಾವನೂರು ಬಡಾವಣೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಭೂಮಿಕಾ ಸೇವಾ ಫೌಂಡೇಷನ್ ಸಹಯೋಗದಲ್ಲಿ ನಡೆದ 'ಚಕೋರ: ಕವಿತಾ ಗಾಯನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಮಾಂತರ ಮಟ್ಟದಲ್ಲಿ 'ಚಕೋರ' ಕಾರ್ಯಕ್ರಮಗಳು ಸೃಜನಾತ್ಮಕವಾಗಿ, ರಚನಾತ್ಮಕವಾಗಿ ಯಶಸ್ವಿಯಾಗುತ್ತಿವೆ. ಹೊಸ ಪ್ರತಿಭೆಗಳು ಬೆಳಕಿಗೆ ಬರಲು ವೇದಿಕೆಯಾಗುತ್ತಿದೆ ಎಂದರು.

ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ ಮಾತನಾಡಿ, 'ಕನ್ನಡ ಭಾಷೆ ಮತ್ತು ಗಾಯನಗಳು ಎಲ್ಲರ ಮನ ತಲುಪಬೇಕು. ಕಲುಷಿತ ಮನಸ್ಸುಗಳು ದೂರವಾಗಬೇಕು' ಎಂದು ಆಶಿಸಿದರು.

ಜನಪದ ಗಾಯಕ ಕುಣಿಗಲ್ ರಾಮಚಂದ್ರ, ಶ್ರೀದೇವಿ ಹಾಗೂ ಗಾಯಕಿ ಕವಿತಾ ಅವರು ಕುವೆಂಪು, ಜಿ.ಎಸ್. ಶಿವರುದ್ರಪ್ಪ, ದ.ರಾ.ಬೇಂದ್ರೆ, ಕಾ.ವೆಂ. ಶ್ರೀನಿವಾಸಮೂರ್ತಿ, ಎಲ್.ಎನ್. ಮುಕುಂದರಾಜ್, ಲಕ್ಷ್ಮೀ ಶ್ರೀನಿವಾಸ, ಟಿ.ಪಿ.ಕೈಲಾಸಂ ಅವರ ಗೀತೆಗಳನ್ನು ಪ್ರಸ್ತುತಪಡಿಸಿದರು. 'ಸುಧಾ' ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ಬೆಂಗಳೂರು ವಿ.ವಿ.ಯ ನಿವೃತ್ತ ಸಹಾಯಕ ಕುಲಸಚಿವ ಬಿ.ಎಸ್. ಪ್ರಭಾಕರ್, ಕಡೂರು ಶಿವಪ್ರಕಾಶ್, ಚಕೋರ ಸಂಚಾಲಕರಾದ ಲಕ್ಷ್ಮೀ ಶ್ರೀನಿವಾಸ ಉಪಸ್ಥಿತರಿದ್ದರು.

ಭೋಪಾಲ್ 5 ಮರಿಗಳಿಗೆ ಜನ್ಮನೀಡಿದ ಚೀತಾ



ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿನ ಚೀತಾ 'ನಿರ್ವಾ' ಐದು ಮರಿಗಳಿಗೆ ಜನ್ಮ ನೀಡಿದೆ ಎಂದು ಮುಖ್ಯಮಂತ್ರಿ ಮೋಹನ ಯಾದವ್ ಭಾನುವಾರ ಘೋಷಿಸಿದ್ದಾರೆ.

ಇವುಗಳ ಜನನದೊಂದಿಗೆ ಉದ್ಯಾನದಲ್ಲಿ ಚೀತಾ ಹಾಗೂ ಮರಿಗಳ ಸಂಖ್ಯೆ 29ಕ್ಕೆ ಏರಿದಂತಾಗಿದೆ. ಈಗ ದೇಶದಲ್ಲಿನ ಚೀತಾಗಳ ಒಟ್ಟು ಸಂಖ್ಯೆ 31 ಆಗಿದೆ.

'5 ವರ್ಷದ ನಿರ್ವಾ, ಐದು ಮರಿಗಳಿಗೆ ಜನ್ಮ ನೀಡಿರುವುದು ಚೀತಾ ಪ್ರಾಜೆಕ್ಟ್ ಯಶಸ್ವಿಯಾಗಿರುವುದನ್ನು ಹಾಗೂ ಭಾರತದ ಜೀವವೈವಿಧ್ಯದ ಶ್ರೀಮಂತಿಕೆಯನ್ನು ತೋರಿಸುತ್ತದೆ' ಎಂದು ಮುಖ್ಯಮಂತ್ರಿ ಯಾದವ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸುದ್ದಿ 2 ನಿಮಿಷ

'ಕೇಂದ್ರದ ತೀರ್ಮಾನಗಳಿಗೆ ಬದ್ಧ'

ಬೆಂಗಳೂರು: 'ಪಾಕಿಸ್ತಾನದ ವಿರುದ್ಧ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ತೀರ್ಮಾನಗಳಿಗೆ ಬದ್ಧ ಎಂದು ನಮ್ಮ ಪಕ್ಷ (ಕಾಂಗ್ರೆಸ್) ತಿಳಿಸಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾವೆಲ್ಲರೂ ಭಾರತೀಯರು. ಎಲ್ಲರ ಪ್ರಾಣ ಕೂಡ ಮುಖ್ಯ. ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ನೇತೃತ್ವದಲ್ಲಿ ಪಕ್ಷದ ಕಾರ್ಯಕಾರಿ ಸಮಿತಿ ತೀರ್ಮಾನಗಳನ್ನು ತೆಗೆದುಕೊಂಡಿದೆ' ಎಂದರು.

'ಪಾಕಿಸ್ತಾನದ ಮೇಲೆ ಯುದ್ಧ ಬೇಡ' ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಮುಖ್ಯಮಂತ್ರಿಯವರ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಭಾರತ ಉಳಿಯಬೇಕು ಎನ್ನುವುದು ನಮ್ಮ ನಿಲುವು' ಎಂದರು.

ಸರ್ವಪಕ್ಷ ಸಭೆಗೆ ಪ್ರಧಾನಿ ಗೈರು ಬಗ್ಗೆ ಕೇಳಿದಾಗ, 'ಈ ಪ್ರಶ್ನೆಗೆ ಪ್ರಧಾನಿಯವರೇ ಉತ್ತರಿಸಬೇಕು. ಈ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಈಗಾಗಲೇ ಹೇಳಿದ್ದಾರೆ' ಎಂದರು.


ಯುಪಿಎಸ್‌ಸಿ: 'ಗ್ರೇಸ್' ಸಂಸ್ಥೆ 17 ಅಭ್ಯರ್ಥಿಗಳು ಆಯ್ಕೆ

ಬೆಂಗಳೂರು: ಕೇಂದ್ರ ಲೋಕ ಸೇವಾ ಆಯೋಗದ 2024ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ (ಯುಪಿಎಸ್‌ಸಿ) ಚಂದ್ರಾ ಲೇಔಟ್‌ನಲ್ಲಿರುವ ಗ್ರೇಸ್ ಐಎಎಸ್ ಸಂಸ್ಥೆಯಲ್ಲಿ ತರಬೇತಿ ಪಡೆದ 17 ಅಭ್ಯರ್ಥಿಗಳು ರ‍್ಯಾಂಕ್ ಪಡೆದು ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ.

ರ‍್ಯಾಂಕ್ ವಿವರ: ಶಿವಸಿಂಗ್ (73), ತೇಜಸ್ವಿ ದೇಶಪಾಂಡೆ (99), ಅನುಪ್ರಿಯಾ ಸಕ್ಯಾ (120), ರಾಹುಲ್ ಯರಂತೆಲಿ (462), ಗುರ್‌ಸಿಂಬ್ರತ್ ಸಿಂಗ್ (598), ದಯಾನಂದ ಸಾಗರ್ (615), ಸಂಜಯ್ ಶಶಿಕಾಂತ್ ಕೌಜಲಗಿ (690), ನಿಖಿಲ್ (724), ವೈಭವ್ ರಾಜ್ ಸಿಂಗ್ (883), ಹನುಮಂತಪ್ಪ ನಂದಿ (910), ಧನ್ಯಾ (982), ಲಕ್ಷ್ಮಿ (997) ರ‍್ಯಾಂಕ್‌ಗಳನ್ನು ಪಡೆದಿದ್ದಾರೆ. ಸಾಧಕ ಅಭ್ಯರ್ಥಿಗಳನ್ನು ತರಬೇತಿ ಸಂಸ್ಥೆಯ ನಿರ್ದೇಶಕ ರವಿಚಂದ್ರ ಹಾಗೂ ಅಭ್ಯರ್ಥಿಗಳಿಗೆ ಸಂದರ್ಶನ ಸಿದ್ಧತೆಯಲ್ಲಿ ಮಾರ್ಗದರ್ಶನ ನೀಡಿದ ಸಂಜು ಸಿಂಗ್ ಚೌಹಾಣ್ ಅಭಿನಂದಿಸಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ ವಾರ್ತೆ

ಎಚ್. ಪುಟ್ಟಯ್ಯ



ಪೀಣ್ಯ ದಾಸರಹಳ್ಳಿ: ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಕಂಪನಿಯ ಕಾರ್ಮಿಕ ಸಂಘದ ಮಾಜಿ ಅಧ್ಯಕ್ಷ ಎಚ್. ಪುಟ್ಟಯ್ಯ(85) ಹೃದಯಾಘಾತದಿಂದ ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರ ಮತ್ತು ಪುತ್ರಿಯರಿದ್ದಾರೆ.

ಮೃತರ ಅಂತ್ಯಸಂಸ್ಕಾರವನ್ನು ಸ್ವಗ್ರಾಮವಾದ ಚನ್ನನಾಯಕನ ಪಾಳ್ಯದಲ್ಲಿ ಸೋಮವಾರ ಮಧ್ಯಾಹ್ನ ನೆರವೇರಿಸಲಾಗುವುದು ಎಂದು ಕುಟುಂಬಸ್ಥರಾದ ಪತ್ರಿಕಾ ವಿತರಕ ವಿನೋದ್ ತಿಳಿಸಿದ್ದಾರೆ.

ಚಿತ್ರಾವಳಿ









1) ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮರಣಾರ್ಥ ಶ್ರೀರಾಮಸೇವಾ ಮಂಡಳಿ ಟ್ರಸ್ಟ್ ನಗರದಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ ಸಂಗೀತೋತ್ಸವದಲ್ಲಿ ಸಂಗೀತಗಾರ ಚಿತ್ರವೀಣಾ ಎನ್. ರವಿಕಿರಣ್ ಅವರಿಗೆ 'ಎಸ್.ವಿ. ನಾರಾಯಣಸ್ವಾಮಿ ರಾವ್ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಹೈಕೋರ್ಟ್ ನ್ಯಾಯಮೂರ್ತಿ ಎನ್. ಕುಮಾರ್, ನೆಲಗುಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂಪತ್ ರಾಜು, ಸಂಗೀತ ವಿಮರ್ಶಕ ಎಂ. ಸೂರ್ಯಪ್ರಸಾದ್, ಶ್ರೀರಾಮಸೇವಾ ಮಂಡಳಿ ಟ್ರಸ್ಟ್ ಅಧ್ಯಕ್ಷ ಎ. ರವೀಂದ್ರ, ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ರಾಮಪ್ರಸಾದ್ ಉಪಸ್ಥಿತರಿದ್ದರು.

2) ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಸಿತಾರ್ ವಾದಕ ಉಸ್ತಾದ್ ಶಾಹಿದ್ ಪರ್ವೇಜ್ ಖಾನ್ (ಎಡದಿಂದ ಮೂರನೆಯವರು) ಅವರಿಗೆ 'ಎಸ್.ವಿ.ಎನ್. ರಾವ್ ಗ್ಲೋಬಲ್ ಅವಾರ್ಡ್ ಫಾರ್ ಮ್ಯೂಸಿಕ್' ಪ್ರಶಸ್ತಿಯನ್ನು ಭಾನುವಾರ ಪ್ರದಾನ ಮಾಡಲಾಯಿತು. ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ವರದರಾಜ್, ಉಡುಪಿಯ ಸೋದೆ ಮಠದ ವಿಶ್ವವಲ್ಲಭತೀರ್ಥ ಸ್ವಾಮೀಜಿ ಮತ್ತು ತಬಲಾ ವಾದಕ ಪಂಡಿತ್ ರಾಮಕುಮಾರ್ ಮಿಶ್ರಾ ಉಪಸ್ಥಿತರಿದ್ದರು.

3) ಷಣ್ಮುಗ ಆರ್ಟ್ಸ್, ಸೈನ್ಸ್ ಟೆಕ್ನಾಲಜಿ ಆ್ಯಂಡ್ ರೀಸರ್ಚ್ ಅಕಾಡೆಮಿ (ಎಸ್‌ಎಎಸ್‌ಟಿಆರ್‌ಎ) ಹಮ್ಮಿಕೊಂಡಿದ್ದ ಕಾನೂನಾತ್ಮಕ ಸಂಪರ್ಕ (ಲಾ–ಜಿಕಲ್ ಕನೆಕ್ಟ್) ಸಂವಾದ ಕಾರ್ಯಕ್ರಮದಲ್ಲಿ ಕಾನೂನು ತಜ್ಞರಾದ ಅಮೃತ್ ಭಾರ್ಗವ್, ಅರವಿಂದ್ ದಾತಾರ್, ಸಿ.ಎಸ್. ವೈದ್ಯನಾಥನ್, ಅರ್ಘ್ಯ ಸೇನ್‌ಗುಪ್ತಾ ಭಾಗವಹಿಸಿದ್ದರು.

4) ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೈ–ಲಾ ತಿದ್ದುಪಡಿ ಖಂಡಿಸಿ ಸಮಾನ ಮನಸ್ಕರ ಒಕ್ಕೂಟ–ಕರ್ನಾಟಕ ಇತ್ತೀಚೆಗೆ ನಡೆಸಿದ ಸಮಾಲೋಚನಾ ಸಭೆಯ ಹಕ್ಕೊತ್ತಾಯದ ಪ್ರತಿಯನ್ನು ಹಂಪ ನಾಗರಾಜಯ್ಯ, ಕೆ.ಎಸ್. ವಿಮಲಾ ಹಾಗೂ ಎಸ್.ಜಿ. ಸಿದ್ಧರಾಮಯ್ಯ ಅವರನ್ನು ಒಳಗೊಂಡ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿತು. ಇದೇ ವೇಳೆ ಕಸಾಪಗೆ ಆಡಳಿತಾಧಿಕಾರಿ ನೇಮಿಸಲು ಒತ್ತಾಯಿಸಿತು.

ಶಿವಕುಮಾರ ಸ್ವಾಮೀಜಿ ಜಯಂತಿಯಲ್ಲಿ ಶಂಕರ್ ಬಿದರಿ ಬೇಸರ

ಬಲಹೀನಗೊಳಿಸುತ್ತಿರುವ ಬಾಹ್ಯ ಶಕ್ತಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊರಗಿನ ಶಕ್ತಿಗಳು ನಮ್ಮ ಸಮುದಾಯವನ್ನು ಬಲಹೀನಗೊಳಿಸುತ್ತಿವೆ. ನಾವು ಪರಸ್ಪರ ಸಹಕಾರ ನೀಡುತ್ತಾ ಒಗ್ಗಟ್ಟಾಗಿರಬೇಕೇ ಹೊರತು ಕಾಲೆಳೆಯಲು ಹೋಗಬಾರದು' ಎಂದು ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಸಲಹೆ ನೀಡಿದರು.

ಬಸವ ವಕೀಲ್ ಬ್ರಿಗೇಡ್ ಭಾನುವಾರ ಹಮ್ಮಿಕೊಂಡಿದ್ದ ಶಿವಕುಮಾರ ಸ್ವಾಮೀಜಿ ಅವರ ಜಯಂತ್ಯುತ್ಸವದಲ್ಲಿ ಮಾತನಾಡಿದರು.

'ಪರಸ್ಪರ ಗೌರವ ಕೊಟ್ಟು ಸಹಕಾರ ನೀಡಲು ಸಾಧ್ಯವಾಗದೇ ಇದ್ದರೆ ಬಾಯಿ ಮುಚ್ಚಿ ಕುಳಿತುಕೊಳ್ಳಬೇಕು. ನಮ್ಮ ಪಾಲಿನಲ್ಲಿ ಶೇಕಡ ಐದೋ ಹತ್ತೋ ಬೇರೆಯವರಿಗೆ ಹಂಚೋಣ. ಉಳಿದ ಶೇ 90ರಷ್ಟು ನಮಗೇ ಸಿಗಬೇಕು. ಪರಿಸ್ಥಿತಿ ಸರಿ ಇಲ್ಲ. ನಾವು ಜಾಗೃತರಾಗಿರಬೇಕು. ಏನು ಹೇಳಲು ಹೊರಟಿದ್ದೀನಿ ಎಂಬುದು ನಿಮಗೆಲ್ಲ ಅರ್ಥವಾಗುತ್ತದೆ. ಬಿಡಿಸಿ ಹೇಳುವುದಿಲ್ಲ' ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಮಾತನಾಡಿ, 'ತಾನು ನಂಬಿದ ಸಿದ್ಧಾಂತವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಕಾರ್ಯರೂಪಕ್ಕೆ ತಂದವರು ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ. ಕಾಯಕ ತತ್ವ ಮತ್ತು ವಿದ್ಯಾದಾನವನ್ನು ಕೊನೇ ತನಕ ಮಾಡಿದರು' ಎಂದು ಸ್ಮರಿಸಿದರು.

'12ನೇ ಶತಮಾನದಿಂದಲೇ ಕಲಿಸಲು ವಚನಕಾರರು ಆರಂಭಿಸಿದ್ದರು. ಕಲಿಸುವ ಪ್ರಕ್ರಿಯೆ ಈಗಲೂ ಮುಂದುವರಿದಿದೆ. ಅಂಗಲಿಂಗ ಸಾಧನೆ ಅಂದರೆ ದೇಹ ಮತ್ತು ದೇವನ ಸಂಬಂಧ, ಲೋಕಮುಖಿ ನೈತಿಕತೆ, ಸಮಾನ ಸಮಾಜ ಮತ್ತು ಕಾಯಕ ಧರ್ಮ ಪ್ರತಿಪಾದನೆಯನ್ನು ಶರಣರು ಮಾಡಿದ್ದರು. ಆದರೆ, ಈಗ ತನ್ಮಯತೆಯಿಂದ, ಸೇವಾ ಮನೋಭಾವದಿಂದ ನಾವು ಕೆಲಸ ಮಾಡುತ್ತಿದ್ದೇವೆಯೇ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು' ಎಂದು ಹೇಳಿದರು.

ಬೆಂಗಳೂರು ದೊಡ್ಡಮಠದ ಶಿವಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಭಾರತ ಸರ್ಕಾರದ ಮಾಜಿ ಅಡಿಷನಲ್ ಸಾಲಿಸಿಟರ್ ಜನರಲ್ ಎಸ್. ಕಲ್ಯಾಣ ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಹೈಕೋರ್ಟ್ ವಕೀಲೆ ಪ್ರಮೀಳಾ ನೇಸರ್ಗಿ, ವಕೀಲ ಆರ್.ಬಿ. ಸದಾಶಿವಪ್ಪ, ಬೆಂಗಳೂರು ವಕೀಲರ ಸಂಘದ ಖಜಾಂಚಿ ಶ್ವೇತಾ ರವಿಶಂಕರ್, ಉಪಾಧ್ಯಕ್ಷ ಗಿರೀಶ್ ಕುಮಾರ್ ಭಾಗವಹಿಸಿದ್ದರು.



ಬಸವ ವಕೀಲ್ ಬ್ರಿಗೇಡ್ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವದಲ್ಲಿ ಎಸ್. ಕಲ್ಯಾಣ್ ಬಸವರಾಜು, ನ್ಯಾ. ಬಿ.ಎಸ್. ಪಾಟೀಲ, ಶಂಕರ್ ಮಹಾದೇವ್ ಬಿದರಿ, ಪ್ರಮೀಳಾ ನೇಸರ್ಗಿ, ಶಿವಬಸವ ಸ್ವಾಮೀಜಿ ಅವರು ಸಿದ್ಧಗಂಗಾ ಶಿವಕುಮಾರ್ ಸ್ವಾಮೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ದುಪ್ಪಟ್ಟು ಲಾಭದ ಆಸೆ ಹುಟ್ಟಿಸುತ್ತಿದ್ದ ಇಬ್ಬರ ವಿರುದ್ಧ ಪ್ರಕರಣ ದಾಖಲು

20ಕ್ಕೂ ಅಧಿಕ ಮಂದಿಗೆ ₹84 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಪ್ಪಟ್ಟು ಲಾಭದ ಆಸೆ ಹುಟ್ಟಿಸಿ ಸುಮಾರು 20ಕ್ಕೂ ಅಧಿಕ ಮಂದಿಯಿಂದ ₹ 84 ಲಕ್ಷ ಪಡೆದು ವಂಚಿಸಿದ ಆರೋಪದ ಮೇಲೆ ಇಬ್ಬರ ವಿರುದ್ಧ ಉತ್ತರ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಸರಘಟ್ಟ ಮುಖ್ಯ ರಸ್ತೆ ಎಜಿಬಿ ಲೇಔಟ್ ನಿವಾಸಿ ಅಶೋಕ್ ಅವರ ದೂರು ಆಧರಿಸಿ ಪರಂ ಸಕ್ಲೇಜಾ ಮತ್ತು ಲತಾ ಎಂಬುವವರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಬಿಎನ್‌ಎಸ್ ಕಾಯ್ದೆಯ ಕಲಂಗಳ ಅಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

‘ಶ್ರೀಗುರು ಮಾರ್ಕೆಟಿಂಗ್ ಆಫೀಸ್‌ನಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿರುವ ಅಶೋಕ್ ಅವರಿಗೆ ಆರೋಪಿಗಳ ಪರಿಚಯವಾಗಿದೆ. ಹಣ ದುಪ್ಪಟ್ಟು ಮಾಡುವುದಾಗಿ ಎಸ್‌ಜೆಆರ್‌ಇ ಎಂಬ ಕಂಪನಿ ಬಗ್ಗೆ ತಿಳಿಸಿದ್ದಾರೆ. ಹಣ ಹೂಡಿಕೆ ಮಾಡಿಸಿದರೆ ತಿಂಗಳ ಸಂಬಳದ ಜತೆಗೆ ಕಮಿಷನ್ ಕೊಡುವುದಾಗಿ ಆಮಿಷ ಒಡ್ಡಿದ್ದಾರೆ. ಇದಕ್ಕೆ ಅಶೋಕ್ ಒಪ್ಪಿದ ಬಳಿಕ ಆರೋಪಿಗಳು ಸ್ಕೀಮ್‌ಗಳ ವಿವರ ನೀಡಿದ್ದರು’.

‘ಕಂಪನಿ ಹೆಸರಿನಲ್ಲಿ ಆರೋಪಿಗಳು ನಕಲಿ ಗ್ರೂಪ್ ರಚಿಸಿದ್ದರು. ಅಶೋಕ್ ತನ್ನ ಸ್ನೇಹಿತರು, ಸಹದ್ಯೋಗಿಗಳು, ಪರಿಚಿತರಿಗೆ ಸ್ಕೀಂಗಳ ಬಗ್ಗೆ ವಿವರಿಸಿ 20ಕ್ಕೂ ಅಧಿಕ ಮಂದಿಯಿಂದ ಲಕ್ಷಾಂತರ ರೂಪಾಯಿ ಸಂಗ್ರಹಿಸಿ ನಗದು ರೂಪದಲ್ಲಿ ಆರೋಪಿಗಳಿಗೆ ನೀಡಿದ್ದಾರೆ. ಬಳಿಕ ಹಣ ನೀಡದೆ, ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು ಸಂಪರ್ಕಕ್ಕೆ ಸಿಕ್ಕಿಲ್ಲ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಮೂವರ ಬಂಧನ: 25 ದ್ವಿಚಕ್ರ ವಾಹನಗಳ ವಶ

ಅಪರಾಧ ಸುದ್ದಿ

ಬೆಂಗಳೂರು: ಮನೆಗಳ ಮುಂಭಾಗ ಹಾಗೂ ಪಾರ್ಕಿಂಗ್ ಪ್ರದೇಶದಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಮಹದೇವಪುರ ಪೊಲೀಸರು ಬಂಧಿಸಿದ್ದಾರೆ.

ವರುಣ್ ಕುಮಾರ್, ಮೊಹಮ್ಮದ್ ಜೈನ್ ಹಾಗೂ ಕದ್ದ ವಾಹನಗಳನ್ನು ಖರೀದಿಸಿದ್ದ ಮಂಜುನಾಥ್ ಎಂಬುವರನ್ನು ಬಂಧಿಸಿ, ₹35 ಲಕ್ಷ ಮೌಲ್ಯದ 25 ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಮಾರ್ಚ್ 6ರಂದು ಠಾಣಾ ವ್ಯಾಪ್ತಿಯ ಉದಯನಗರ ಗ್ರಾಮದ ನಿವಾಸಿಯೊಬ್ಬರು ಮನೆ ಮುಂದೆ ನಿಲ್ಲಿಸಿದ್ದ ವಾಹನ ಕಳವಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ವೈಟ್‌ಫೀಲ್ಡ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರನ್ನು ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನಗರದ ವಿವಿಧೆಡೆ ದ್ವಿಚಕ್ರ ವಾಹನ ಕಳವು ಪ್ರಕರಣಗಳು ಪತ್ತೆಯಾಗಿವೆ.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಒಂಬತ್ತು ದಿನ ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಿದಾಗ ಕಳವು ಮಾಡಿದ ದ್ವಿಚಕ್ರ ವಾಹನ ಪೈಕಿ 12 ವಾಹನವನ್ನು ಹಾವೇರಿಯ ಕರ್ಜಗಿ ಗ್ರಾಮದ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಿರುವುದು ಗೊತ್ತಾಗಿದೆ. ನಂತರ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು.

ಆತ ನೀಡಿದ ಮಾಹಿತಿ ಆಧರಿಸಿ, ಕಳವು ವಾಹನ ಮಾರಾಟ ಮಾಡಲು ಸಿಂಗಯ್ಯನ ಪಾಳ್ಯ ರಸ್ತೆ ಪಕ್ಕದ ಖಾಲಿ ಜಾಗ ಹಾಗೂ ಡೀಸೆಲ್ ಶೆಡ್ ಪಕ್ಕದ ಖಾಲಿ ಜಾಗದಲ್ಲಿ ನಿಲ್ಲಿಸಿದ್ದ 12 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳ ಬಂಧನದಿಂದ ಮಹದೇವಪುರ ಠಾಣೆ 6, ಎಚ್‌ಎಸ್‌ಆರ್ ಲೇಔಟ್ ಠಾಣೆ 3, ವೈಟ್‌ಫೀಲ್ಡ್ ಠಾಣೆ 2, ಎಚ್‌ಎಎಲ್ ಠಾಣೆ 1, ಆನೇಕಲ್ ಠಾಣೆ 1, ವರ್ತೂರು, ಗೋವಿಂದಪುರ, ಕುಮಾರಸ್ವಾಮಿ ಲೇಔಟ್, ಜೆ.ಪಿ.ನಗರ, ಆವಲಹಳ್ಳಿ, ಬಾಗಲೂರು, ಮಾರತ್‌ಹಳ್ಳಿ ಠಾಣೆಯಲ್ಲಿ ತಲಾ 1 ಹಾಗೂ ಮೈಸೂರು ನಗರ ಠಾಣೆ 1 ಪ್ರಕರಣ ಸೇರಿ 22 ದ್ವಿಚಕ್ರ ವಾಹನ ಕಳವು ಪ್ರಕರಣ ಪತ್ತೆಯಾಗಿದೆ. ಉಳಿದ 3 ವಾಹನಗಳ ಮಾಲೀಕರ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ಹೇಳಿದ್ದಾರೆ.



ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದಿರುವ ದಾಳಿ ಖಂಡಿಸಿ ಭಾನುವಾರ ಬಿಜೆಪಿ ಕಾರ್ಯಕರ್ತರು ಹೊಂಗಸಂದ್ರದಿಂದ ಬೊಮ್ಮನಹಳ್ಳಿಯ ವಿವೇಕಾನಂದ ಸರ್ಕಲ್‌ವರೆಗೆ ಪಂಜು ಹಿಡಿದು ಪ್ರತಿಭಟನಾ ಮೆರವಣಿಗೆ ನಡೆಸಿ, ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಶಾಸಕ ಎಂ.ಸತೀಶ್ ರೆಡ್ಡಿ ಪ್ರತಿಭಟನೆ ನೇತೃತ್ವ ವಹಿಸಿದ್ದರು.

ಓಂ ಪ್ರಕಾಶ್ ಹತ್ಯೆ: ಪಲ್ಲವಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಕೊಲೆ ಪ್ರಕರಣದಲ್ಲಿ ಪತ್ನಿ ಪಲ್ಲವಿ ಅವರನ್ನು ವಶಕ್ಕೆ ಪಡೆದಿರುವ ಸಿಸಿಬಿ ಪೊಲೀಸರು, ವಿಚಾರಣೆ ತೀವ್ರಗೊಳಿಸಿದ್ದಾರೆ

ಎಸಿಪಿ ಧರ್ಮೇಂದ್ರ ನೇತೃತ್ವದ ಪೊಲೀಸ್ ತಂಡವು ಆರೋಪಿಯ ವಿಚಾರಣೆ ನಡೆಸುತ್ತಿದೆ. ಕೃತ್ಯದ ಸ್ಥಳದಲ್ಲಿ ಪತ್ತೆಯಾದ ಚಾಕು, ಖಾರದ ಪುಡಿ ಹಾಗೂ ಘಟನೆ ನಡೆದ ವೇಳೆ ಮನೆಯಲ್ಲಿ ಯಾರ‍್ಯಾರು ಇದ್ದರು ಎಂಬ ಪ್ರಶ್ನೆಗಳನ್ನು ಕೇಳಿ, ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಅಲ್ಲದೇ 8–10 ಬಾರಿ ಇರಿದು ಹತ್ಯೆ ಮಾಡಿರುವ ಬಗ್ಗೆ ಆರೋಪಿ ಸರಿಯಾದ ಮಾಹಿತಿ ನೀಡುತ್ತಿಲ್ಲ. ಕೌಟುಂಬಿಕ ಸಮಸ್ಯೆಯಿಂದಾಗಿ ಕೃತ್ಯವೆಸಗಿರುವುದಾಗಿ ತಿಳಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೃತ್ಯದಲ್ಲಿ ಓಂ ಪ್ರಕಾಶ್ ಅವರ ಪುತ್ರಿ ಕೃತಿ ಭಾಗಿಯಾಗಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಪುತ್ರಿಯ ಬಗ್ಗೆಯೂ ಸರಿಯಾದ ಮಾಹಿತಿ ನೀಡುತ್ತಿಲ್ಲ. ಹಾಗಾಗಿ ಕೃತಿ ಅವರ ವಿಚಾರಣೆಗೆ ಸಿಸಿಬಿ ಪೊಲೀಸರು ಸಿದ್ಧತೆ ನಡೆಸಿದ್ದು, ಸದ್ಯದಲ್ಲೇ ನೋಟಿಸ್ ಜಾರಿ ಮಾಡಲಾಗುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ಓಂ ಪ್ರಕಾಶ್ ಅವರ ಮಗ ಮತ್ತು ಕುಟುಂಬಸ್ಥರ ಹೇಳಿಕೆಗಳನ್ನು ಮತ್ತೊಮ್ಮೆ ದಾಖಲಿಸಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ.

ಏಪ್ರಿಲ್ 20ರಂದು ಎಚ್‌ಎಸ್‌ಆರ್ ಲೇಔಟ್ ಮನೆಯಲ್ಲಿ ಓಂ ಪ್ರಕಾಶ್ ಅವರ ಕೊಲೆ ನಡೆದಿತ್ತು. ಎಚ್‌ಎಸ್‌ಆರ್ ಠಾಣೆ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ್ದರು, ನಂತರ ಪ್ರಕರಣದ ತನಿಖೆ ಸಿಸಿಬಿಗೆ ವರ್ಗಾಯಿಸಲಾಯಿತು.

ಬೆಂಕಿ ಅವಘಡ: ಬಾಲಕರ ಸಾವು 800 ಗುಡಿಸಲು ಸಂಪೂರ್ಣ ಭಸ್ಮ

ನವದೆಹಲಿ(ಪಿಟಿಐ): ದೆಹಲಿಯ ರೋಹಿಣಿ ಪ್ರದೇಶದ ಸೆಕ್ಟರ್ 17ರಲ್ಲಿನ ಕೊಳೆಗೇರಿಯೊಂದರಲ್ಲಿ ಭಾನುವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದು, 800ಕ್ಕೂ ಅಧಿಕ ಗುಡಿಸಲುಗಳು ಭಸ್ಮವಾಗಿವೆ.

ಮೂರು ಗಂಟೆಗೂ ಹೆಚ್ಚು ಕಾರ್ಯಾಚರಣೆ ನಡೆಸಿದ ಅಗ್ನಿ ಶಾಮಕ ದಳ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ.

‘ಭಸ್ಮವಾಗಿದ್ದ ಗುಡಿಸಲುಗಳ ಅವಶೇಷಗಳಿಂದ, ಎರಡೂವರೆ ವರ್ಷ ಹಾಗೂ ಮೂರು ವರ್ಷದ ಬಾಲಕರ ಮೃತದೇಹಗಳನ್ನು ಹೊರತೆಗೆಯಲಾಗಿದೆ’ ಎಂದು ಡಿಸಿಪಿ (ರೋಹಿಣಿ) ಅಮಿತ್ ಗೋಯೆಲ್ ತಿಳಿಸಿದ್ದಾರೆ.

‘ಬೆಳಿಗ್ಗೆ 11.55ರ ವೇಳೆಗೆ ಅಗ್ನಿ ಅವಘಡ ಕುರಿತು ಕರೆ ಸ್ವೀಕರಿಸಿದ ಕೂಡಲೇ, ಘಟನಾ ಸ್ಥಳಕ್ಕೆ 17 ಅಗ್ನಿಶಾಮಕ ವಾಹನಗಳನ್ನು ಕಳಿಸಿಕೊಡಲಾಯಿತು. ನಂತರ, ಒಟ್ಟು 26 ವಾಹನಗಳನ್ನು ಅಗ್ನಿ ನಂದಿಸುವ ಕಾರ್ಯಕ್ಕೆ ನಿಯೋಜನೆ ಮಾಡಲಾಯಿತು’ ಎಂದು ದೆಹಲಿ ಅಗ್ನಿ ಸೇವೆಗಳ ದಳದ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಒಂದು ಗುಡಿಸಲಿನಲ್ಲಿ ಕಾಣಿಸಿಕೊಂಡ ಬೆಂಕಿ, ನಂತರ ಇತರೆಡೆ ವ್ಯಾಪಿಸಿತು. ಇಕ್ಕಟ್ಟಾದ ರಸ್ತೆಗಳ ಕಾರಣ, ಬೆಂಕಿ ನಂದಿಸುವುದು ಸವಾಲಿನದಾಗಿತ್ತು’ ಎಂದೂ ಹೇಳಿದ್ದಾರೆ.



ನವದೆಹಲಿಯ ರೋಹಿಣಿ ಪ್ರದೇಶದ ಸೆಕ್ಟರ್ 17ರಲ್ಲಿರುವ ಕೊಳೆಗೇರಿಯೊಂದರಲ್ಲಿ ಭಾನುವಾರ ಅಗ್ನಿ ಅವಘಡ ಸಂಭವಿಸಿದ್ದರಿಂದ ನಿವಾಸಿಗಳನ್ನು ಸುರಕ್ಷಿತ ಜಾಗಕ್ಕೆ ಕರೆತರಲಾಗಿತ್ತು ಪಿಟಿಐ ಚಿತ್ರ

ಮೂವರು ಆರೋಪಿಗಳ ಸೆರೆ

ಕಸ ಎಸೆದಿದ್ದನ್ನು ಪ್ರಶ್ನಿಸಿದ್ದಕ್ಕೆ ಪ್ರಾಧ್ಯಾಪಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ಆಟೊದಲ್ಲಿ ಕುಳಿತು ಕಸ ಎಸೆದು ಹೋಗುತ್ತಿದ್ದವರನ್ನು ತಡೆದು ಪ್ರಶ್ನೆ ಮಾಡಿದ್ದ ಪ್ರಾಧ್ಯಾಪಕರೊಬ್ಬರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

ಏಪ್ರಿಲ್ 21ರಂದು ದಯಾನಂದ ಸಾಗರ್ ಕಾಲೇಜಿನ ಪ್ರಾಧ್ಯಾಪಕ ಅರಬಿಂದೊ ಗುಪ್ತಾ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುಪ್ರಸಾದ್ (26), ಶರತ್ (23) ಹಾಗೂ ಅಮೃತ್ ಕುಮಾರ್ (24) ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಟೊದಲ್ಲಿ ಕುಳಿತಿದ್ದ ಆರೋಪಿಗಳು ಕಸ, ಗಾಜುಗಳನ್ನು ರಸ್ತೆಗೆ ಎಸೆಯುತ್ತಿದ್ದರು. ಈ ಸಂದರ್ಭದಲ್ಲಿ ಬೈಕ್‌ನಲ್ಲಿ ಸಾಗುತ್ತಿದ್ದ ಅರಬಿಂದೊ ಗುಪ್ತಾ, ‘ಈ ರೀತಿ ಕಸ ಎಸೆಯಬೇಡಿ, ಇತರೆ ವಾಹನಗಳಿಗೆ ತೊಂದರೆ ಆಗುವ ಸಾಧ್ಯತೆಯಿರುತ್ತದೆ’ ಎಂದು ಆರೋಪಿಗಳಿಗೆ ಸೂಚಿಸಿದ್ದರು. ಸಿಟ್ಟಿಗೆದ್ದ ಆರೋಪಿಗಳು ಆಟೊದಿಂದ ಇಳಿದು ಅವರ ಮೇಲೆ ಹಲ್ಲೆ ನಡೆಸಿದ್ದರು.

‘ಕಸ, ಗಾಜುಗಳನ್ನು ರಸ್ತೆಗೆ ಎಸೆಯುತ್ತಿದ್ದನ್ನು ಪ್ರಶ್ನಿಸಿದ್ದಕ್ಕೆ ಮೂವರು ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆ. 20-30 ವರ್ಷಗಳ ಹಿಂದೆ ಸುರಕ್ಷಿತ ನಗರ ಎಂದು ಬೆಂಗಳೂರನ್ನು ಕರೆಯಲಾಗುತ್ತಿತ್ತು. ಆದರೆ, ಇಂದು ಬೆಂಗಳೂರಿನ ಹೆಸರನ್ನು ಹಾಳು ಮಾಡಲಾಗುತ್ತಿದೆ. ಈ ರೀತಿಯ ಗೂಂಡಾವರ್ತನೆ ಸಹಿಸಲು ಸಾಧ್ಯವಿಲ್ಲ’ ಎಂದು ಅರಬಿಂದೊ ಗುಪ್ತಾ ತಿಳಿಸಿದ್ದರು.

ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಕೈಗೊಂಡಿದ್ದರು. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿ, ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ ಎಂದು ಹೇಳಿದ್ದಾರೆ.



ಭಾನುಪ್ರಸಾದ್, ಶರತ್, ಅಮೃತ್ ಕುಮಾರ್

ಮಹಡಿಯಿಂದ ಬಿದ್ದು ಸಾವು

ಬೆಂಗಳೂರು: ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ಮನೆಯ ಟೆರೇಸ್ ಮೇಲಿಂದ ಕಾಲು ಜಾರಿ ಬಿದ್ದು ಮೃತಪಟ್ಟಿರುವ ಘಟನೆ ದೇವಸಂದ್ರದ ನೇತ್ರಾವತಿ ಲೇಔಟ್‌ನಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದೆ

ದೇವಸಂದ್ರದ ನೇತ್ರಾವತಿ ಲೇಔಟ್ ನಿವಾಸಿ ಗೋಪಾಲ್ ಸಿಂಗ್ (38) ಮೃತರು. ಅಮೆಜಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಿಂಗ್ ಅವರು ಕೆ.ಆರ್.ಪುರದ ನೇತ್ರಾವತಿ ಲೇಔಟ್‌ನಲ್ಲಿರುವ ಮೂರು ಅಂತಸ್ತಿನ ಮನೆಯಲ್ಲಿ ಪಾಲಕರೊಂದಿಗೆ ವಾಸವಾಗಿದ್ದರು.

ಶುಕ್ರವಾರ ರಾತ್ರಿ ಸಹೋದರಿ ಮತ್ತು ಪಾಲಕರ ಜತೆ ಟೆರೇಸ್ ಮೇಲೆ ಗೋಪಾಲ್ ಕುಳಿತಿಕೊಂಡಿದ್ದರು. ಕೆಲ ಹೊತ್ತಿನ ಬಳಿಕ, ‘ಮೇಲಿನ ಬಾಗಿಲು ಹಾಕಿಕೊಂಡು ಬರುತ್ತೇನೆ. ನೀವು ಕೆಳಗೆ ಹೋಗಿ’ ಎಂದು ಪಾಲಕರನ್ನು ಕೆಳಗೆ ಕಳುಹಿಸಿದ್ದರು. ಬಳಿಕ ಟೆರೇಸ್ ಮೇಲೆ ವಾಯುವಿಹಾರ ಮಾಡುವ ವೇಳೆ ಕಾಲು ಜಾರಿ ಮೃತಪಟ್ಟಿದ್ದಾರೆ ಎಂಬುದು ಗೊತ್ತಾಗಿದೆ.

ಆರಂಭದಲ್ಲಿ ಸಿಂಗ್ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇತ್ತು. ಆದರೆ, ಕುಟುಂಬದವರು ಆತ್ಮಹತ್ಯೆ ಮಾಡಿಕೊಂಡಿಲ್ಲ, ಆಯತಪ್ಪಿ ಬಿದ್ದು ಮೃತಪಟ್ಟಿದ್ದಾನೆ. ಈ ಸಾವಿನ ಬಗ್ಗೆ ಅನುಮಾನ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ. ಕೆ.ಆರ್.ಪುರ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುಡುಪು: ಯುವಕನ ಶವ ಪತ್ತೆ

ಮಂಗಳೂರು: ನಗರದ ಹೊರವಲಯದ ಕುಡುಪು ಕಟ್ಟೆ ಬಳಿ ಯುವಕನೊಬ್ಬನ ಮೃತದೇಹ ಭಾನುವಾರ ಪತ್ತೆಯಾಗಿದೆ. ಮೃತ ವ್ಯಕ್ತಿಯ ಗುರುತು ವಿಳಾಸ ಇನ್ನೂ ಪತ್ತೆಯಾಗಿಲ್ಲ. ಆತನ ಸಾವಿಗೆ ಕಾರಣವೇನೆಂಬುದು ನಿಗೂಢವಾಗಿದೆ.

‘ಸುಮಾರು 35ರಿಂದ 40 ವರ್ಷಗಳ ನಡುವಿನ ಈತನ ಕೊಲೆ ಯಾಗಿದೆಯೇ ಎಂಬುದೂ ಖಚಿತವಾಗಿಲ್ಲ. ಮರಣೋತ್ತರ ಪರೀಕ್ಷೆಯ ವರದಿ ಕೈಸೇರಿದ ಬಳಿಕವೇ ಆತನ ಸಾವಿಗೆ ಕಾರಣ ಏನೆಂದು ಗೊತ್ತಾಗಲಿದೆ ಎಂದು ತಜ್ಞ ವೈದ್ಯರು ತಿಳಿಸಿದ್ದಾರೆ. ಹಾಗಾಗಿ ಸದ್ಯಕ್ಕೆ ಶಂಕಾಸ್ಪದ ಸಾವು ಎಂದು ಪ್ರಕರಣ ದಾಖಲಿಸಿಕೊಂಡಿದ್ದೇವೆ. ತನಿಖೆ ಮುಂದುವರಿದಿದೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

‘ಚರಂಡಿಗೆ ಅಳವಡಿಸಿದ್ದ ಸಿಮೆಂಟ್ ಸ್ಲ್ಯಾಬ್ ಕುಸಿತ’



ಚೋಳನಗರದ ಚರಂಡಿಗೆ ಅಳವಡಿಸಿದ್ದ ಸಿಮೆಂಟ್ ಸ್ಲ್ಯಾಬ್ ಕುಸಿದಿರುವುದು

ಹೆಬ್ಬಾಳದ ಚೋಳ ನಗರದಲ್ಲಿರುವ ಗುಂಡಪ್ಪ ರೆಡ್ಡಿ ಬಡಾವಣೆಯ ಮೂರನೇ ಕ್ರಾಸ್‌ನಲ್ಲಿ ಒಂದು ತಿಂಗಳ ಹಿಂದೆಯಷ್ಟೇ ಚರಂಡಿಗೆ ಅಳವಡಿಸಿದ್ದ ಸಿಮೆಂಟ್‌ನ ಸ್ಲ್ಯಾಬ್ ಕುಸಿದು ಬಿದ್ದಿದೆ. ಆರ್.ಟಿ. ನಗರ ಹಾಗೂ ಕನಕನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಆಗಿದ್ದು, ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಮಂಜುನಾಥ್, ಚೋಳನಗರ



ಶ್ರೀರಾಮ ಅಪಾರ್ಟ್‌ಮೆಂಟ್‌ನ ಜೋಡಿ ರಸ್ತೆಯಲ್ಲಿ ಹಾಕಿರುವ ಕಸ

‘ವಿಲೇವಾರಿ ಆಗದ ಕಸ’

ಹೆಬ್ಬಾಳದ ಸುಮಂಗಲಿ ಸೇವಾ ಆಶ್ರಮದ ರಸ್ತೆಯಲ್ಲಿರುವ ಶ್ರೀರಾಮ ಅಪಾರ್ಟ್‌ಮೆಂಟ್‌ನ ಜೋಡಿ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದ್ದು, ಇಲ್ಲಿ ಜನರು ಮೂಗು ಮುಚ್ಚಿಕೊಂಡೇ ಸಾಗಬೇಕಾದ ಪರಿಸ್ಥಿತಿ ಎದುರಾಗಿದೆ. ಮುಂಜಾನೆ ಇದೇ ಮಾರ್ಗದಲ್ಲಿ ಸಾಗುವ ವಾಯುವಿಹಾರಿಗಳೂ ಸಮಸ್ಯೆ ಎದುರಿಸುತ್ತಿದ್ದಾರೆ. ಕೆಲವರು ವಾಹನಗಳಲ್ಲಿ ಬಂದು, ಇಲ್ಲಿ ಕಸ ಎಸೆಯುತ್ತಿದ್ದಾರೆ. ಇದರಿಂದಾಗಿ ಒಮ್ಮೆ ವಿಲೇವಾರಿ ಮಾಡಿದರೂ ಮತ್ತೆ ಕಸದ ರಾಶಿ ಬೆಳೆಯುತ್ತದೆ. ಇಲ್ಲಿರುವ ಕಸವನ್ನು ವಿಲೇವಾರಿ ಮಾಡಿ, ಕಸ ಹಾಕದಂತೆ ತಡೆಯಲು ಶಾಶ್ವತ ಪರಿಹಾರವನ್ನು ಒದಗಿಸಬೇಕು.

ಜಿ.ಎಸ್. ಮಂಜುನಾಥ್, ಹೆಬ್ಬಾಳ

‘ಮ್ಯಾನ್‌ಹೋಲ್ ಕಾಮಗಾರಿ ಪೂರ್ಣಗೊಳಿಸಿ’

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಎಂ.ಸಿ. ಲೇಔಟ್ ವಿಜಯನಗರ ಬಡಾವಣೆಯ ಒಂದನೇ ಮುಖ್ಯ ರಸ್ತೆಯಲ್ಲಿ ಮ್ಯಾನ್‌ಹೋಲ್ ಕಾಮಗಾರಿ ಹಲವು ದಿನಗಳಿಂದ ಸ್ಥಗಿತಗೊಂಡಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಮಾತ್ರವಲ್ಲ, ಸಾರ್ವಜನಿಕರು ಓಡಾಡುವುದೂ ಕಷ್ಟವಾಗುತ್ತಿದೆ. ದೊಡ್ಡ ಮಳೆ ಬಂದರೆ ಮ್ಯಾನ್‌ಹೋಲ್ ಕುಸಿಯುವ ಸಾಧ್ಯತೆ ಇದೆ. ಮುಂದೆ ಯಾವುದೇ ಅನಾಹುತಗಳು ಸಂಭವಿಸುವ ಮೊದಲೇ ಬಿಬಿಎಂಪಿ ಅಧಿಕಾರಿಗಳು ಮ್ಯಾನ್‌ಹೋಲ್ ಕಾಮಗಾರಿ ಪೂರ್ಣಗೊಳಿಸಬೇಕು.

ಕೆ.ಎಸ್. ಕುಮಾರಸ್ವಾಮಿ, ಎಂ.ಸಿ. ಲೇಔಟ್ ವಿಜಯನಗರ



ಎಂ.ಸಿ. ಲೇಔಟ್‌ನ ಒಂದನೇ ಮುಖ್ಯ ರಸ್ತೆಯಲ್ಲಿನ ಮ್ಯಾನ್‌ಹೋಲ್ ಕಾಮಗಾರಿ ಸ್ಥಗಿತಗೊಂಡಿರುವುದು

‘ಇ–ಶೌಚಾಲಯ ಉಪಯೋಗಕ್ಕೆ ಒದಗಿಸಲಿ’

ಜಯನಗರ ಎರಡನೇ ಬ್ಲಾಕ್‌ನ ಸಾರ್ವಜನಿಕ ಆಸ್ಪತ್ರೆ ಪಕ್ಕದ ಉದ್ಯಾನದ ಬಳಿ ಇರುವ ಪುರುಷ ಮತ್ತು ಮಹಿಳೆಯರ ಇ–ಶೌಚಾಲಯಗಳ ಬಾಗಿಲಿಗೆ ಬೀಗ ಹಾಕಲಾಗಿದೆ. ಇದರಿಂದ ಸಾರ್ವಜನಿಕರಿಗೆ ಅದರಲ್ಲೂ ವೃದ್ಧರು ಮತ್ತು ಮಹಿಳೆಯರಿಗೆ ತೊಂದರೆ ಆಗುತ್ತಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಅಳವಡಿಸಿರುವ ಇ–ಶೌಚಾಲಯಗಳು ಸಾರ್ವಜನಿಕ ಬಳಕೆಗೆ ಮುಕ್ತವಾಗಲಿ. ಇವುಗಳ ನಿರ್ವಹಣೆಯಲ್ಲಿ ಏನಾದರೂ ಸಮಸ್ಯೆ ಇದ್ದರೆ, ಅವುಗಳನ್ನು ಸರಿಪಡಿಸಬೇಕು.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ



ಜಯನಗರದಲ್ಲಿರುವ ಇ–ಶೌಚಾಲಯಗಳು

‘ಸಮಯಕ್ಕೆ ಬಸ್ ಸಂಚರಿಸಲಿ’

ಕೆಂಪೇಗೌಡ ಬಸ್ ನಿಲ್ದಾಣದಿಂದ ನಾಯಂಡಹಳ್ಳಿ ಮಾರ್ಗವಾಗಿ ಬಿಇಎಂಎಲ್ ಐದನೇ ಹಂತಕ್ಕೆ ಸಂಚರಿಸುವ 205–ಸಿ ಸಂಖ್ಯೆಯ ಬಸ್ ನಾಯಂಡಹಳ್ಳಿ ಬಸ್ ತಂಗುದಾಣಕ್ಕೆ ಬೆಳಗ್ಗಿನ ಜಾವ 5–15ಕ್ಕೆ ಸಂಚರಿಸುತ್ತಿತ್ತು. ಆದರೆ ಈಗ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ. ಒಂದು ತಿಂಗಳಿನಿಂದ ಈ ಸಮಸ್ಯೆಯಾಗುತ್ತಿದೆ. ಒಮ್ಮೊಮ್ಮೆ ಬಸ್ ತಡವಾಗಿ ಬಂದರೆ, ಮತ್ತೊಮ್ಮೆ ಬರುವುದೇ ಇಲ್ಲ. ಈ ಮಾರ್ಗದಲ್ಲಿ ಸಂಚರಿಸುವ 205–ಬಿ, 401–ಆರ್ ಸಂಖ್ಯೆಯ ಬಸ್‌ಗಳು ಸರಿಯಾದ ಸಮಯಕ್ಕೆ ಸಂಚರಿಸಬೇಕು. ಇಲ್ಲದಿದ್ದರೆ ಪ್ರಯಾಣಿಕರು ಬೆಳಿಗ್ಗೆ 6 ಗಂಟೆಯವರೆಗೂ ಕಾಯಬೇಕಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಬೇಕು.

ಪುಟ್ಟೇಗೌಡ, ಬನಶಂಕರಿ

‘ಕುಸಿದ ರಾಜಕಾಲುವೆ ಸರಿಪಡಿಸಿ’

ಬನಶಂಕರಿ ಆರನೇ ಹಂತದ ನಾಲ್ಕನೇ ಟಿ. ಬ್ಲಾಕ್‌ನ ಮೂಲಕ ಹಾದು ಹೋಗಿರುವ ದೊಡ್ಡ ರಾಜಕಾಲುವೆ ಕುಸಿದು ಹೋಗುತ್ತಿದ್ದು, ಅದನ್ನು ಕೂಡಲೇ ದುರಸ್ತಿಗೊಳಿಸಬೇಕು. ಕಳೆದ ವರ್ಷ ಸ್ವಚ್ಛತೆಗೆಂದು ಈ ಕಾಲುವೆಗೆ ಜೆಸಿಬಿ ಇಳಿಸಲಾಗಿತ್ತು. ಆಗ ಹಾಳಾಗಿದ್ದ, ರಾಜಕಾಲುವೆಯ ಗೋಡೆಗಳನ್ನು ಇದುವರೆಗೂ ದುರಸ್ತಿಗೊಳಿಸಲಿಲ್ಲ. ಇದರಿಂದಾಗಿ ಕಂದಕ ಹಿರಿದಾಗುತ್ತಿದೆ. ಜೊತೆಗೆ ಬಡಾವಣೆಯ ಕಡೆಗಿನ ರಾಜಕಾಲುವೆ ಕುಸಿಯುತ್ತಿದೆ. ತಡೆಗೋಡೆ ಎತ್ತರವಿರದ ಕಾರಣ ಮಕ್ಕಳು, ಜಾನುವಾರುಗಳು ರಾಜಕಾಲುವೆಗೆ ಬೀಳುವ ಸಾಧ್ಯತೆ ಇದೆ. ದೊಡ್ಡ ಮಳೆಯಾದರೆ ಅಪಾಯ ಸಂಭವಿಸಲಿದೆ. ಸಂಬಂಧಪಟ್ಟ ಅಧಿಕಾರಿಗಳು ರಾಜಕಾಲುವೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಆರ್. ಜಯಸಿಂಹ, ತಲಘಟ್ಟಪುರ



ಬನಶಂಕರಿ ನಾಲ್ಕನೇ ಟಿ. ಬ್ಲಾಕ್‌ನ ಬಳಿಯ ರಾಜಕಾಲುವೆ ಕುಸಿದಿರುವುದು

ಸಂಕ್ಷಿಪ್ತ ಸುದ್ದಿ

ಐಪಿಎಲ್ ಬೆಟ್ಟಿಂಗ್: ಆರೋಪಿ ಬಂಧನ

ಬೆಳಗಾವಿ: ಇಲ್ಲಿನ ಶಿಂಧಿ ಕಾಲೊನಿಯಲ್ಲಿನ ಐಪಿಎಲ್ ಬೆಟ್ಟಿಂಗ್ ಅಡ್ಡೆಯ ಮೇಲೆ ಭಾನುವಾರ ದಾಳಿ ಮಾಡಿದ ಸಿಇಎನ್ ಪೊಲೀಸರು, ಉದ್ಧವ್ ಜಯರಾಮದಾಸ್ ರೋಚಲಾನಿ (61) ಎಂಬ ಆರೋಪಿಯನ್ನು ಬಂಧಿಸಿದ್ದಾರೆ. ಇನ್ನೊಬ್ಬ ಆರೋಪಿ ಕರಣ್ ರೋಚಲಾನಿ ಸೇರಿ ಇನ್ನೂ ಕೆಲವರು ಪರಾರಿಯಾಗಿದ್ದಾರೆ.

'ಕಾರ್ಯಾಚರಣೆ ವೇಳೆ 25 ಮೊಬೈಲ್ ಫೋನ್, ಟಿವಿ, ₹2 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರೆದಿದೆ' ಎಂದು ಸಿಇಎನ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬೆಟಗೇರಿ ಕೃಷ್ಣಶರ್ಮ ಫೆಲೋಶಿಪ್‌ಗೆ ಅರ್ಜಿ



ಬೆಟಗೇರಿ ಕೃಷ್ಣಶರ್ಮ

ಬೆಳಗಾವಿ: ಇಲ್ಲಿನ ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್‌ನಿಂದ 'ಡಾ.ಬೆಟಗೇರಿ ಕೃಷ್ಣಶರ್ಮ: ಫೆಲೋಶಿಪ್'ಗೆ ಅರ್ಜಿ ಆಹ್ವಾನಿಸಲಾಗಿದೆ. ಕೃಷ್ಣಶರ್ಮ ಅವರ ಸಮಗ್ರ ಸಾಹಿತ್ಯವನ್ನು ಇಂದಿನ ದೃಷ್ಟಿಕೋನದಿಂದ ವಿಮರ್ಶೆಗೆ ಒಳಪಡಿಸಲು ಈ ಫೆಲೋಶಿಪ್ ಆರಂಭಿಸಲಾಗಿದೆ. ಇದು ₹25 ಸಾವಿರ ನಗದು ಹೊಂದಿದೆ. ಅಧ್ಯಯನ ಮತ್ತು ಪ್ರಬಂಧ ಸಲ್ಲಿಕೆಗೆ ಒಂದು ವರ್ಷ ಮಾತ್ರ ಕಾಲಾವಕಾಶ. 40 ವರ್ಷದೊಳಗಿನವರು, ಮೇ 15ರೊಳಗೆ ಅರ್ಜಿ ಸಲ್ಲಿಸಬೇಕು.

ಕಥೆ, ಕಾವ್ಯ ಸ್ಪರ್ಧೆ: ಕೃಷ್ಣಶರ್ಮರ ಹೆಸರಿನಲ್ಲಿ ರಾಜ್ಯಮಟ್ಟದ ಕಾವ್ಯ ಸ್ಪರ್ಧೆ ಆಯೋಜಿಸಲಾಗಿದ್ದು, ಮೂವರಿಗೆ ತಲಾ ₹5,000, ₹3,000, ₹2,000 ನಗದು ಬಹುಮಾನವಿದೆ. ರಾಜ್ಯಮಟ್ಟದ ಕಥಾ ಸ್ಪರ್ಧೆ ಕೂಡ ಇದ್ದು, ಮೂವರಿಗೆ ತಲಾ ₹10 ಸಾವಿರ, ₹8,000 ಮತ್ತು ₹5,000 ನಗದು ಬಹುಮಾನವಿದೆ. 35 ವರ್ಷದೊಳಗಿನವರು ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ ದೂರವಾಣಿ ಸಂಖ್ಯೆ: 0831-2474649.

ನಿಧನ ವಾರ್ತೆ

ತೆರೇಸಮ್ಮ



ಹುಬ್ಬಳ್ಳಿ: ರಂಗಭೂಮಿ ಕಲಾವಿದೆ ತೆರೇಸಮ್ಮ ಡಿಸೋಜಾ (91) ಅನಾರೋಗ್ಯದಿಂದ ಭಾನುವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ತೆರೇಸಮ್ಮ ಅವರು ಗುಬ್ಬಿ ವೀರಣ್ಣ, ಎಚ್.ಕೆ.ಯೋಗಾನರಸಿಂಹ, ಸುಳ್ಳದ ದೇಸಾಯಿ ಅವರ ಕಂಪನಿಗಳಲ್ಲಿ ಕಲಾವಿದೆ ಆಗಿದ್ದರು. ಕೆಲ ಚಲನಚಿತ್ರಗಳಲ್ಲೂ ಅಭಿನಯಿಸಿದ್ದರು. ಅಂತ್ಯಕ್ರಿಯೆ ಸೋಮವಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಒಳ ಮೀಸಲು: ಮಾದಿಗರ ಸಂಖ್ಯೆ ಹೆಚ್ಚು, ಎಕೆ, ಎಡಿ, ಎಎ ಹೆಸರಿನಿಂದ ಗೊಂದಲ– ಆಂಜನೇಯ

'ಜಾತಿ ಜನಗಣತಿಯತ್ತ ಚಿತ್ತ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಕೆಲವು ಸಮುದಾಯವರು ತಾವು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ, ವಾಸ್ತವವಾಗಿ ಮಾದಿಗರ ಸಂಖ್ಯೆ ಹೆಚ್ಚಿದ್ದು, ಆದಿಕರ್ನಾಟಕ (ಎಕೆ), ಆದಿದ್ರಾವಿಡ (ಎಡಿ), ಆದಿಆಂಧ್ರ (ಎಎ) ಹೆಸರಿನಲ್ಲಿ ಗುರುತಿಸಿಕೊಂಡಿರುವುದು ಗೊಂದಲಕ್ಕೆ ಕಾರಣವಾಗಿದೆ' ಎಂದು ಮಾಜಿ ಸಚಿವರೂ ಆಗಿರುವ ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಹೇಳಿದರು.

ಅಂಬೇಡ್ಕರ್ ಭವನದಲ್ಲಿ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿಯು ಭಾನುವಾರ ಆಯೋಜಿಸಿದ್ದ 'ಜಾತಿ ಜನಗಣತಿ ವೇಳೆ ಮಾದಿಗರ ಪಾತ್ರವೇನು?' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಆಂಧ್ರದಲ್ಲಿ ಮಂದಕೃಷ್ಣ ಆರಂಭಿಸಿದ ಮಾದಿಗ ಒಳಮೀಸಲಾತಿ ಹೋರಾಟ ಕರ್ನಾಟಕದಲ್ಲಿಯೂ ಕಿಚ್ಚು ಹಚ್ಚಿತು' ಎಂದರು.

'ತೆಲಂಗಾಣ ಸೇರಿ ಕೆಲವೆಡೆ ಒಳ ಮೀಸಲಾತಿ ಜಾರಿಗೆ ಅಲ್ಲಿನ ಸರ್ಕಾರಗಳು ಕ್ರಮಕೈಗೊಂಡಿವೆ. ಕರ್ನಾಟಕದಲ್ಲಿಯೂ ಒಳಮೀಸಲಾತಿ ಜಾರಿಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ದಿಟ್ಟ ಕ್ರಮಕೈಗೊಂಡಿದ್ದಾರೆ. ಒಳ ಮೀಸಲಾತಿ ಜಾರಿಗೆ ಬರುವವರೆಗೆ ಸರ್ಕಾರಿ ಉದ್ಯೋಗಗಳ ನೇಮಕಾತಿಗೆ ಸರ್ಕಾರ ತಡೆ ನೀಡಿದೆ' ಎಂದರು.

'ಪರಿಶಿಷ್ಟ ಕುಟುಂಬಗಳ ದತ್ತಾಂಶ ಸಂಗ್ರಹಕ್ಕೆ ಮೇ 5ರಿಂದ 17ರವರೆಗೆ ಜಾತಿ ಜನಗಣತಿ ನಡೆಯಲಿದೆ. ಈ ಅವಧಿಯಲ್ಲಿ ಮಾದಿಗ ಸಮುದಾಯದವರು ಅತ್ಯಂತ ಜವಾಬ್ದಾರಿಯಿಂದ ವರ್ತಿಸಬೇಕು. ಮಾದಿಗ ಸಮುದಾಯ ಜಾತಿ, ಉತ್ಸವ, ಹಬ್ಬ, ಜಯಂತಿಗಳ ಆಚರಣೆಯಲ್ಲಿ ಮುಳುಗುವ ಮುಗ್ಧ ಸಮುದಾಯ. ಇಂತಹ ಆಚರಣೆಗಳನ್ನು ಜಾತಿ ಜನಗಣತಿ ಮುಗಿಯುವವರೆಗೂ ಆಚರಿಸಬಾರದು. ನಮ್ಮ ಗುರಿ ಜಾತಿ ಜನಗಣತಿಯತ್ತ ಇರಬೇಕು' ಎಂದು ಹೇಳಿದರು.

'ಜಾತಿ ಜನಗಣತಿ ಕಾರ್ಯ ಪೂರ್ಣಗೊಂಡು ಒಳ ಮೀಸಲಾತಿ ಜಾರಿಗೊಳ್ಳುವವರೆಗೂ ಕಾಲೊನಿ, ಹಟ್ಟಿ, ಬಡಾವಣೆಗಳ ನಮ್ಮ ನಮ್ಮ ಮನೆಗಳಲ್ಲಿದ್ದು, ಗಣತಿದಾರರ ಜೊತೆ ಬಡಾವಣೆ ಸುತ್ತಬೇಕು. ಮಾದಿಗ ಎಂದು ಕಡ್ಡಾಯವಾಗಿ ಬರೆಸಲು ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಬೇಕು. ಆದಿ ಕರ್ನಾಟಕ, ಆದಿದ್ರಾವಿಡ, ಆದಿಆಂಧ್ರ ಎಂಬ ಸೂಚಕವನ್ನು ಯಾವುದೇ ಕಾರಣಕ್ಕೂ ಬರೆಸಲೇಬಾರದು. ಯಾರೊಬ್ಬರೂ ಗಣತಿಯಿಂದ ಹೊರಗುಳಿಯದಂತೆ ಎಚ್ಚರ ವಹಿಸಬೇಕು' ಎಂದರು.

'ಆಂಧ್ರದಲ್ಲಿ ಮಾದಿಗ ಸಮುದಾಯ ಆಯೋಜಿಸಿದ್ದ ಒಳಮೀಸಲಾತಿ ಹೋರಾಟದಲ್ಲಿ ಸಚಿವ ಸ್ಥಾನ ಪಣಕ್ಕಿಟ್ಟು ಈ ಹಿಂದೆ ನಾನು ಭಾಗವಹಿಸಿದ್ದೆ. ನನಗೆ ಮಾದಿಗ ಸಮುದಾಯದ ಪ್ರಗತಿ ಮುಖ್ಯ' ಎಂದರು.

ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಶಾಸಕ ಬಸವಂತಪ್ಪ ಮತ್ತು ಮಾದಿಗ ಸಮುದಾಯದ ಮುಖಂಡರು ಇದ್ದರು.



'ಜಾತಿಗಣತಿ ವೇಳೆ ಮಾದಿಗರ ಪಾತ್ರವೇನು?' ಕಾರ್ಯಕ್ರಮದಲ್ಲಿ ಎಚ್. ಆಂಜನೇಯ, ಬಿ.ಎನ್. ಚಂದ್ರಪ್ಪ, ಮಾದಿಗ ಸಮುದಾಯದ ಮುಖಂಡರು ಪ್ರತಿಜ್ಞೆ ಸ್ವೀಕರಿಸಿದರು

ಒಳಮೀಸಲಾತಿ ಹಂಚಿಕೆ ವೇಳೆ ಮಾದಿಗ ಸಮುದಾಯಕ್ಕೆ ಹೆಚ್ಚು ಪಾಲು ದೊರೆಯಲೇಬೇಕು. ಅದಕ್ಕೆ ಸಮುದಾಯದ ಎಲ್ಲರೂ ಬಹಳ ಎಚ್ಚರಿಕೆ ಹೆಜ್ಜೆ ಇಡಬೇಕು

ಎಚ್. ಆಂಜನೇಯ, ಮಾಜಿ ಸಚಿವ

'ಜಾತಿ ಗಣತಿ ವರದಿ ಒಪ್ಪಲು ಸಾಧ್ಯವಿಲ್ಲ'



ಶಾಮನೂರು ಶಿವಶಂಕರಪ್ಪ

'ಜಾತಿ ಜನಗಣತಿ ವರದಿ ವೈಜ್ಞಾನಿಕವಾಗಿಲ್ಲ ಮತ್ತು ಅದನ್ನು ನಾವು ಒಪ್ಪಿಕೊಳ್ಳಲ್ಲ ಎಂದು ಈ ಹಿಂದೆಯೇ ಸ್ಪಷ್ಟಪಡಿಸಿದ್ದೇವೆ. ನಮ್ಮ ಈ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇದು ಅತ್ಯಂತ ಹಳೆಯ ವರದಿ. ಅದು ವೈಜ್ಞಾನಿಕವಾಗಿ ಆಗಿಲ್ಲ. ಅವರಿಗೆ ಹೇಗೆ ಬೇಕೋ, ಹಾಗೆ ಬರೆಸಿಕೊಂಡಿದ್ದಾರೆ. ಈ ವರದಿಯನ್ನು ಸರಿಪಡಿಸಿಕೊಂಡೇ ಸರ್ಕಾರ ಮುಂದಿನ ಕ್ರಮ ತೆಗೆದುಕೊಳ್ಳಬೇಕು' ಎಂದರು.

'ಈ ವರದಿ ಕುರಿತಂತೆ ಲಿಂಗಾಯತ ಮತ್ತು ಒಕ್ಕಲಿಗ ನಾಯಕರು ಈಚೆಗಷ್ಟೇ ಸಭೆ ನಡೆಸಿದ್ದೇವೆ. ಮತ್ತೆ ಸಭೆ ಸೇರುತ್ತೇವೆ. ಆದರೆ, ತಕ್ಷಣದಲ್ಲೇ ಯಾವುದೇ ಸಭೆ ಅಥವಾ ಸಮಾವೇಶ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಉಪ ಜಾತಿ ನಮೂದಿಸದಿದ್ದರೆ ಒಳ ಮೀಸಲು ಸೌಲಭ್ಯ ಸಿಗದು'



ಚಿದರವಳ್ಳಿ ಮಹಾದೇವಸ್ವಾಮಿ

'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಪ್ರಮಾಣ ಹಂಚಿಕೆಗಾಗಿ ದತ್ತಾಂಶ ಸಂಗ್ರಹಿಸಲು ರಾಜ್ಯದಾದ್ಯಂತ ಮೇ 5ರಿಂದ ಪರಿಶಿಷ್ಟ ಕುಟುಂಬಗಳ ಸಮೀಕ್ಷೆ ನಡೆಯಲಿದ್ದು, ಬಲಗೈ ಸಮುದಾಯಕ್ಕೆ ಸೇರಿದ 37 ಉಪ ಜಾತಿಗೆ ಸೇರಿದವರು ಛಲವಾದಿ/ ಚಲವಾದಿ ಎಂದು ನಮೂದಿಸಬೇಕು' ಎಂದು ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಿದರವಳ್ಳಿ ಮಹಾದೇವಸ್ವಾಮಿ ತಿಳಿಸಿದ್ದಾರೆ.

'ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಪ್ರಮಾಣ ಹಂಚಿಕೆಗಾಗಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಆಯೋಗದ ಶಿಫಾರಸಿನಂತೆ ಸರ್ಕಾರವು ಪರಿಶಿಷ್ಟ ಜಾತಿಗಳ ಸಮೀಕ್ಷೆ ನಡೆಸಲಿದೆ. ಇದು ಜಾತಿ ಸಮೀಕ್ಷೆಯೇ ಹೊರತು ಧರ್ಮ ಸಮೀಕ್ಷೆಯಲ್ಲ. ಹೀಗಾಗಿ, ಪರಿಶಿಷ್ಟ ಜಾತಿಯವರು ತಮ್ಮ ಧರ್ಮದ ವಿಷಯಕ್ಕೆ ಮಹತ್ವ ನೀಡುವ ಅಗತ್ಯವಿಲ್ಲ. ಸಮುದಾಯದ ಕೆಲವು ಕುಟುಂಬಗಳು ಬೌದ್ಧ ಧರ್ಮವನ್ನು ಸ್ವೀಕರಿಸಿವೆ. ಅದು ತಪ್ಪಲ್ಲ. ಆದರೆ, ಈ ಸಮೀಕ್ಷೆಯಲ್ಲಿ ಛಲವಾದಿ/ ಚಲವಾದಿ ಎಂದು ನಮೂದಿಸಬೇಕು' ಎಂದಿದ್ದಾರೆ.

'ಚಲವಾದಿ ಪದ ಜಾತಿ ಪಟ್ಟಿಯಲ್ಲಿ 27ನೇ ಸ್ಥಾನದಲ್ಲಿದೆ. ಗೋಪ್ಯವಾಗಿ ಜಾತಿ ನಮೂದಿಸಲು ಕೂಡಾ ಆಯೋಗವು ಅವಕಾಶ ಮಾಡಿಕೊಟ್ಟಿದೆ. ಸಮೀಕ್ಷೆ ಸಂದರ್ಭದಲ್ಲಿ ಉಪ ಜಾತಿಗಳ ಹೆಸರು ನಮೂದಿಸದಿದ್ದರೆ ಆಯಾ ಜಾತಿಗಳಿಗೆ ಸೇರಿದವರ ಸಂಖ್ಯೆಯಲ್ಲಿ ಏರುಪೇರಾಗಲಿದೆ. ಇದರಿಂದಾಗಿ ಸರ್ಕಾರದಿಂದ ಶಿಕ್ಷಣ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ ಸೇರಿದಂತೆ ವಿವಿಧ ಸೌಲಭ್ಯಗಳು, ಯೋಜನೆಗಳಲ್ಲಿ ಸಿಗುವ ಮೀಸಲಾತಿಯಿಂದ ಶಾಶ್ವತವಾಗಿ ವಂಚಿತರಾಗಬೇಕಾಗುತ್ತದೆ. ಹೀಗಾಗಿ, ಪ್ರತಿ ಗ್ರಾಮದಲ್ಲಿ ಮೂಲ ಜಾತಿಯ ಹೆಸರು ನೋಂದಾಯಿಸಬೇಕೆಂದು ಜಾಗೃತಿ ಮೂಡಿಸಬೇಕು. ದಲಿತರೆಲ್ಲರೂ ಒಂದೇ ಎಂಬ ಸಂದೇಶ ನೀಡುವ ಜೊತೆಗೆ, ಒಳ ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೊಂಡು ಒಗ್ಗಟ್ಟು ಪ್ರದರ್ಶಿಸಬೇಕು' ಎಂದರು.

ಸುದ್ದಿ 2 ನಿಮಿಷ

ಕೃಷ್ಣ ಬೈರೇಗೌಡ ದಂಪತಿಗೆ 'ಮಾನವತಾವಾದಿ ಬಸವೇಶ್ವರ ಪ್ರಶಸ್ತಿ'



ಗದಗ: 'ಲಕ್ಷ್ಮೇಶ್ವರದ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ 'ಮಾನವತಾವಾದಿ ಬಸವೇಶ್ವರ ಪ್ರಶಸ್ತಿ'ಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಮತ್ತು ಅವರ ಪತ್ನಿ ಮೀನಾಕ್ಷಿ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ತಿಳಿಸಿದ್ದಾರೆ.

'ಆದರ್ಶ ದಂಪತಿ' ವಿಭಾಗದಿಂದ ಸಚಿವ ಕೃಷ್ಣಬೈರೇಗೌಡ ದಂಪತಿಯನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಏಪ್ರಿಲ್ 29ರಂದು ಗದಗದ ತೋಂಟದಾರ್ಯ ಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ಭವನ ಅಧ್ಯಕ್ಷ ವೂಡೇ ಪಿ.ಕೃಷ್ಣ ಪ್ರಶಸ್ತಿ ಪ್ರದಾನ ಮಾಡುವರು. ಪ್ರಶಸ್ತಿ ₹1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ' ಎಂದು ಅವರು ತಿಳಿಸಿದ್ದಾರೆ.

'ದೇಶದ ದುರ್ಬಲ ಪ್ರಧಾನಿ ಮೋದಿ'

ರಾಯಚೂರು: 'ಕೇಂದ್ರ ಸರ್ಕಾರದ ಬೇಹುಗಾರಿಕೆ ಹಾಗೂ ರಕ್ಷಣಾ ವ್ಯವಸ್ಥೆಯ ವೈಫಲ್ಯದಿಂದಾಗಿ ಪಹಲ್ಗಾಮ್‌ನಲ್ಲಿ ಅಮಾಯಕರು ಪ್ರಾಣ ಕಳೆದುಕೊಳ್ಳಬೇಕಾಯಿತು. ನರೇಂದ್ರ ಮೋದಿ ದೇಶದ ದುರ್ಬಲ ಪ್ರಧಾನಿ. ಅದಕ್ಕೆ ಮೋದಿ ಆಡಳಿತ ಅವಧಿಯಲ್ಲೇ ಅತಿ ಹೆಚ್ಚು ಉಗ್ರರ ದಾಳಿ ನಡೆದಿವೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ವಾಗ್ದಾಳಿ ನಡೆಸಿದರು.

'ನರೇಂದ್ರ ಮೋದಿ ಅವಧಿಯಲ್ಲಿ ಎಲ್ಲ ರಂಗದಲ್ಲೂ ವಿಫಲತೆಯನ್ನು ಕಾಣಬಹುದಾಗಿದೆ. 2014ರಿಂದ ಇಲ್ಲಿಯವರೆಗೆ ಉಗ್ರರು 3982 ಬಾರಿ ದಾಳಿ ಮಾಡಿದ್ದಾರೆ. ಅದರಲ್ಲಿ 413 ನಾಗರಿಕರು, 630 ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಸಾವಿರಾರು ಮಂದಿ ಗಾಯಗೊಂಡಿದ್ದಾರೆ' ಎಂದು ನಗರದಲ್ಲಿ ಭಾನುವಾರ ಮಾಧ್ಯಮಗೋಷ್ಠಿಯಲ್ಲಿ ಆರೋಪಿಸಿದರು.

'ಭಾರತೀಯ ಸಂವಿಧಾನದ 21ನೇ ವಿಧಿಯು ಜೀವಿಸುವ ಹಕ್ಕು ಹಾಗೂ ವೈಯಕ್ತಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದೆ. ಅದರನ್ವಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನರ ರಕ್ಷಣೆ ಮಾಡಬೇಕು. ಆದರೆ, ಕೇಂದ್ರ ಸರ್ಕಾರ ಜನರಿಗೆ ರಕ್ಷಣೆ ಒದಗಿಸುವಲ್ಲಿ ವಿಫಲವಾಗಿದೆ' ಎಂದು ಆರೋಪಿಸಿದರು.




ಮಿಂಚಿನ ಚಿತ್ತಾರ ಮಂಗಳೂರಿನಲ್ಲಿ ಭಾನುವಾರ ಸಂಜೆ ಅಬ್ಬರಿಸಿದ ಮಳೆಯ ಸಂದರ್ಭದಲ್ಲಿ ಆಗಸದಲ್ಲಿ ಮೂಡಿದ್ದ ಮಿಂಚಿನ ಚಿತ್ತಾರ ಕ್ಯಾಮೆರಾ ಕಣ್ಣಿಗೆ ಸೆರೆಯಾಯಿತು

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಅಂಬೇಡ್ಕರ್ ಅರಿವಿನ ಜತೆಗಾರ ಸೇರಿ ಇತರ ಕೃತಿಗಳ ಬಿಡುಗಡೆ

'ಸಮ್ಮೇಳನಾಧ್ಯಕ್ಷ ಮಾಡಿದರೂ ಒಪ್ಪಲ್ಲ'

ಪ್ರಜಾವಾಣಿ ವಾರ್ತೆ



ಕುಂ.ವೀರಭದ್ರಪ್ಪ

ವಿಜಯಪುರ: 'ಬಳ್ಳಾರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷನಾಗಿ ಆಯ್ಕೆ ಮಾಡಿದರೂ ನಾನು ಒಪ್ಪುವುದಿಲ್ಲ. ಅದರ ಆಸೆ ನನಗಿಲ್ಲ' ಎಂದು ಸಾಹಿತಿ ಕುಂ.ವೀರಭದ್ರಪ್ಪ ಹೇಳಿದರು.

ನಗರದಲ್ಲಿ ಭಾನುವಾರ ಸಾಹಿತಿ ಸುಜಾತಾ ಚಲವಾದಿ ಅವರ 'ಲಚಮವ್ವ ಮತ್ತು ಇತರ ಕತೆಗಳು' ಹಾಗೂ 'ಅಂಬೇಡ್ಕರ್ ಅರಿವಿನ ಜತೆಗಾರ' ಗ್ರಂಥಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಾನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ ಮೇಲೆ ಕಣ್ಣಿಟ್ಟಿರುವೆ. ಅದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಸಮರ್ಥಿಸುತ್ತಿರುವೆಯೆಂದು ಬೆಂಗಳೂರು, ಮೈಸೂರು ಜನ ಆರೋಪಿಸುವುದು ಖಂಡನೀಯ' ಎಂದರು.

'ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರಂಥ ದಾರ್ಶನಿಕರ ಮೇಲೆ ಆಣೆ ಮಾಡುವೆ. ನಾನು ಯಾವುದೇ ಆಮಿಷಕ್ಕೆ ಒಳಗಾಗಿಲ್ಲ. ನನ್ನನ್ನು ಯಾರೂ ಮಿಸುಕಾಡಿಸಲು ಆಗಲ್ಲ. ಯಾವುದೇ ಬಿರುಗಾಳಿ, ಚಂಡಮಾರುತವೂ ಕೂಡ ನನ್ನನ್ನು ಅಲ್ಲಾಡಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

'ಮಹೇಶ ಜೋಶಿ ಸೇರಿ ಯಾವುದೇ ಸರ್ವಾಧಿಕಾರಿ, ಭ್ರಷ್ಟಾಧಿಕಾರಿ ಸಮರ್ಥಕ ನಾನಲ್ಲ, ಸರ್ವಾಧಿಕಾರಿ ಶಕ್ತಿ ವಿರುದ್ಧ ನಾನು ಮೌನವಾಗಿಯೇ ವಿರೋಧಿಸುತ್ತೇನೆ. ಬಳ್ಳಾರಿ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲಿ ಎಂಬ ಒಂದೇ ಕಾರಣಕ್ಕೆ ನಾನು ಸುಮ್ಮನಿದ್ದೇನೆ' ಎಂದರು.

'ಮಹೇಶ ಜೋಶಿ ಅವರ ಸರ್ವಾಧಿಕಾರಿ ಧೋರಣೆ ವಿರುದ್ಧ ನಾನು ಹೇಳಿಕೆ ನೀಡಿದ್ದೆ. ಅದಕ್ಕೆ ಜೋಶಿ ಅವರು ಕರೆ ಮಾಡಿ, ನಿಮ್ಮ ಜಿಲ್ಲೆಯಲ್ಲಿ ಸಮ್ಮೇಳನ ನಡೆಯುತ್ತಿದೆ. ನೀವೇ ಹೇಳಿಕೆ ನೀಡಿದರೆ ಹೇಗೆ ಎಂದು ಪ್ರಶ್ನಿಸಿದರು. ಹೀಗಾಗಿ ಅವರ ವಿರುದ್ಧದ ಹೇಳಿಕೆ ಹಿಂಪಡೆದಿರುವೆ ಹೊರತು, ಬೇರೆ ಉದ್ದೇಶವಿಲ್ಲ' ಎಂದು ಸ್ಪಷ್ಟಪಡಿಸಿದರು.

'ಹೊಡಕೊಂಡವರು, ಪಡಕೊಂಡವರು ನನ್ನನ್ನು ಟೀಕಿಸುತ್ತಿರುವುದು ಖಂಡನೀಯ. ಜೋಶಿ ವಿರುದ್ಧ ಹೋರಾಡುವವರು ಹೋರಾಡಿ. ದಯವಿಟ್ಟು ಅದರಿಂದ ನನ್ನನ್ನು ದೂರವಿಡಿ' ಎಂದು ಕೋರಿದರು.

ಸಿಡಿಲು ಬಡಿದು ಮೂವರ ಸಾವು

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಯ ವಿವಿಧ ಭಾಗಗಳು ಸೇರಿದಂತೆ ರಾಜ್ಯದ ಹಲವೆಡೆ ಭಾನುವಾರ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗಿದೆ. ಸಿಡಿಲು ಬಡಿದು ಮೂವರು ಮೃತಪಟ್ಟಿದ್ದಾರೆ.

ಸುಳ್ಯ ತಾಲ್ಲೂಕಿನ ಪೆರ್ಲಂಪಾಡಿಯಲ್ಲಿ ಅಲಿಕಲ್ಲು ಮಳೆ ಆಗಿದೆ. ಮಂಗಳೂರಿನಲ್ಲಿ ರಾತ್ರಿ 7.30ರ ಸುಮಾರಿಗೆ ಗುಡುಗು ಸಿಡಿಲಿನೊಂದಿಗೆ ಮಳೆಯಾಯಿತು.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಲವೆಡೆ ಮಳೆಯಾಗಿದೆ. ಕಳಸ ಪಟ್ಟಣ ಹಾಗೂ ಸುತ್ತಲಿನ ಪ್ರದೇಶದಲ್ಲೂ ಗುಡುಗು ಮತ್ತು ಗಾಳಿಯ ಆರ್ಭಟದೊಂದಿಗೆ ಭಾರಿ ಮಳೆ ಸುರಿದಿದೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆಯಾಗಿದೆ. ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಕೆ.ಗುಡದಿನ್ನಿ ಗ್ರಾಮದ ಹೊರವಲಯದಲ್ಲಿ ಸಿಡಿಲು ಬಡಿದು ಸಾಯಣ್ಣ ಯಾದವ (52) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹುಬ್ಬಳ್ಳಿ ವರದಿ: ಕಳೆದ 24 ಗಂಟೆಗಳಲ್ಲಿ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಹರವಿ ಬಸಾಪುರ ಗ್ರಾಮದಲ್ಲಿ ರವಿಚಂದ್ರ ಚೌಟಗಿ (39) ಮತ್ತು ತೆಲಿಗಿ ಗ್ರಾಮದಲ್ಲಿ ಬಿ.ಹಾಲೇಶಪ್ಪ (55) ಎಂಬುವರು ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ವಿವಿಧೆಡೆ ಆಲಿಕಲ್ಲು ಮಳೆಗೆ ನೂರಾರು ಎಕರೆ ಹಿಂಗಾರು ಭತ್ತದ ಬೆಳೆ ಹಾನಿಯಾಗಿದೆ.

ಬಾಗಲಕೋಟೆ ನಗರ ಸೇರಿ ಕೆರೂರ, ಲೋಕಾಪುರದಲ್ಲಿ ಗುಡುಗು, ಸಿಡಿಲು ಸಹಿತ ಮಳೆ ಸುರಿದಿದೆ. ಬೀದರ್ ಜಿಲ್ಲೆಯ ಭಾಲ್ಕಿ ಗ್ರಾಮೀಣ ಪ್ರದೇಶ ಹಾಗೂ ಯಾದಗಿರಿ ಜಿಲ್ಲೆಯ ಗುರುಮಠಕಲ್‌ನ ಸುತ್ತಮುತ್ತ ಆಲಿಕಲ್ಲು ಮಳೆಯಾಗಿದೆ.

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮದನಾ ಗ್ರಾಮದಲ್ಲಿ ಭಾರಿ ಮಳೆ, ಗಾಳಿಗೆ ಮಹೇಶ ಬಸಪ್ಪ ಕೂತನವ್ರೊಯ್ನ್ ಎಂಬುವವರು ನಾಲ್ಕು ಎಕರೆಯಲ್ಲಿ ಬೆಳೆದಿದ್ದ ಪಪ್ಪಾಯ ಸಸಿಗಳು ಮುರಿದು ಬಿದ್ದಿದ್ದು ಲಕ್ಷಾಂತರ ರೂಪಾಯಿ ಹಾನಿಯಾಗಿದೆ ಎಂದು ರೈತ ತಿಳಿಸಿದ್ದಾರೆ.

ಮಡಿಕೇರಿ ವರದಿ: ನಗರ ಸೇರಿದಂತೆ ತಾಲ್ಲೂಕಿನ ಹಲವೆಡೆ ಭಾನುವಾರ ಮಧ್ಯಾಹ್ನ ಗುಡುಗು–ಸಿಡಿಲು ಸಹಿತ ಬಿರುಸಿನ ಮಳೆ ಸುರಿಯಿತು.

ಮಧ್ಯಪ್ರದೇಶ: 11 ಜನರು ಸಾವು

ಮಂಡಸೌರ್ (ಪಿಟಿಐ): ಮಧ್ಯಪ್ರದೇಶದ ಮಂಡಸೌರ್ ಜಿಲ್ಲೆಯಲ್ಲಿ ಭಾನುವಾರ ಮಧ್ಯಾಹ್ನ ವ್ಯಾನ್ ಬಾವಿಗೆ ಬಿದ್ದು ಸಂಭವಿಸಿದ ದುರಂತದಲ್ಲಿ 11 ಮಂದಿ ಸಾವಿಗೀಡಾಗಿದ್ದಾರೆ. ಬೈಕ್‌ಗೆ ಡಿಕ್ಕಿ ಹೊಡೆದ ವ್ಯಾನ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಬಾವಿಗೆ ಬಿದ್ದಿತ್ತು. ಬೈಕ್ ಸವಾರ ಮತ್ತು ರಕ್ಷಣಾ ಕಾರ್ಯಾಚರಣೆಗೆ ಇಳಿದಿದ್ದ ಸ್ಥಳೀಯರೊಬ್ಬರು ಸಾವಿಗೀಡಾದವರಲ್ಲಿ ಸೇರಿದ್ದಾರೆ ಎಂದು ರತ್ಲಾಂ ವಲಯ ಡಿಐಜಿ ಮನೋಜ್ ಸಿಂಗ್ ತಿಳಿಸಿದ್ದಾರೆ.

33 ವಿಶೇಷ ಪೊಲೀಸ್ ಠಾಣೆ ಕಾರ್ಯಾರಂಭ

ಒಂದನೇ ಪುಟದಿಂದ...

ಈವರೆಗೂ ಕಾನೂನು ಮತ್ತು ಸುವ್ಯವಸ್ಥೆ ಠಾಣೆಗಳಲ್ಲಿಯೇ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳೂ ದಾಖಲಾಗುತ್ತಿದ್ದವು. ಆ ಠಾಣೆಗಳಲ್ಲಿ ಇತರೆ ಪ್ರಕರಣಗಳ ತನಿಖೆಯನ್ನೂ ನಡೆಸಬೇಕಿದ್ದರಿಂದ ದೌರ್ಜನ್ಯ ಪ್ರಕರಣದ ತನಿಖೆ ವಿಳಂಬ ಆಗುತ್ತಿತ್ತು. ಹಾಗಾಗಿ ಕಳೆದ 12 ವರ್ಷಗಳಲ್ಲಿ (2012–2024) ದೌರ್ಜನ್ಯಕ್ಕೆ ಸಂಬಂಧಿಸಿದ 28,400 ಪ್ರಕರಣಗಳು ದಾಖಲಾಗಿದ್ದರೂ 704 ಪ್ರಕರಣಗಳಲ್ಲಿ ಮಾತ್ರವೇ ಆರೋಪಿಗಳಿಗೆ ಶಿಕ್ಷೆ ಆಗಿದೆ. ಶಿಕ್ಷೆಯ ಪ್ರಮಾಣ ಶೇ 2.47ರಷ್ಟಿದೆ.

ಎಫ್‌ಐಆರ್ ದಾಖಲಿಸಿಕೊಂಡು ತನಿಖೆ: ರಾಜ್ಯದ ಇತರೆ ಠಾಣೆಗಳಲ್ಲಿ ದಾಖಲಾಗುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳನ್ನೂ ವರ್ಗಾವಣೆ ಮಾಡಿಕೊಂಡು ತನಿಖೆ ನಡೆಸಲಾಗುವುದು. ಜತೆಗೆ, ಈಗ ಡಿಸಿಆರ್‌ಇ ಘಟಕಗಳಿಗೆ ವಿಶೇಷ ಪೊಲೀಸ್ ಠಾಣೆ ಮಾನ್ಯತೆ ಲಭಿಸಿರುವ ಕಾರಣ, ಎಫ್‌ಐಆರ್ ದಾಖಲಿಸುವ ಅಧಿಕಾರವೂ ದತ್ತವಾಗಿದೆ. ಈ ಠಾಣೆಯ ಅಧಿಕಾರಿಗಳೇ ಪ್ರಕರಣಗಳ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾರ್ಯ ನಿರ್ವಹಣೆ?: ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತರು ಸಮೀಪದ ಕಾನೂನು ಮತ್ತು ಸುವ್ಯವಸ್ಥೆ ಠಾಣೆಗೆ ತೆರಳಿ ದೂರು ನೀಡಬಹುದು. ಅಲ್ಲದೇ, ಜಿಲ್ಲಾ ಕೇಂದ್ರಗಳಲ್ಲಿ ಡಿಸಿಆರ್‌ಇ ವಿಶೇಷ ಠಾಣೆಯನ್ನೂ ಸಂಪರ್ಕಿಸಬಹುದು. ದೂರು ಆಧರಿಸಿ ಠಾಣಾಧಿಕಾರಿ (ಎಸ್‌ಎಚ್‌ಒ) ತಕ್ಷಣ ಎಫ್‌ಐಆರ್ (ಪ.ಜಾ ಹಾಗೂ ಪ.ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ–1989 ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023) ದಾಖಲಿಸಬೇಕು.

ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಠಾಣಾಧಿಕಾರಿ ಅವರು ಬೆಂಗಳೂರಿನಲ್ಲಿರುವ ಡಿಸಿಆರ್‌ಇ ಕೇಂದ್ರ ಕಚೇರಿಯ 'ಕಂಟ್ರೋಲ್ ರೂಂ' ಹಾಗೂ ಆಯಾ ಜಿಲ್ಲಾ ವರಿಷ್ಠಾಧಿಕಾರಿಗೆ ಮಾಹಿತಿ ಒದಗಿಸಬೇಕು. ಬಳಿಕ ತನಿಖಾಧಿಕಾರಿ ನೇಮಕ ಆಗಲಿದ್ದಾರೆ. ತನಿಖೆ ವೇಳೆ ಆರೋಪಿಗಳ ಬಂಧನಕ್ಕೆ ಅಗತ್ಯಬಿದ್ದರೆ ಹೆಚ್ಚಿನ ಸಿಬ್ಬಂದಿಯನ್ನೂ ತನಿಖಾಧಿಕಾರಿಗೆ ಒದಗಿಸಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ.

'ಪ್ರಕರಣ ದಾಖಲು, ತನಿಖೆ ಸೇರಿದಂತೆ ವಿವಿಧ ಪ್ರಕ್ರಿಯೆ ಪಾಲಿಸಲು ನಿರ್ಲಕ್ಷ್ಯ ವಹಿಸಿದ ಅಧಿಕಾರಿಯ ವಿರುದ್ಧವೂ ಕ್ರಮ ಆಗಲಿದೆ' ಎಂದು ಎಚ್ಚರಿಸಲಾಗಿದೆ.

ಎಸ್.ಸಿ/ಎಸ್.ಟಿ (ದೌರ್ಜನ್ಯ ತಡೆ) ಕಾಯ್ದೆ ಅಡಿ ಕಳೆದ ಐದು ವರ್ಷಗಳಲ್ಲಿ ದಾಖಲಾದ ಪ್ರಕರಣಗಳು, ಶಿಕ್ಷೆಯ ಪ್ರಮಾಣ

ವರ್ಷ	ವರದಿ	ಶಿಕ್ಷೆ	ತಿರಸ್ಕೃತ	ಶಿಕ್ಷೆಯ ಪ್ರಮಾಣ (ಶೇಕಡವಾರು)
2020	1,835	37	652	2.01
2021	2,129	46	597	2.16
2022	2,515	24	464	0.95
2023	2,553	16	217	0.62
2024	2,524	2	56	0.07

ಮಂಗಳಸೂತ್ರ ಸೇರಿ ಧಾರ್ಮಿಕ ಸಂಕೇತ ತೆಗೆಯಬೇಕೆಂಬ ಸೂಚನೆಗೆ ವಿರೋಧ

'ರೈಲ್ವೆ ಪರೀಕ್ಷೆ: ಜನಿವಾರ ಧರಿಸುವಂತಿಲ್ಲ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರೈಲ್ವೆ ಇಲಾಖೆಯ ನರ್ಸಿಂಗ್ ಸೂಪರಿಂಟೆಂಡೆಂಟ್ ಪರೀಕ್ಷೆ ಇದೇ 29ಕ್ಕೆ ನಿಗದಿ
- ಪರೀಕ್ಷಾ ಕೊಠಡಿ ಪ್ರವೇಶಕ್ಕೆ ಮಾರ್ಗಸೂಚಿ ಪ್ರಕಟ
- ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ಪರೀಕ್ಷೆ ನಡೆಸಲು ಡಿ.ಸಿಗೆ ಮನವಿ



ಮಂಗಳೂರು: ರೈಲ್ವೆ ನೇಮಕಾತಿ ಮಂಡಳಿಯು ಇಲಾಖೆಯ ನರ್ಸಿಂಗ್ ಸೂಪ ರಿಂಟೆಂಡೆಂಟ್ ಪರೀಕ್ಷೆಯನ್ನು ಇದೇ 29ರಂದು ಹಮ್ಮಿಕೊಂಡಿದೆ. ಈ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ತೆರಳುವಾಗ ಧಾರ್ಮಿಕ ಸಂಕೇತಗಳಾದ ಮಂಗಳಸೂತ್ರ, ಜನಿವಾರ ಮೊದಲಾವುಗಳನ್ನು ಧರಿಸುವಂತಿಲ್ಲ ಎಂದು ಪರೀಕ್ಷೆ ಕೊಠಡಿಯ ಪ್ರವೇಶಪತ್ರದಲ್ಲಿ ಉಲ್ಲೇಖಿಸಿರುವ ಮಾರ್ಗಸೂಚಿಯಲ್ಲಿ ಸೂಚನೆ ನೀಡಲಾಗಿದ್ದು, ಇದಕ್ಕೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ವಿರೋಧ ವ್ಯಕ್ತಪಡಿಸಿದೆ.

'ನಗರದ ಬೋಂದೆಲ್‌ನ ಮಹೇಲ್ ಶ್ರೀನಿವಾಸ್ ನಾಯಕ್ ಬೆಸೆಂಟ್ ವಿದ್ಯಾ ಕೇಂದ್ರದಲ್ಲಿ ಪರೀಕ್ಷೆ ನಡೆಯಲಿದೆ. ಈ ಪರೀಕ್ಷೆ ಬರೆಯಬೇಕಾದರೆ ಹಿಂದೂಗಳು ಅವರ ಧಾರ್ಮಿಕ ಚಿಹ್ನೆಗಳಾದ ಮಂಗಳಸೂತ್ರ, ಜನಿವಾರ ತೆಗೆಯಬೇಕೆಂದು ಸೂಚನೆ ನೀಡಿರುವುದು ಸರಿಯಲ್ಲ' ಎಂದು ವಿಶ್ವ ಹಿಂದೂ ಪರಿಷತ್‌ನ ವಿಭಾಗ ಪ್ರಚಾರ ಪ್ರಮುಖ್ ಪ್ರದೀಪ್ ಸರಿಪಲ್ಲ ತಿಳಿಸಿದ್ದಾರೆ.

'ರಾಜ್ಯದಲ್ಲಿ ಇತ್ತೀಚೆಗೆ ನಡೆದ ವೃತ್ತಿಪರ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯುವ ಹಿಂದೂ ಅಭ್ಯರ್ಥಿಗಳ ಪವಿತ್ರ ಜನಿವಾರವನ್ನು ಕಿತ್ತು ಹಾಕಿದ ಪ್ರಕರಣದಿಂದ ಹಿಂದೂಗಳ ಭಾವನೆಗೆ ಧಕ್ಕೆಯಾಗಿದೆ. ಇದು ಇಡೀ ದೇಶದ ಹಿಂದೂಗಳ ಆಕ್ರೋಶಕ್ಕೆ ಕಾರಣವಾಗಿತ್ತು. ಮುತ್ತೈದೆ ಹೆಣ್ಣುಮಗಳು ತಾಳಿ ಸರ ಕಳಚುವಂತೆ, ಸಿಂಧೂರ ಅಳಿಸುವಂತೆ ಮಾಡುವುದು, ಪವಿತ್ರ ಜನಿವಾರವನ್ನು ಕಿತ್ತುಹಾಕುವಂತೆ ಹೇಳುವುದರಿಂದ ಕೋಟ್ಯಂತರ ಹಿಂದೂಗಳ ಧಾರ್ಮಿಕ ಭಾವನೆಗೆ ನೋವುಂಟಾಗುತ್ತದೆ. ಹಿಂದೂ ಬಹುಸಂಖ್ಯಾತರಾಗಿರುವ ನಮ್ಮ ದೇಶದಲ್ಲಿ ಈ ರೀತಿಯ ಹಿಂದೂ ವಿರೋಧಿ ಧೋರಣೆ ಸಹಿಸಲು ಅಸಾಧ್ಯ. ಹಾಗಾಗಿ ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆಯಾಗದ ರೀತಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಕ್ರಮಕೈಗೊಳ್ಳಬೇಕು' ಎಂದು ಅವರು ಜಿಲ್ಲಾಧಿಕಾರಿಯವರನ್ನು ಕೋರಿದ್ದಾರೆ.

ವಿಎಚ್‌ಪಿಯ ದಕ್ಷಿಣ ಪ್ರಾಂತ ಕಾರ್ಯವಾಹ ಶರಣ್ ಪಂಪ್‌ವೆಲ್ ಅವರು ಫೇಸ್‌ಬುಕ್‌ನಲ್ಲಿ ಪರೀಕ್ಷೆಯ ಮಾರ್ಗಸೂಚಿಗಳನ್ನು ಹಂಚಿಕೊಂಡಿದ್ದು, ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರಿಗೆ ಟ್ಯಾಗ್ ಮಾಡಿ ಈ ಬಗ್ಗೆ ಕ್ರಮವಹಿಸುವಂತೆ ಒತ್ತಾಯಿಸಿದ್ದಾರೆ.

'ಶಾಸಕರ ಅಮಾನತು ರದ್ದು-ನಾನೊಬ್ಬನೇ ತೀರ್ಮಾನಿಸಲಾಗದು'

ಮಂಗಳೂರು: 'ವಿಧಾನ ಸಭೆಯಲ್ಲಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ ಬಿಜೆಪಿಯ 18 ಶಾಸಕರನ್ನು ಅಮಾನತು ಮಾಡಿರುವುದು ಸದನದ ತೀರ್ಮಾನ. ಆದ್ದರಿಂದ ಅವರ ಅಮಾನತು ಹಿಂಪಡೆಯುವ ವಿಚಾರದಲ್ಲೂ ನಾನೊಬ್ಬನೇ ತೀರ್ಮಾನ ಕೈಗೊಳ್ಳಲಾಗದು' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿ, 'ಪೀಠದ ಗೌರವ ಉಳಿಸಲು ಶಾಸಕರನ್ನು 6 ತಿಂಗಳು ಅಮಾನತು ಮಾಡಲಾಗಿದೆ. ಅವರಿಗೆ ತಪ್ಪಿನ ಅರಿವು ಆಗಬೇಕು. ಇದು ಅವರಿಗೆ ಕೊಟ್ಟಿರುವ ಶಿಕ್ಷೆಯಲ್ಲ. ಮುಂದೆ ಉತ್ತಮ ನಾಯಕರಾಗಿ ಬೆಳೆಯುವುದಕ್ಕೆ ಶಾಸಕರಿಗೆ ಕೊಟ್ಟಿರುವ ಸವಾಲು ಇದು. ಅಮಾನತು ಹಿಂಪಡೆಯುವ ವಿಚಾರದಲ್ಲಿ ಸಕಾರಾತ್ಮಕ ಧೋರಣೆ ಹೊಂದಿದ್ದೇವೆ' ಎಂದರು.

ಸಂಕ್ಷಿಪ್ತ ಸುದ್ದಿ

‘ಚಿತ್ರರಂಗದವರಿಂದ ಚಿಲ್ಲರೆ ಹೇಳಿಕೆ ಬೇಡ’

ಬೆಂಗಳೂರು: ಚಿತ್ರರಂಗದ ಕೆಲವರು ಚಿಲ್ಲರೆ ಹೇಳಿಕೆ ನೀಡುತ್ತಿದ್ದಾರೆ. ಅದನ್ನು ನಿಲ್ಲಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಕರ್ನಾಟಕ ಚಲನಚಿತ್ರ ವಾಣಿಜ್ಯ



ಮಂಡಳಿಯಲ್ಲಿ ಭಾನುವಾರ ಏರ್ಪಡಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಇತ್ತೀಚಿನ ದಿನಗಳಲ್ಲಿ ನಮ್ಮ ಕನ್ನಡ ಚಿತ್ರರಂಗಕ್ಕೆ ಒಂದು ಗೌರವ ಬಂದಿದೆ. ಅದನ್ನು ಕಾಪಾಡಿಕೊಂಡು ಹೋಗಬೇಕು. ಮಧ್ಯದಲ್ಲಿ ಕೆಲವರು ಚಿಲ್ಲರೆ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಚಿತ್ರರಂಗದಲ್ಲಿ ಇಲ್ಲದವರು, ನಿವೃತ್ತಿ ಹೊಂದಿದವರೆಲ್ಲ ಮಾತನಾಡಲು ಶುರು ಮಾಡಿದ್ದಾರೆ.

ಮಾತನಾಡುವವರೆಲ್ಲ ಮೊದಲು ಚಿತ್ರರಂಗವನ್ನು ಉಳಿಸಿ. ಚಿತ್ರಮಂದಿರಗಳನ್ನು ಕಟ್ಟಿ. ಹೊಸ ಸಿನಿಮಾ ಮಾಡಿ, ನಿರ್ದೇಶನ ಮಾಡಿ’ ಎಂದು ಅವರು ಹೇಳಿದರು. ‘ನಿರ್ಮಾಣ ಮಾಡಿದಾಗ ಸಿನಿಮಾ ಬೆಲೆ ಗೊತ್ತಾಗುತ್ತದೆ. ಅಂದಿನ ಚಿತ್ರರಂಗಕ್ಕೂ ಇಂದಿಗೂ ಬಹಳ ವ್ಯತ್ಯಾಸವಿದೆ. ಸರ್ಕಾರ ಚಿತ್ರರಂಗಕ್ಕೆ ಅಗತ್ಯ ಎಲ್ಲ ಸವಲತ್ತು ನೀಡಲು ಬದ್ಧವಾಗಿದೆ. ಸ್ಯಾಂಡಲ್‌ವುಡ್‌ಗೆ ಹೊಸ ಕಿರೀಟ ನೀಡಬೇಕೆಂಬ ಆಲೋಚನೆಯಿದೆ. ಅದಕ್ಕೆ ನಾವೆಲ್ಲ ಒಟ್ಟಾಗಿ ಕೆಲಸ ಮಾಡೋಣ. ಬ್ರ್ಯಾಂಡ್ ಬೆಂಗಳೂರಿ ಗಾಗಿ, ಚಿತ್ರರಂಗಕ್ಕೆ ಹೊಸ ರೂಪ ಕೊಡಲು ಕೆಲಸ ಮಾಡಿ’ ಎಂದು ಕರೆ ನೀಡಿದರು.

ರಿಕ್ಕಿ ರೈ ಮಲತಾಯಿ ಅನುರಾಧ ವಿಚಾರಣೆ

ರಾಮನಗರ: ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ನಡೆದ ಗುಂಡಿನ ದಾಳಿ ಪ್ರಕರಣದ ಎರಡನೇ ಆರೋಪಿ ಹಾಗೂ ಮುತ್ತಪ್ಪ ರೈ ಎರಡನೇ ಪತ್ನಿ ಅನುರಾಧ ಅವರನ್ನು ಬಿಡದಿ ಠಾಣೆ ಪೊಲೀಸರು ಭಾನುವಾರ ವಿಚಾರಣೆ ನಡೆಸಿದರು.



ಬೆಳಗ್ಗೆ 11 ಗಂಟೆ ಸುಮಾರಿಗೆ ಠಾಣೆಗೆ ಬಂದ ಅವರನ್ನು ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಅವರ ತಂಡ ಸತತ ಐದು ತಾಸು ಪ್ರಶ್ನಿಸಿತು.

ಠಾಣೆಯಿಂದ ಹೊರಬಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅನುರಾಧ, ‘ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಆದರೂ, ಯಾಕೆ ನನ್ನ ಮೇಲೆ ಆರೋಪ ಮಾಡಿ ದೂರು ಕೊಟ್ಟಿದ್ದಾರೊ ಗೊತ್ತಿಲ್ಲ. ವಿಚಾರಣೆ ಸಂದರ್ಭದಲ್ಲಿ ಪೊಲೀಸರಿಗೆ ಎಲ್ಲಾ ಮಾಹಿತಿ ನೀಡಿರುವೆ’ ಎಂದರು.

‘ರಿಕ್ಕಿ ಮತ್ತು ನನ್ನ ನಡುವೆ ಕೋರ್ಟ್‌ನಲ್ಲಿದ್ದ ಜಮೀನು ವ್ಯಾಜ್ಯ ಪ್ರಕರಣ ರಾಜಿಯಾಗಿ ಸುಖಾಂತ್ಯ ಕಂಡಿದೆ. ಕಳೆದ ಅಕ್ಟೋಬರ್ ನಲ್ಲಿ ಕೋರ್ಟ್‌ಗೆ ಸಹಿ ಹಾಕಲು ಬಂದಾಗಷ್ಟೇ ರಿಕ್ಕಿ ಅವರನ್ನು ನಾನು ನೋಡಿದ್ದೆ. ಉಳಿದಂತೆ ನನಗೂ ಮತ್ತು ಅವರಿಗೂ ಯಾವುದೇ ಸಂಪರ್ಕವಿಲ್ಲ’ ಎಂದು ತಿಳಿಸಿದರು.

ಮುತ್ತಪ್ಪ ರೈ ಮೊದಲ ಪತ್ನಿ ರೇಖಾ 2013ರಲ್ಲಿ ನಿಧನರಾಗಿದ್ದರು. ಬಳಿಕ, ಮುತ್ತಪ್ಪ ರೈ ಬೆಂಗಳೂರಿನಲ್ಲಿ ನೆಲಸಿದ್ದ ಸಕಲೇಶಪುರ ಮೂಲದ ಅನುರಾಧ ಅವರನ್ನು 2016ರಲ್ಲಿ ಮದುವೆಯಾಗಿದ್ದರು. 2020ರಲ್ಲಿ ರೈ ತೀರಿಕೊಂಡ ಬಳಿಕ ಆಸ್ತಿ ವಿಚಾರಕ್ಕಾಗಿ ರೈ ಪುತ್ರರು ಹಾಗೂ ಮಲತಾಯಿ ಅನುರಾಧ ನಡುವೆ ಜಗಳ ಆರಂಭವಾಗಿತ್ತು. ಅನುರಾಧ ಕೋರ್ಟ್ ಮೆಟ್ಟಲೇರಿದ್ದರು.

4ನೇ ಅಧಿವೇಶನ ಜೂನ್ 7ರಿಂದ

ದಾವಣಗೆರೆ: ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ 4ನೇ ರಾಜ್ಯ ಮಟ್ಟದ ಅಧಿವೇಶನ ವನ್ನು ಜೂನ್ 7 ಮತ್ತು 8 ರಂದು ನಗರದ ಗುಂಡಿ ಮಹದೇವಪ್ಪ ಕಲ್ಯಾಣಮಂಟಪದಲ್ಲಿ ಹಮ್ಮಿಕೊಳ್ಳ ಲಾಗಿದೆ. ಬಾಗಲಕೋಟೆಯ ಸಾಹಿತಿ ಎಸ್‌.ಜಿ. ಕೋಟಿ, ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.



ಎಸ್‌.ಜಿ.ಕೋಟಿ

ಡೈಲಿ ಎಕ್ಸ್‌ಪ್ರೆಸ್ ರೈಲು: ವೇಗ ಹೆಚ್ಚಳ

ಬೆಂಗಳೂರು: ಕೆಎಸ್‌ಆರ್ ಬೆಂಗಳೂರು– ಧಾರವಾಡ ಸಿದ್ಧಗಂಗಾ– ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್ ಪ್ರೆಸ್ ಚಿಕ್ಕಮಗಳೂರು–ಯಶವಂತಪುರ ಡೈಲಿ ಎಕ್ಸ್‌ಪ್ರೆಸ್ ರೈಲುಗಳ ವೇಗವನ್ನು ಹೆಚ್ಚಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಈ ಬದಲಾವಣೆಯು ಮೇ 1ರಿಂದ ಜಾರಿಗೆ ಬರಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ವೇಳಾಪಟ್ಟಿಯಲ್ಲಿ ಬದಲಾವಣೆ: ಹಾವೇರಿ ಮತ್ತು ಬ್ಯಾಡಗಿ ನಿಲ್ದಾಣಗಳ ನಡುವೆ ರೈಲು ಹಳಿಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಬೆಳಗಾವಿ – ಮೈಸೂರು ವಿಶ್ವಮಾನವ ದೈನಂದಿನ ಎಕ್ಸ್ ಪ್ರೆಸ್ ರೈಲಿನ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ.

ಏಪ್ರಿಲ್ 28, 29, ಮೇ 1, 2, 4, 5, 6, 8, 9, 11, 12, 13, 15 ಮತ್ತು 16ರಂದು ಈ ರೈಲು ಬೆಳಗಾವಿಯಿಂದ ನಿಗದಿತ ನಿರ್ಗಮನ ಸಮಯವಾದ 6.15ರ ಬದಲು 7.15ಕ್ಕೆ ಹೊರಡಲಿದೆ. ಈ ದಿನಗಳಲ್ಲಿ ಮಾರ್ಗಮಧ್ಯೆ ರೈಲನ್ನು ಸುಮಾರು 45 ನಿಮಿಷ ನಿಯಂತ್ರಿಸಲಾಗುವುದು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮಾಹಿತಿ ನೀಡದಿರುವುದು, ಮೌಢ್ಯ: ಸಾಕಾರವಾಗದ ಅಂಗಾಂಗ ದಾನ ಪ್ರತಿಜ್ಞೆ

ಅಂಗಾಂಗ ದಾನಕ್ಕೆ ಕುಟುಂಬಸ್ಥರೇ ಅಡ್ಡಿ

• ವರುಣ ಹೆಗಡೆ

ಬೆಂಗಳೂರು: ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಗಳ ಅಂಗಾಂಗ ದಾನಕ್ಕೆ ಹೆಚ್ಚಿನ ಕುಟುಂಬಗಳು ಆಸಕ್ತಿ ತೋರುತ್ತಿಲ್ಲ. ಇದರಿಂದಾಗಿ ಅಂಗಾಂಗ ದಾನಕ್ಕೆ ಮೃತ ವ್ಯಕ್ತಿ ಹೆಸರು ನೋಂದಾಯಿಸಿದ್ದರೂ ಸಾವಿನ ಬಳಿಕ ಇನ್ನಷ್ಟು ಜೀವಗಳಿಗೆ ನೆರವಾಗುವ ಪ್ರತಿಜ್ಞೆ ಸಾಕಾರವಾಗುತ್ತಿಲ್ಲ.

ರಾಜ್ಯದಲ್ಲಿ ಆರೋಗ್ಯ ಇಲಾಖೆಯ ಜತೆಗೆ ವಿವಿಧ ಸರ್ಕಾರೇತರ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು ಕೂಡ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಅಂಗಾಂಗ ದಾನದ ಪ್ರಕ್ರಿಯೆ ಪ್ರೋತ್ಸಾಹಿಸಲು ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (ನೊಟ್ಟೊ) ಹಾಗೂ ರಾಜ್ಯ ಮಟ್ಟದಲ್ಲಿ ಜೀವಸಾರ್ಥಕತೆ ಸಂಸ್ಥೆ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ಅಂಗಾಂಗ ದಾನದ ಬಗ್ಗೆ ಪ್ರತಿಜ್ಞೆ ಕೈಗೊಳ್ಳುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ನೊಟ್ಟೊ ಅಡಿ 36 ಸಾವಿರಕ್ಕೂ ಅಧಿಕ ಮಂದಿ ಅಂಗಾಂಗ ದಾನದ ಪ್ರತಿಜ್ಞೆ ಕೈಗೊಂಡರೆ, ಜೀವಸಾರ್ಥಕತೆಯಡಿ 43 ಸಾವಿರಕ್ಕೂ ಅಧಿಕ ಮಂದಿ ಹೆಸರು ನೋಂದಾಯಿಸಿದ್ದಾರೆ. ಆದರೆ, ವ್ಯಕ್ತಿ ಮೃತಪಟ್ಟ ಸಂದರ್ಭದಲ್ಲಿ ನಿಗದಿತ ವೈದ್ಯಕೀಯ ಸಂಸ್ಥೆಗಳಿಗೆ ಕುಟುಂಬಸ್ಥರು ಮಾಹಿತಿ ನೀಡದಿರುವುದು, ಮೂಢನಂಬಿಕೆ, ಅರಿವಿನ ಕೊರತೆ ಸೇರಿ ವಿವಿಧ ಕಾರಣದಿಂದ ಅಂಗಾಂಗ ದಾನ ಸಾಧ್ಯವಾಗುತ್ತಿಲ್ಲ.



ವರ್ಷವಾರು ಅಂಗಾಂಗ ದಾನ

ವರ್ಷ	ದಾನಿಗಳು	ಅಂಗಾಂಗ	ಅಂಗಾಂಶ
2021	70	187	90
2022	151	415	348
2023	178	469	393
2024	162	457	339
2025	58	165	128

ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಇದು ಕಾನೂನು ಬದ್ಧವಾಗಿದೆ. ರಾಜ್ಯದಲ್ಲಿ 2007ರಿಂದ ಜೀವಸಾರ್ಥಕತೆಯಡಿ ಅಂಗಾಂಗ ದಾನ ಹಾಗೂ ಅಂಗಾಂಗ ಕಸಿಗೆ ಉತ್ತೇಜನ ನೀಡಲಾಗುತ್ತಿದೆ. ರಾಜ್ಯದಲ್ಲಿ ಐದು ವರ್ಷಗಳಲ್ಲಿ 619 ವ್ಯಕ್ತಿಗಳಿಂದ ಮಾತ್ರ ಜೀವಸಾರ್ಥಕತೆಯಡಿ ಅಂಗಾಂಗಗಳನ್ನು ಸ್ವೀಕರಿಸಲಾಗಿದೆ.

ದಾನಕ್ಕೆ ಉತ್ತೇಜನ: ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ, ಅಂಗಾಂಗಕ್ಕಾಗಿ ಎದುರು ನೋಡುತ್ತಿರುವ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳ ಆಗುತ್ತಿದೆ. ಇದರಿಂದಾಗಿ ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆಯಿಂದ ಚೇತರಿಸಿಕೊಳ್ಳದೆ ಮೃತಪಟ್ಟವರ ಕುಟುಂಬಸ್ಥರಿಗೆ ವೈದ್ಯರು ಅಂಗಾಂಗ ದಾನದ ಬಗ್ಗೆ ಮನವರಿಕೆ ಮಾಡಿಸುತ್ತಿದ್ದಾರೆ. ಮೃತರಿಂದ ಪಡೆದ ಅಂಗಾಂಗಗಳನ್ನು ಜೀವಸಾರ್ಥಕತೆಯಡಿ ಹೆಸರು ನೋಂದಾಯಿಸಿದವರಿಗೆ ಕಸಿ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರವು ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದ್ದು, ಅಂಗಾಂಗ ದಾನಿಗಳ ಕುಟುಂಬಸ್ಥರಿಗೆ ರಾಜ್ಯ ಸರ್ಕಾರದ ವತಿಯಿಂದ ಪ್ರಶಂಸನಾ ಪತ್ರಗಳನ್ನು ನೀಡಲಾಗುತ್ತಿದೆ. ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಗೌರವಿಸಲಾಗುತ್ತಿದೆ.

‘ಅಂಗಾಂಗ ದಾನದ ಬಗ್ಗೆ ಪ್ರತಿಜ್ಞೆ ಕೈಗೊಳ್ಳುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಆದರೆ, ಅಂಗಾಂಗ ದಾನ ಪ್ರಕ್ರಿಯೆ ಗಣನೀಯವಾಗಿ ಏರಿಕೆಯಾಗಿಲ್ಲ. ಸಾರ್ವಜನಿಕರಲ್ಲಿ ಇನ್ನಷ್ಟು ಅರಿವು ಮೂಡಬೇಕಿದೆ. ಮಾಹಿತಿ ಕೊರತೆ, ದೇಹ ವಿರೂಪಗೊಳ್ಳುವ ಬಗ್ಗೆ ತಪ್ಪು ಕಲ್ಪನೆ, ಮೂಢನಂಬಿಕೆ ಸೇರಿ ವಿವಿಧ ಕಾರಣದಿಂದ ಕುಟುಂಬಸ್ಥರು ಹಿಂದೇಟು ಹಾಕುತ್ತಾರೆ. ಇಷ್ಟಾಗಿಯೂ ಇತ್ತೀಚಿನ ವರ್ಷಗಳಲ್ಲಿ ಅಂಗಾಂಗ ದಾನ ಪ್ರಕ್ರಿಯೆ ಏರಿಕೆ ಕಂಡಿದೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಅಂಕಿ ಅಂಶಗಳು

36,592 ನೊಟ್ಟೊ ಅಡಿ ರಾಜ್ಯದಲ್ಲಿ ಅಂಗಾಂಗ ದಾನಕ್ಕೆ ನೋಂದಾಯಿಸಿದವರು

43,280 ಜೀವಸಾರ್ಥಕತೆಯಡಿ ಅಂಗಾಂಗ ದಾನಕ್ಕೆ ನೋಂದಾಯಿಸಿದವರು

70 ರಾಜ್ಯದಲ್ಲಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ನೋಂದಾಯಿಸಲ್ಪಟ್ಟ ಆಸ್ಪತ್ರೆಗಳು

ಹಲವು ಮಂದಿಗೆ ನೆರವು

ಜೀವಸಾರ್ಥಕತೆ ಸಂಸ್ಥೆ ಪ್ರಕಾರ, ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಶ್ವಾಸಕೋಶ, ಯಕೃತ್ತು, ಸಣ್ಣ ಕರುಳು ಹಾಗೂ ಮೇದೋಜೀರಕ ಗ್ರಂಥಿ ದಾನದ ಮೂಲಕ ಎಂಟು ಜೀವಗಳಿಗೆ, ಹೃದಯದ ಕವಾಟ, ಚರ್ಮ, ಕಣ್ಣುಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ ಹಲವು ಮಂದಿಗೆ ನೆರವಾಗಬಹುದು. ಅಂಗಾಂಗ ದಾನಕ್ಕೆ ಯಾವುದೇ ವಯಸ್ಸಿನ ಮಿತಿಯಿಲ್ಲ.



ಮನೆಗೆ ಬಂದ ಮೊಸಳೆ..

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಸುಟ್ಟಟ್ಟಿ ಗ್ರಾಮದಲ್ಲಿ ಭಾನುವಾರ ಅಶೋಕ ಆಲಗೂರ ಅವರ ತೋಟದ ಮನೆ ಆವರಣಕ್ಕೆ 15 ಅಡಿ ಉದ್ದದ ಮೊಸಳೆ ಬಂತು. ಅದನ್ನು ಹಿಡಿದ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಿದರು


ಪರಿಷ್ಕೃತ ಕೀ ಉತ್ತರ ಪ್ರಕಟಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಿಇಟಿ: ಒಂದು ಪ್ರಶ್ನೆಗೆ ಸಿಗಲಿದೆ ಕೃಪಾಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಪ್ರಸಕ್ತ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಎಲ್ಲ ನಾಲ್ಕು ವಿಷಯಗಳ 16 ಆವೃತ್ತಿಗಳ (ವರ್ಷನ್) ಪರಿಷ್ಕೃತ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಕಟಿಸಿದೆ.

‘ಈ ಹಿಂದೆ ಪ್ರಕಟಿಸಿದ್ದ ಕೀ ಉತ್ತರಗಳಿಗೆ ಬಂದ ಆಕ್ಷೇಪಣೆಗಳನ್ನು ವಿಷಯ ತಜ್ಞರ ಸಮಿತಿ ಪರಿಶೀಲಿಸಿ, ಕೊಟ್ಟ ವರದಿ ಪ್ರಕಾರ ಪರಿಷ್ಕೃತ ಕೀ ಉತ್ತರಗಳನ್ನು ಪ್ರಕಟಿಸಲಾಗಿದೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.



‘ಭೌತವಿಜ್ಞಾನ ವಿಷಯದ ಪರೀಕ್ಷೆಯಲ್ಲಿ ಒಂದು ಪ್ರಶ್ನೆಗೆ ಕೃಪಾಂಕ ನೀಡಲಾಗಿದೆ. ರಸಾಯನ ವಿಜ್ಞಾನದಲ್ಲಿ ಎರಡು ಮತ್ತು ಜೀವವಿಜ್ಞಾನದಲ್ಲಿ ಒಂದು ಪ್ರಶ್ನೆಗೆ ಈ ಹಿಂದೆ ಪ್ರಕಟಿಸಿದ್ದ ಉತ್ತರದ ಜತೆಗೆ ಮತ್ತೊಂದು ಉತ್ತರ ಕೂಡ ಸರಿ ಇದೆ ಎಂದು ಸಮಿತಿ ಹೇಳಿದೆ. ಗಣಿತ ವಿಷಯದಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಅವರು ವಿವರಿಸಿದ್ದಾರೆ.

ಕನ್ನಡ ಭಾಷಾ ಫಲಿತಾಂಶ ಪ್ರಕಟ: ಸಿಇಟಿ ಸಂಬಂಧ ಹೊರನಾಡು ಮತ್ತು ಗಡಿನಾಡು ಅಭ್ಯರ್ಥಿಗಳಿಗೆ ನಡೆಸಲಾದ ಕನ್ನಡ ಭಾಷಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದೂ ಪ್ರಸನ್ನ ತಿಳಿಸಿದ್ದಾರೆ.

ಸಿಇಟಿ ಮೂಲಕ ಸೀಟು ಪಡೆಯಬೇಕಾದರೆ ಅಭ್ಯರ್ಥಿಯು ಈ ಪರೀಕ್ಷೆಯಲ್ಲಿ ಕನಿಷ್ಠ 12 ಅಂಕ ಪಡೆದಿರಬೇಕು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಭೌತವಿಜ್ಞಾನ, ರಸಾಯನವಿಜ್ಞಾನ ಸರಾಸರಿ ಅಂಕ ಆಧರಿಸಿ ಗಣಿತಕ್ಕೆ ಅಂಕ ಕೊಡಿ’

ಬೀದರ್: ‘ನಾನು ಬರೆದ ಕೆ–ಸಿಇಟಿ ಭೌತವಿಜ್ಞಾನ ಮತ್ತು ರಸಾಯನವಿಜ್ಞಾನ ವಿಷಯಗಳ ಸರಾಸರಿ ಅಂಕಗಳನ್ನು ಆಧರಿಸಿ ಗಣಿತ ವಿಷಯಕ್ಕೆ ಅಂಕ ನೀಡಬೇಕು’ ಎಂದು ವಿದ್ಯಾರ್ಥಿ ಸುಚಿವ್ರತ್ ಕುಲಕರ್ಣಿ ಮನವಿ ಮಾಡಿದ್ದಾರೆ.

ಈ ಸಂಬಂಧ ಅವರು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರಿಗೆ ಪತ್ರ ಬರೆದು ಕೋರಿದ್ದಾರೆ. ನಾನು, ನನ್ನ ಪೋಷಕರ ಜೊತೆಗೆ ಈ ವಿಚಾರವಾಗಿ ಸಮಾಲೋಚಿಸಿದ ನಂತರ ಈ ತೀರ್ಮಾನಕ್ಕೆ ಬಂದಿರುವೆ. ಸರ್ಕಾರ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಮಾಡಿದ್ದಾರೆ.



ಸುಚಿವ್ರತ್

ಏ. 17ರಂದು ನಗರದ ಸಾಯಿಸ್ಫೂರ್ತಿ ಖಾಸಗಿ ಕಾಲೇಜಿನಲ್ಲಿ ಸಿಇಟಿ ಗಣಿತ ವಿಷಯದ ಪರೀಕ್ಷೆ ಬರೆಯಲು ತೆರಳಿದ್ದ ಸುಚಿವ್ರತ್ ಅವರಿಗೆ ಜನಿವಾರ ಧರಿಸಿದ ಕಾರಣಕ್ಕಾಗಿ ಅಲ್ಲಿನ ಸಿಬ್ಬಂದಿ ಪರೀಕ್ಷೆಗೆ ಅನುವು ಮಾಡಿಕೊಟ್ಟಿರಲಿಲ್ಲ. ಬಳಿಕ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಕಾಲೇಜಿನ ಪ್ರಾಂಶುಪಾಲ ಹಾಗೂ ಅಲ್ಲಿನ ಸಿಬ್ಬಂದಿಯನ್ನು ವಜಾಗೊಳಿಸಿ ಕ್ರಮ ಕೈಗೊಂಡಿತು. ಬಳಿಕ ಉನ್ನತ ಶಿಕ್ಷಣ ಸಚಿವರು, ಸುಚಿವ್ರತ್ ಅವರಿಗೆ ಪತ್ರ ಬರೆದು, ಸಿಇಟಿ ಗಣಿತ ವಿಷಯದ ಪರೀಕ್ಷೆ ಪುನಃ ಬರೆಯಬಹುದು ಅಥವಾ ಈಗಾಗಲೇ ಬರೆದಿರುವ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳ ಸರಾಸರಿ ಅಂಕಗಳನ್ನು ಆಧರಿಸಿ ಗಣಿತ ವಿಷಯಕ್ಕೆ ಅಂಕ ನೀಡಲಾಗುವುದು. ಈ ಕುರಿತು ನಿರ್ಧಾರ ತಿಳಿಸಿದರೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದ್ದರು.

ಆದಕಾರಣ ಸುಚಿವ್ರತ್ ಸರ್ಕಾರಕ್ಕೆ ಪತ್ರ ಬರೆದು ತಮ್ಮ ನಿರ್ಧಾರ ತಿಳಿಸಿದ್ದಾರೆ.

ಪ್ರತ್ಯೇಕವಾಗಿ ಬಸವ ಜಯಂತಿ, ರೇಣುಕಾಚಾರ್ಯ ಜಯಂತಿ: ಸೂಚನೆ

ವಿರೋಧಕ್ಕೆ ಮಣಿದ ವೀರಶೈವ ಲಿಂಗಾಯತ ಮಹಾಸಭಾ

ಪ್ರಜಾವಾಣಿ ವಾರ್ತೆ

ಬೀದರ್: ಬಸವ ಜಯಂತಿಯೊಂದಿಗೆ ಪಂಚಾಚಾರ್ಯರ ಯುಗಮಾನೋತ್ಸವ ಆಚರಿಸಬೇಕೆಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಘಟಕ ಹೊರಡಿಸಿದ್ದ ಸುತ್ತೋಲೆಯನ್ನು ಹಿಂಪಡೆಯಬೇಕೆಂದು ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಭಾನುವಾರ ಸೂಚಿಸಿದ್ದಾರೆ.

ಈ ಹಿಂದಿನಂತೆ ಬಸವ ಜಯಂತಿ, ರೇಣುಕಾಚಾರ್ಯರು ಹಾಗೂ ಇತರರ ಜಯಂತಿಯನ್ನು ಪ್ರತ್ಯೇಕವಾಗಿ ಆಚರಿಸಬೇಕೆಂದು ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳಿಗೆ ಸೂಚನೆ ಕೊಟ್ಟಿದ್ದಾರೆ ಎಂದು ರಾಜ್ಯ ಘಟಕದ ಕಾರ್ಯದರ್ಶಿ ಎಚ್‌.ಎಂ. ರೇಣುಕಪ್ರಸನ್ನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಈ ಸಂಬಂಧ ಉದ್ಭವಿಸಿರುವ ವಿವಾದವನ್ನು ಇಲ್ಲಿಗೆ ಕೊನೆಗೊಳಿಸಬೇಕು. ಸಮಾಜದ ಏಕತೆ ಪ್ರದರ್ಶಿಸಬೇಕು. ವೀರಶೈವ ಲಿಂಗಾಯತರ ಒಗ್ಗಟ್ಟಿಗೆ ಭಂಗ ಬರಬಾರದು. ಸಮಾಜದ ಒಗ್ಗಟ್ಟು ಮತ್ತು ಸಾಮರಸ್ಯ ಕಾಪಾಡುವ ದೃಷ್ಟಿಯಿಂದ ಮಹಾಸಭಾ ರಾಜ್ಯ ಘಟಕ ಹೊರಡಿಸಿರುವ ಸುತ್ತೋಲೆ ಹಿಂಪಡೆಯಲು ಶಾಮನೂರು ಶಿವಶಂಕರಪ್ಪ ಸೂಚಿಸಿದ್ದಾರೆ’ ಎಂದು ತಿಳಿಸಿದ್ದಾರೆ.



ಬಸವಣ್ಣ ರೇಣುಕಾಚಾರ್ಯ

ಮಹಾಸಭಾ ರಾಜ್ಯ ಘಟಕವು ಬಸವ ಜಯಂತಿಯೊಂದಿಗೆ ಪಂಚಾಚಾರ್ಯರ ಯುಗಮಾನೋತ್ಸವ ಆಚರಿಸಬೇಕೆಂದು ಹೊರಡಿಸಿದ್ದ ಸುತ್ತೋಲೆ ಹಿಂಪಡೆಯಬೇಕೆಂದು ಆಗ್ರಹಿಸಿ ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಸ್ವಾಮೀಜಿಗಳು, ಬಸವಪರ ಸಂಘಟನೆಗಳವರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿ, ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಭಾವಚಿತ್ರಕ್ಕೆ ಕಪ್ಪು ಮಸಿ ಬಳಿದು ಪ್ರತಿಭಟನೆ ನಡೆಸಿದ್ದರು. ಆನಂತರ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆದ ಸಚಿವ ಈಶ್ವರ ಬಿ. ಖಂಡ್ರೆಯವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದರು.

‘ಈ ವಿಷಯವನ್ನು ಶಾಮನೂರು ಶಿವಶಂಕರಪ್ಪ ಅವರೊಂದಿಗೆ ಚರ್ಚಿಸಿ, ಸುತ್ತೋಲೆ ಹಿಂಪಡೆಯಲು ಮನವಿ ಮಾಡುವೆ’ ಎಂದು ಆಶ್ವಾಸನೆ ನೀಡಿದ್ದರು. ಅದರ ಬೆನ್ನಲ್ಲೇ ಶಾಮನೂರು ಈ ಸೂಚನೆ ನೀಡಿದ್ದಾರೆ.

ಈಶ್ವರ ಖಂಡ್ರೆ ಮಧ್ಯಸ್ಥಿಕೆ ವಹಿಸಿ, ವಿವಾದ ಇತ್ಯರ್ಥಗೊಳಿಸಿ, ಬಸವ ಭಕ್ತರ ಭಾವನೆಗಳಿಗೆ ಸ್ಪಂದಿಸಿರುವುದು ಖುಷಿ ತಂದಿದೆ. ಇದಕ್ಕೆ ಬಸವ ಭಕ್ತರು ಕೃತಜ್ಞರಾಗಿದ್ದಾರೆ ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಜಾಗತಿಕ ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಉಪಾಧ್ಯಕ್ಷ ಬಸವರಾಜ ಧನ್ನೂರ ಹಾಗೂ ಭಾರತೀಯ ಬಸವ ಬಳಗದ ಅಧ್ಯಕ್ಷ ಬಾಬು ವಾಲಿ ತಿಳಿಸಿದ್ದಾರೆ.

ಲಿಂಗಸುಗೂರಿನಲ್ಲಿ ಮರ್ಯಾದೆಗೇಡು ಹತ್ಯೆ ಪ್ರಕರಣ

ಮಗಳ ಕೊಂದು ನದಿಗೆ ಎಸೆದಿದ್ದ ತಂದೆ

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಬೇರೆ ಜಾತಿಗೆ ಸೇರಿದ ಯುವಕನನ್ನು ಪ್ರೀತಿಸಿದ ಅಪ್ರಾಪ್ತ ವಯಸ್ಸಿನ ಮಗಳನ್ನು ತಂದೆಯೇ ಕೊಲೆ ಮಾಡಿ ಕೃಷ್ಣಾ ನದಿಯಲ್ಲಿ ಎಸೆದಿದ್ದ ಪ್ರಕರಣ ಈಚೆಗೆ ಬಹಿರಂಗವಾಗಿದೆ.



ತಾಲ್ಲೂಕಿನ ಹಂಚಿನಾಳ ಗ್ರಾಮದ ರೇಣುಕಾ (17) ಕೊಲೆಯಾದವಳು. ಆಕೆಯ ತಂದೆ ಲಕ್ಕಪ್ಪ ಕಂಬಳಿ ಕೊಲೆ ಮಾಡಿದ್ದಾಗಿ ಪೊಲೀಸರ ಎದುರು ಒಪ್ಪಿಕೊಂಡಿದ್ದಾನೆ. ಕುರುಬ ಸಮುದಾಯಕ್ಕೆ ಸೇರಿದ ರೇಣುಕಾ ಅದೇ ಗ್ರಾಮದ ವಾಲ್ಮೀಕಿ ಸಮುದಾಯದ ಹನುಮಂತ ಎನ್ನುವ ಯುವಕನೊಂದಿಗೆ ಸಲುಗೆಯಿಂದ ಇದ್ದಳು. ಇಬ್ಬರೂ ಮನೆ ಬಿಟ್ಟು ಹೋಗಿದ್ದರು.

ಲಕ್ಕಪ್ಪ 2023ರಲ್ಲಿ ಹನುಮಂತನ ವಿರುದ್ಧ ಲಿಂಗಸುಗೂರು ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದ. ಪೊಲೀಸರು ಹನುಮಂತ ನನ್ನು ಬಂಧಿಸಿದ್ದರು.

ಮೂರು ತಿಂಗಳ ನಂತರ ಹನುಮಂತ ಜೈಲಿನಿಂದ ಬಿಡುಗಡೆಯಾದ ಮೇಲೂ ರೇಣುಕಾಳೊಂದಿಗೆ ಸಲುಗೆಯಿಂದ ಇದ್ದ. 18 ವರ್ಷ ಪೂರ್ತಿಯಾದ ಮೇಲೆ ತಾನು ಹನುಮಂತನೊಂದಿಗೆ ಹೋಗುತ್ತೇನೆಂದು ರೇಣುಕಾ ಪದೇ ಪದೇ ಹೇಳುತ್ತಿದ್ದಳು. ಇದನ್ನು ಲಕ್ಕಪ್ಪನಿಗೆ ಸಹಿಸಿ ಕೊಳ್ಳಲಾಗುತ್ತಿರಲಿಲ್ಲ.

2024ರ ಸೆ.29ರಂದು ಹಂಚಿನಾಳ ಗ್ರಾಮದಲ್ಲಿನ ತೋಟಕ್ಕೆ ಮಗಳನ್ನು ಕರೆದುಕೊಂಡು ಹೋದ ಲಕ್ಕಪ್ಪ ಹನುಮಂತನೊಂದಿಗೆ ಓಡಾಡದಂತೆ ಬುದ್ಧಿ ಹೇಳಿದ್ದ. ಆದರೆ ಮಗಳು ಆತನನ್ನೇ ಮದುವೆಯಾಗುವುದಾಗಿ ಹಟ ಹಿಡಿದಿದ್ದಳು.

ಇದರಿಂದ ರೊಚ್ಚಿಗೆದ್ದ ಲಕ್ಕಪ್ಪ ಕೊಲೆ ಮಾಡಿ ಮಗಳ ಶವವನ್ನು ಶೀಲಹಳ್ಳಿ ಸೇತುವೆ ಹತ್ತಿರ ಇರುವ ಕೃಷ್ಣಾ ನದಿಯಲ್ಲಿ ಎಸೆದಿದ್ದ.

ಬೆಳಕಿಗೆ ಬಂದಿದ್ದು ಹೇಗೆ?: ಆದರೆ 2023ರಲ್ಲಿ ದಾಖಲಿಸಲಾದ ಪೋಕ್ಸೊ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ಮುಂದುವರಿದಿತ್ತು. ಬಾಲಕಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಂತೆ ನ್ಯಾಯಾಧೀಶರು ಆದೇಶ ನೀಡಿದ್ದರು.

ಲಕ್ಕಪ್ಪ ಎರಡು ಮೂರು ಬಾರಿ ಸುಳ್ಳು ಹೇಳಿ ತಪ್ಪಿಸಿಕೊಂಡಿದ್ದ. ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಲಕ್ಕಪ್ಪ ಮಗಳನ್ನು ತಾನೇ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಲಿಂಗಸುಗೂರು ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಕಸ್ತೂರಿರಂಗನ್ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ನಿಧನರಾದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ(ಇಸ್ರೊ) ಮಾಜಿ ಅಧ್ಯಕ್ಷ ಕೆ. ಕಸ್ತೂರಿರಂಗನ್ ಅವರ ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ 2.30ರ ವೇಳೆಗೆ ಹೆಬ್ಬಾಳದ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಇದಕ್ಕೂ ಮುನ್ನ ಕಸ್ತೂರಿರಂಗನ್ ಅವರ ಪಾರ್ಥಿವ ಶರೀರವನ್ನು ಸದಾಶಿವನಗರದ ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಆವರಣದಲ್ಲಿ ಬೆಳಿಗ್ಗೆ 9ರಿಂದ 12ರ ವರೆಗೆ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್‌.ಸಿ. ಮಹದೇವಪ್ಪ, ಬೋಸರಾಜು, ಜಮೀರ್ ಅಹಮದ್ ಖಾನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಸಿ.ಎನ್. ಅಶ್ವತ್ಥ ನಾರಾಯಣ ಸೇರಿ ಹಲವರು ಅಂತಿಮ ನಮನ ಸಲ್ಲಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಸ್ರೊ ಮಾಜಿ ಅಧ್ಯಕ್ಷ ಕೆ.ಕಸ್ತೂರಿರಂಗನ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು

ಶಿಕ್ಷಣ ತಜ್ಞ ಎಂ.ಕೆ. ಶ್ರೀಧರ್, ಇಸ್ರೊ ಸಂಸ್ಥೆಯ ಹಾಲಿ ಹಾಗೂ ಮಾಜಿ ವಿಜ್ಞಾನಿಗಳು, ವಿವಿಧ ಕ್ಷೇತ್ರಗಳಲ್ಲಿನ ಒಡನಾಡಿಗಳು ಅಂತಿಮ ದರ್ಶನ ಪಡೆದರು.

ಪಾರ್ಥಿವ ಶರೀರದ ಮೇಲೆ ತ್ರಿವರ್ಣ ಧ್ವಜವನ್ನು ಹೊದಿಸಲಾಯಿತು. ಪೊಲೀಸರು ಗೌರವಾರ್ಥ ಮೂರು ಸುತ್ತು ಕುಶಾಲು ತೋಪು ಹಾರಿಸಿದರು. ನಂತರ ಪಾರ್ಥಿವ ಶರೀರವನ್ನು ಹೆಬ್ಬಾಳದ ಚಿತಾಗಾರಕ್ಕೆ ಕೊಂಡೊಯ್ದು, ಅಂತಿಮ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಪುತ್ರರಾದ ಸಂಜಯ್ ಮತ್ತು ರಾಜೇಶ್ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಅಲ್ಪಸಂಖ್ಯಾತರ ವಸತಿ ಶಾಲೆ ಪ್ರವೇಶಕ್ಕೆ ಬೇಡಿಕೆ

ಬೆಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಡಿಯ ವಸತಿ ಶಾಲೆಗಳಲ್ಲಿ ಒಟ್ಟು 11,330 ಸೀಟುಗಳು ಲಭ್ಯವಿದ್ದರೆ, ಪ್ರವೇಶಕ್ಕಾಗಿ 56,424 ಅರ್ಜಿಗಳು ಸಲ್ಲಿಕೆಯಾಗಿವೆ.

‘ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾಕ್ಟರ್ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಮುಸ್ಲಿಂ ವಸತಿ ಶಾಲೆಗಳ ಪ್ರವೇಶಕ್ಕೆ ಈಚಿನ ವರ್ಷಗಳಲ್ಲಿ ಬೇಡಿಕೆ ಹೆಚ್ಚಾಗಿದೆ. ರಾಜ್ಯದಲ್ಲಿರುವ 134 ಶಾಲೆಗಳೂ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ತೋರಿವೆ’ ಎಂದು ಅಲ್ಪ ಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ನಿರ್ದೇಶಕ ಜಿಲಾನಿ ಮೊಕಾಶಿ ತಿಳಿಸಿದ್ದಾರೆ.

‘6ನೇ ತರಗತಿಯ 11,330 ಸೀಟುಗಳಿಗೆ ಪ್ರವೇಶ ಬಯಸಿ 56 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ಅವರಲ್ಲಿ 41 ಸಾವಿರ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ’ ಎಂದರು.

ಅಖಿಲ ಹವ್ಯಕ ಮಹಾಸಭೆಯಿಂದ 82ನೇ ಹವ್ಯಕ ಸಂಸ್ಥಾಪನೋತ್ಸವ ಆಚರಣೆ

ಹವ್ಯಕ ಸಾಧಕರಿಗೆ ‘ವಿಶೇಷ ಪ್ರಶಸ್ತಿ’ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಹವ್ಯಕ ಮಹಾಸಭಾವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 82ನೇ ವಾರ್ಷಿಕ ಹವ್ಯಕ ಸಂಸ್ಥಾಪನೋತ್ಸವದಲ್ಲಿ ಹವ್ಯಕ ಸಾಧಕರನ್ನು ಗೌರವಿಸಲಾಯಿತು.

ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ಹಾಗೂ ಪದಾಧಿಕಾರಿಗಳು 2024–25ನೇ ಸಾಲಿನ ವಾರ್ಷಿಕ ಹವ್ಯಕ ವಿಶೇಷ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಉದ್ಯಮಿಯೂ ಆಗಿರುವ ಸಮಾಜ ಸೇವಕ ಜಿ.ವಿ. ಭಟ್ ಗೋರೆ ಅವರು ‘ಹವ್ಯಕ ವಿಭೂಷಣ’ ಪ್ರಶಸ್ತಿ (₹ 30 ಸಾವಿರ ನಗದು), ಭಾಷಾ ತಜ್ಞ ಪಾದೇಕಲ್ಲು ವಿಷ್ಣು ಭಟ್ಟ, ಶಿಕ್ಷಣ ತಜ್ಞ ಎಸ್‌.ಎನ್. ಹೆಗಡೆ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪರಮೇಶ್ವರ ಹೆಗಡೆ ಅವರು ‘ಹವ್ಯಕ ಭೂಷಣ’ ಪ್ರಶಸ್ತಿ (ತಲಾ ₹20 ಸಾವಿರ ನಗದು) ಸ್ವೀಕರಿಸಿದರು.

ಯಕ್ಷಗಾನ ಕಲಾವಿದ ಸಂಜಯ ಬೆಳೆಯೂರು, ನೃತ್ಯ ಕಲಾವಿದೆ ಕಾವ್ಯ ಜಿ. ರಾವ್, ಸಂಗೀತ ಕಲಾವಿದ ಕೆ.ಜೆ. ದಿಲೀಪ್ ಅವರಿಗೆ ‘ಹವ್ಯಕ ಶ್ರೀ’ ಪ್ರಶಸ್ತಿ (ತಲಾ ₹10 ಸಾವಿರ ನಗದು) ಹಾಗೂ ‘ಹವ್ಯಕ ಮಾಸ ಪತ್ರಿಕೆ’ ಸಂಚಾಲಕ ನಾರಾಯಣ ಭಟ್ ಹುಳೇಗಾರು ಅವರಿಗೆ ‘ಹವ್ಯಕ ಸೇವಾಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಕ್ಕಳಿಗೆ ‘ಪಲ್ಲವ ಪುರಸ್ಕಾರ’ ನೀಡಿ ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ಪಾದೇಕಲ್ಲು ವಿಷ್ಣು ಭಟ್ಟ, ‘ನಮ್ಮ ಸಮುದಾಯವು ಯಾವುದೇ ಪ್ರಶಸ್ತಿ ಪುರಸ್ಕಾರದ ಅಪೇಕ್ಷೆಯಿಲ್ಲದೆ ಬೆಳೆದಿದೆ. ನಮ್ಮ ಹಿರಿಯರು ಸಾಕಷ್ಟು ಕೆಲಸ ಮಾಡಿದರೂ ಪ್ರಶಸ್ತಿಗಳಿಗೆ ಹಂಬಲಿಸಲಿಲ್ಲ. ಸೀಮೆಎಣ್ಣೆಯ ದೀಪದ ಬೆಳಕಿನಲ್ಲಿ ಮಹಾನ್ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳ ಓದಿನಿಂದ ನಮಗೆ ಸಾಧಿಸಲು ಸಾಧ್ಯವಾಯಿತು. ಕೃಷಿ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಸಮುದಾಯದವರು ತಮ್ಮ ಅಸ್ತಿತ್ವ ಕಂಡುಕೊಂಡದ್ದು ಉತ್ತಮ ಬೆಳವಣಿಗೆ’ ಎಂದು ಹೇಳಿದರು.

ಕೆ.ಜೆ. ದಿಲೀಪ್, ‘ಮಕ್ಕಳಿಗೆ ಶಾಲಾ ಶಿಕ್ಷಣದ ಜತೆಗೆ ಲಲಿತಕಲೆಯಲ್ಲಿಯೂ ಆಸಕ್ತಿ ಬೆಳೆಸಿ, ಪ್ರೋತ್ಸಾಹಿಸಬೇಕು’ ಎಂದರು.

ಇದೇ ವೇಳೆ ಇತ್ತೀಚೆಗೆ ಸಿಇಟಿ ಪರೀಕ್ಷೆ ಕೇಂದ್ರಗಳಲ್ಲಿ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಖಂಡಿಸಿ, ಮೊಂಬತ್ತಿ ಹಚ್ಚಿ ಪ್ರತಿಭಟಿಸಲಾಯಿತು.



ಸಮಾರಂಭದಲ್ಲಿ (ಕುಳಿತವರು ಎಡದಿಂದ) ನಾರಾಯಣ ಭಟ್ ಹುಳೇಗಾರು, ಪರಮೇಶ್ವರ ಹೆಗಡೆ, ಎಸ್‌.ಎನ್‌.ಹೆಗಡೆ, ಜಿ.ವಿ.ಭಟ್ ಗೋರೆ, ಪಾದೇಕಲ್ಲು ವಿಷ್ಣು ಭಟ್ಟ, ಕೆ.ಜೆ. ದಿಲೀಪ್, ಕಾವ್ಯ ಜಿ.ರಾವ್ ಹಾಗೂ ಸಂಜಯ ಬೆಳೆಯೂರು ಅವರಿಗೆ ವಾರ್ಷಿಕ ಹವ್ಯಕ ವಿಶೇಷ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ನಿವೃತ್ತ ನ್ಯಾಯಾಧೀಶ ಕುಕ್ಕಜೆ ರಾಮಕೃಷ್ಣ ಭಟ್, ಮಹಾಸಭೆಯ ಡಾ. ಗಿರಿಧರ ಕಜೆ, ಜಿ.ಜಿ.ಹೆಗಡೆ, ಶ್ರೀಧರ್ ಭಟ್, ರವಿ ಪಟ್ಟಾಜೆ, ಬಾಲ ಸುರೇಶ್, ಆದಿತ್ಯ ಹೆಗಡೆ, ಪ್ರಶಾಂತ್ ಭಟ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಪರೀಕ್ಷೆ ಧಿಕ್ಕರಿಸಿದವರಿಗೆ ಪ್ರಶಸ್ತಿ ಪ್ರದಾನ

ಜನಿವಾರವನ್ನು ತೆಗೆಯಲು ಒಪ್ಪದೆ, ಸಿಇಟಿ ಪರೀಕ್ಷೆ ಬರೆಯದ ಬೀದರ್‌ನ ಸುಚಿವ್ರತ್ ಕುಲಕರ್ಣಿ ಹಾಗೂ ತೀರ್ಥಹಳ್ಳಿಯ ಅಭಿಜ್ಞಾ ಅವರಿಗೆ ಹವ್ಯಕ ಮಹಾಸಭೆಯಿಂದ ‘ಧರ್ಮಶ್ರೀ ಪ್ರಶಸ್ತಿ’ಯನ್ನು ಸಾಂಕೇತಿಕವಾಗಿ ನೀಡಿ, ಅವರ ಧರ್ಮಾಭಿಮಾನವನ್ನು ಗೌರವಿಸಲಾಯಿತು.

‘ಧಿಯೋ ಯೋ ನಃ ಪ್ರಚೋದಯಾತ್ ಎಂಬುದು ನಮ್ಮ ಧ್ಯೇಯವಾಕ್ಯ. ಬ್ರಾಹ್ಮಣ ವಿರೋಧಿ ಮನಸ್ಥಿತಿಯಿಂದ ಜನಿವಾರವನ್ನು ಕತ್ತರಿಸಿದವರಿಗೆ ಹಾಗೂ ಕಾಶ್ಮೀರದಲ್ಲಿನ ಭಯೋತ್ಪಾದಕರಿಗೆ ಒಳ್ಳೆಯ ಬುದ್ಧಿ ಬರಲಿ ಎಂದು ಹವ್ಯಕ ಮಹಾಸಭೆ ಆಶಿಸುತ್ತದೆ’ ಎಂದು ಡಾ. ಗಿರಿಧರ ಕಜೆ ಹೇಳಿದರು.



ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ಮಲ್ಲಿಕಾರ್ಜುನ ಖರ್ಗೆ ಅವರು ‘ಶಿವಶ್ರೀ ಪ್ರಶಸ್ತಿ’ ಪ್ರದಾನ ಮಾಡಿದರು. ವಿಶ್ರಾಂತ ಜಿಲ್ಲಾ ನ್ಯಾಯಾಧೀಶ ಎಸ್‌.ಎಂ.ರೆಡ್ಡಿ, ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಮತ್ತು ಸಚಿವ ಎಸ್‌.ಎಸ್‌.ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಶಿವಶಂಕರಪ್ಪಗೆ ‘ಶಿವಶ್ರೀ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣ, ವ್ಯಾಪಾರ ಮತ್ತು ರಾಜಕೀಯ ಕ್ಷೇತ್ರದಲ್ಲಿ ಶಾಮನೂರು ಶಿವಶಂಕರಪ್ಪ ಅವರು ಹಲವು ಸಾಧನೆ ಮಾಡಿದ್ದು, ನೂರಾರು ಜನರಿಗೆ ದಾರಿಯಾಗಿದ್ದಾರೆ. ಸಮಾಜಕ್ಕೆ ಅಂತಹವರ ಅಗತ್ಯ ಎಂದಿಗೂ ಇರುತ್ತದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.


ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಪ್ರತಿಷ್ಠಾನವು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಮನೂರು ಶಿವಶಂಕರಪ್ಪ ಅವರಿಗೆ ‘ಶಿವಶ್ರೀ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ಶಿವಶಂಕರಪ್ಪ ಅವರು ನನಗೆ ಬಹಳ ಆಪ್ತರು. ಅವರು ಬೇರೆಯವರಿಗೆ ನೆರವು ನೀಡಿದ್ದನ್ನು ನಾನು ನೋಡಿದ್ದೇನೆ. ಸರಿಯಿಲ್ಲದ್ದನ್ನು ಸರಿ ಇಲ್ಲ ಎಂದು ಹೇಳಿದ್ದನ್ನೂ ಕಂಡಿದ್ದೇನೆ. ಅಂತಹವರು ಬಹಳ ಅಪರೂಪ’ ಎಂದರು.

ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಅವರ ‘ಸಂಜೆಗೊಂದು ನುಡಿಚಿಂತನ–365’ ಕೃತಿಯನ್ನು ಮಲ್ಲಿಕಾರ್ಜುನ ಖರ್ಗೆ ಅವರು ಲೋಕಾರ್ಪಣೆ ಮಾಡಿದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಟಿ.ಸಿ.ಎಸ್ ವಿಶ್ವ 10ಕೆ ಓಟ'ದಲ್ಲಿ ಸಹಸ್ರಾರು ಮಂದಿ ಭಾಗವಹಿಸಿದ್ದರು
ಚಿತ್ರ: ಪುಷ್ಕರ್ ವಿ



ಯುವಕನೊಬ್ಬ ಭಯೋತ್ಪಾದಕರ ದಾಳಿಯನ್ನು ಖಂಡಿಸಿದ್ದು ಹೀಗೆ

ಸಿಲಿಕಾನ್ ಸಿಟಿಯಲ್ಲಿ ಓಟದ ಸಂಭ್ರಮ

ಭಾನುವಾರ ಆಗಸದಲ್ಲಿ ಸೂರ್ಯ ಉದಯಿಸುವ ಮುನ್ನವೇ ನಗರದ ಕಬ್ಬನ್ ರಸ್ತೆಯಲ್ಲಿ ಜಮಾಯಿಸಿದ್ದ ಸಹಸ್ರಾರು ಮಂದಿಯ ಮುಖದಲ್ಲಿ ಉತ್ಸಾಹದ ಚಿಲುಮೆ ಪುಟಿಯುತ್ತಿತ್ತು. ಟಿಸಿಎಸ್ ವಿಶ್ವ 10ಕೆ ಓಟಕ್ಕೆ ಬಣ್ಣಬಣ್ಣದ ಜೆರ್ಸಿ ತೊಟ್ಟು ಬಂದಿದ್ದ ಅವರು ಸಂಭ್ರಮದಲ್ಲಿ ಮಿಂದೆದ್ದರು. ಒಂದೆಡೆ ವಾತಾವರಣ ಬಿಸಿಯೇರುತ್ತಿದ್ದರೆ ಮತ್ತೊಂದೆಡೆ ಡಿ.ಜೆ ಸಂಗೀತ ಕಾವೇರಿಸಿತ್ತು. ಅಥ್ಲೀಟ್‌ಗಳೊಂದಿಗೆ ಚಿಣ್ಣರು, ವಿದ್ಯಾರ್ಥಿಗಳು, ಯುವಕ– ಯುವತಿಯರು, ವೃತ್ತಿನಿರತರು ರಸ್ತೆಯುದ್ದಕ್ಕೂ ಸಂಭ್ರಮಿಸುತ್ತಾ ಹೆಜ್ಜೆ ಹಾಕಿದರು. ಹಿರಿಯ ನಾಗರಿಕರು, ಅಂಗವಿಕಲರೂ ತಾವೇನು ಕಮ್ಮಿಯಿಲ್ಲ ಎನ್ನುವಂತೆ ಓಟದಲ್ಲಿ ಪಾಲ್ಗೊಂಡರು. ಮತ್ತೆ ಕೆಲವರು ವಿವಿಧ ವೇಷಭೂಷಣದೊಂದಿಗೆ ಬಂದು ಓಟಕ್ಕೆ ವಿಶೇಷ ಮೆರುಗು ನೀಡಿದರು.

ಚಿತ್ರಗಳು: ರಂಜು ಪಿ



ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದ ವೇಷಧಾರಿ



ಓಟದಲ್ಲಿ ಭಾಗವಹಿಸಿದ್ದ ಅಥ್ಲೀಟ್‌ಗಳು ವಿಧಾನಸೌಧದ ಮುಂದೆ ಹಾದು ಹೋದರು



ವ್ಹೀಲ್‌ಚೇರ್‌ನಲ್ಲಿ ಬಂದ ಮಹಿಳೆ

ಸುದ್ದಿ 2 ನಿಮಿಷ

ಜಿ.ಕೆ.ವೀರೇಶ್ ದತ್ತಿನಿಧಿ: ಸಮಗ್ರ ಕೃಷಿ ಪದ್ಧತಿ ಪ್ರಶಸ್ತಿ ಪ್ರದಾನ

ಯಲಹಂಕ: 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಮೂಲ ಸೌಕರ್ಯಗಳನ್ನು ವೃದ್ಧಿಸಿಕೊಂಡು ದೇಶದಲ್ಲಿಯೇ ಅತ್ಯುತ್ತಮ ವಿಶ್ವವಿದ್ಯಾಲಯವಾಗಿ ಹೆಸರು ಗಳಿಸಿದೆ. ಅದಕ್ಕೆ ಜಿ.ಕೆ.ವೀರೇಶ್ ಸಹಿತ ಅನೇಕರು ಕಾರಣ' ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ(ಜಿಕೆವಿಕೆ)ಯಲ್ಲಿ ಕೃಷಿ ವಿಶ್ವ ವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ್ದ 'ಜಿ.ಕೆ. ವೀರೇಶ್ ಉಪನ್ಯಾಸ ಹಾಗೂ 2024-25ನೇ ಸಾಲಿನ ರಾಜ್ಯ ಮಟ್ಟದ ಸಮಗ್ರ ಕೃಷಿಪದ್ಧತಿ ಪ್ರಶಸ್ತಿ ಪ್ರದಾನ' ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜಿಕೆವಿಕೆ ಕೃಷಿ ಕಾಲೇಜಿನಲ್ಲಿ ವಿದ್ಯಾರ್ಥಿ ಜೀವನ, ರಾಜಕೀಯದಲ್ಲಿ ಬೆಳೆಯಲು ಜಿಕೆವಿಕೆಯ ಪಾತ್ರವನ್ನು ಸಚಿವರು ಮೆಲುಕು ಹಾಕಿದರು.

ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ್ ದಳವಾಯಿ ಮಾತನಾಡಿ, 'ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಳ ವಿಶ್ವವಿದ್ಯಾಲಯಗಳಲ್ಲಿ ಹಳೆಯ ವಿದ್ಯಾರ್ಥಿ ಸಂಘಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿವೆ' ಎಂದರು.

ಪ್ರಶಸ್ತಿ ಪ್ರದಾನ: ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲೆಯ ಬೆಳಗಟ್ಟಿ ಗ್ರಾಮದ ರೈತ ನಿಂಗಪ್ಪ ರಾಮಪ್ಪ ಚಿಲವಾಡಿ, ಚಾಮರಾಜನಗರ ಜಿಲ್ಲೆಯ ಚಿಂಚಳ್ಳಿ ಗ್ರಾಮದ ಪಿ.ದಯಾನಂದ ಹಾಗೂ ಉತ್ತರ ಕನ್ನಡ ಜಿಲ್ಲೆಯ ಹುಲಿಕೊಂಡ ಗ್ರಾಮದ ಬಸವರಾಜ್ ನಡುವಿನಮನಿ ಅವರಿಗೆ 'ಪ್ರೊ. ಜಿ.ಕೆ.ವೀರೇಶ್ ದತ್ತಿನಿಧಿ' ಅಡಿಯಲ್ಲಿ 'ಸಮಗ್ರ ಕೃಷಿ ಪದ್ಧತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಕೇಂದ್ರೀಯ ವಿದ್ಯಾಲಯದಲ್ಲಿ ಪ್ರಾದೇಶಿಕ ಕ್ರೀಡಾಕೂಟ



ಕೆ.ಆರ್.ಪುರ: ಪ್ರತಿಯೊಬ್ಬ ವಿದ್ಯಾರ್ಥಿಯು ಚಿಕ್ಕಂದಿನಿಂದಲೇ ಕ್ರೀಡೆಯ ಬಗ್ಗೆ ಒಲವು ಬೆಳೆಸಿಕೊಳ್ಳಬೇಕು ಎಂದು ಕೇಂದ್ರೀಯ ವಿದ್ಯಾಲಯಗಳ ಪ್ರಾದೇಶಿಕ ಉಪ ಆಯುಕ್ತ ಧರ್ಮೇಂದ್ರ ಪಟ್ಲೆ ಹೇಳಿದರು.

ಕೆ.ಆರ್.ಪುರ ಸಮೀಪದ ಸಿ.ವಿ.ರಾಮನ್ ನಗರದ ಕೇಂದ್ರೀಯ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕೆ.ವಿ.ಡಿ.ಆರ್.ಡಿ.ಒ ಶಾಲೆಗಳ ಪ್ರಾದೇಶಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಕ್ರೀಡೆಯಿಂದ ಮಾನಸಿಕ ನೆಮ್ಮದಿ ಜೊತೆಗೆ ಆರೋಗ್ಯವು ವೃದ್ಧಿ ಆಗುತ್ತದೆ. ಕ್ರೀಡೆಯಲ್ಲಿ ಸಾಧನೆ ಮಾಡಿದವರು ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರಮುಖ ಹುದ್ದೆಗಳನ್ನು ಪಡೆಯಬಹುದು ಎಂದರು.

ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ನಾರಾಯಣರಾವ್, 'ವಿದ್ಯಾರ್ಥಿಗಳಿಗಾಗಿ ಸ್ಕೇಟಿಂಗ್, ಬ್ಯಾಡ್ಮಿಂಟನ್ ಆಡಿಸಲಾಗಿತ್ತು. 200ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು. ಭವಿಷ್ಯದಲ್ಲಿ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದ ಕ್ರೀಡೆ ಆಯೋಜಿಸಲಾಗುವುದು' ಎಂದರು.

ಸಂಕ್ಷಿಪ್ತ ಸುದ್ದಿ

'ನೂತನ ಆವಿಷ್ಕಾರಗಳತ್ತ ಗಮನ ಹರಿಸಿ'

ರಾಜರಾಜೇಶ್ವರಿನಗರ: 'ವಿಜ್ಞಾನ, ತಂತ್ರಜ್ಞಾನ ಮಾಹಿತಿ ತಂತ್ರಜ್ಞಾನ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಹೊಸ ಹೊಸ ಸಂಶೋಧನೆಗಳ ಮೂಲಕ ದೇಶದ ಪ್ರಗತಿಗೆ ಕೊಡುಗೆ ನೀಡಬೇಕು' ಎಂದು ಪಾಂಚಜನ್ಯ ವಿದ್ಯಾಪೀಠದ ಅಧ್ಯಕ್ಷ ಎಸ್.ಮರಿಸ್ವಾಮಿ ತಿಳಿಸಿದರು.

ನಾಗರಬಾವಿಯ ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ 9ನೇ ವರ್ಷದ ರಾಷ್ಟ್ರೀಯ ತಾಂತ್ರಿಕ ಪ್ರದರ್ಶನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಾವು ವಿಜ್ಞಾನ–ತಂತ್ರಜ್ಞಾನ ಯುಗದಲ್ಲಿದ್ದೇವೆ. ಯುವಕರು, ಈ ತಂತ್ರಜ್ಞಾನಗಳನ್ನು ಬಳಸಿಕೊಂಡು ಆರೋಗ್ಯ, ಶಿಕ್ಷಣ, ವ್ಯವಸಾಯ, ಕೈಗಾರಿಕೆಗಳ ಅಭಿವೃದ್ಧಿಗೆ ಮುಂದಾಗಬೇಕು' ಎಂದು ಸಲಹೆ ನೀಡಿದರು.

ಪಾಂಚಜನ್ಯ ವಿದ್ಯಾಪೀಠ ಧರ್ಮದತ್ತಿಯ ಟ್ರಸ್ಟ್‌ನ ಕಾರ್ಯದರ್ಶಿ ಎಂ.ಮಹಾದೇವ ಮಾತನಾಡಿ, 'ಎಲ್ಲ ರಂಗಗಳಲ್ಲೂ ಸ್ಪರ್ಧೆ ಇದೆ. ತಂತ್ರಜ್ಞಾನ ವೈದ್ಯಕೀಯ ಸಂಶೋಧನಾ ವಿದ್ಯಾರ್ಥಿಗಳು, ಸಂಶೋಧನೆ ಅವಿಷ್ಕಾರಗಳತ್ತ ಹೆಚ್ಚು ಗಮನ ಹರಿಸಬೇಕಾಗಿದೆ' ಎಂದು ಕಿವಿಮಾತು ಹೇಳಿದರು.

'ನ್ಯಾವಿಗೇಶನ್ ವ್ಯವಸ್ಥೆ ಅಭಿವೃದ್ಧಿಗೆ ಸಹಕಾರಿ'

ಮೈಸೂರು: 'ಭಾರತವು ನ್ಯಾವಿಗೇಶನ್ ವ್ಯವಸ್ಥೆ ನಿರ್ಮಾಣದಲ್ಲಿ ಸ್ವಾವಲಂಬನೆ ಸಾಧಿಸಿದ್ದು, ಹಂತ ಹಂತವಾಗಿ ಜಾಗತಿಕ ಮಟ್ಟದ ವ್ಯವಸ್ಥೆಯನ್ನೂ ಹೊಂದಲಿದೆ' ಎಂದು ಇಸ್ರೊ ನ್ಯಾವಿಗೇಶನ್ ಸಿಸ್ಟಮ್ಸ್ ಏರಿಯಾ ಸಮೂಹ ನಿರ್ದೇಶಕಿ ಎಂ.ವಿ.ರೂಪಾ ತಿಳಿಸಿದರು.

ನಗರದ ಕೆ.ಆರ್.ಮೊಹಲ್ಲಾದ ಅನಾಥಾಲಯದಲ್ಲಿ ಭಾನುವಾರ ನಡೆದ ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆಯಲ್ಲಿ 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ(ಇಸ್ರೊ) ವ್ಯೋಮಯಾನ ವ್ಯವಸ್ಥೆಗಳು' ಕುರಿತು ಮಾತನಾಡಿದರು.

'ನ್ಯಾವಿಗೇಶನ್ ವ್ಯವಸ್ಥೆ ರೂಪುಗೊಂಡ ಬಗೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮೊದಲು ಮಾನವನು ತನ್ನ ಸಂಚಾರ ಮಾರ್ಗಗಳನ್ನು ಪ್ರಾಕೃತಿಕ ವಸ್ತುಗಳನ್ನು ಆಧರಿಸಿ ನಿಗದಿ ಮಾಡಿಕೊಂಡಿದ್ದ, ಬಳಿಕ ಆಕಾಶಕಾಯಗಳನ್ನು ಬಳಸಿ ಸ್ಥಳವನ್ನು ಗುರುತಿಸುತ್ತಿದ್ದ, ನೌಕಾಯಾನ ಬೆಳೆದಂತೆ ನೂತನ ಆವಿಷ್ಕಾರಗಳು ಘಟಿಸಿದವು, ಹೊಸ ಉಪಕರಣಗಳ ಬಳಕೆಗೆ ಬಂದವು. ಇಂದು ಕೃತಕ ಉಪಗ್ರಹಗಳನ್ನು ಹರಿಬಿಟ್ಟು ಮಾಹಿತಿ ಪಡೆಯುತ್ತಿದ್ದೇವೆ' ಎಂದು ಹೇಳಿದರು.

ಸೇಬು ಬೆಳೆದ ರೈತ: ಪ್ರಧಾನಿ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಮುಧೋಳ ತಾಲ್ಲೂಕಿನ ಕುಳಲಿ ಗ್ರಾಮದಲ್ಲಿ ಸೇಬು ಹಣ್ಣು ಬೆಳೆದ ಶ್ರೀಶೈಲ ತೇಲಿ ಅವರ ಹೆಸರನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಮನ್ ಕೀ ಬಾತ್'ನಲ್ಲಿ ಉಲ್ಲೇಖಿಸಿದ್ದಾರೆ.

'ಗುಡ್ಡಗಾಡು ಪ್ರದೇಶದಲ್ಲಿ ಸೇಬು ಬೆಳೆಯಬಹುದು ಎನ್ನುವುದನ್ನು ಸುಳ್ಳಾಗಿಸಿ ಬಯಲು ಪ್ರದೇಶ, 35 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರುವಲ್ಲಿ ತೇಲಿ ಅವರು ಸೇಬು ಬೆಳೆದು ತೋರಿಸಿದ್ದಾರೆ' ಎಂದು ಪ್ರಶಂಸೆ ವ್ಯಕ್ತಪಡಿಸಿದರು.

'ಗ್ರಾಮವೊಂದರಲ್ಲಿ ವಾಸವಿರುವ ನನ್ನ ಬಗ್ಗೆ ಪ್ರಧಾನಿಯವರು ಮನ್ ಕೀ ಬಾತ್‌ನಲ್ಲಿ ಉಲ್ಲೇಖಿಸಿದ್ದು ಖುಷಿ ತಂದಿದೆ. ದ್ರಾಕ್ಷಿ ಬೆಳೆ ನಾಶವಾದಾಗ, ಸ್ನೇಹಿತರ ಜೊತೆ ಚರ್ಚಿಸಿ ಸಾವಯವ ಪದ್ಧತಿಯಲ್ಲಿ ಸೇಬು ಬೆಳೆದೆ. ಎರಡು ವರ್ಷಗಳ ಹಿಂದೆ 7 ಎಕರೆ ಜಮೀನಿನಲ್ಲಿ ಸೇಬು ಬೆಳೆದೆ. ಈಗಾಗಲೇ ಒಮ್ಮೆ ಫಸಲು ಬಂದಿದ್ದು, ಉತ್ತಮ ಬೆಲೆ ಸಿಕ್ಕಿದೆ. ಎರಡನೇ ಫಸಲಿನ ನಿರೀಕ್ಷೆಯಲ್ಲಿದ್ದೇನೆ' ಎಂದು ಶ್ರೀಶೈಲ ತೇಲಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.



ಸೇಬು ಬೆಳೆದಿರುವ ಬಾಗಲಕೋಟೆ ಜಿಲ್ಲೆಯ ಕುಳಲಿ ರೈತ ಶ್ರೀಶೈಲ ತೇಲಿ



ಬಸವನಗುಡಿ ನ್ಯಾಷನಲ್ ಕಾಲೇಜು ಆಟದ ಮೈದಾನದಲ್ಲಿ ಶ್ರೀ ವಾಸವಿ ಫುಡ್ ಭಾನುವಾರ ಆಯೋಜಿಸಿದ್ದ ಮಾವು ಉತ್ಸವದಲ್ಲಿ ಶಾಸಕ ಉದಯ್ ಗರುಡಾಚಾರ್ ಅವರು, ಮಾವು ಬೆಳೆಗಾರರ ಮಕ್ಕಳ ಜೊತೆ ಮಾವಿನ ತಳಿಯ ಬಗ್ಗೆ ಮಾಹಿತಿ ಪಡೆದರು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ನಗರದಲ್ಲಿ ಇಂದು

ಶ್ರೀಮದ್ಭಾಗವತ ಕಥಾ ಶ್ರವಣ ಸಪ್ತಾಹ ಮಹೋತ್ಸವ: ಶ್ರೀಮದ್ಭಾಗವತ ಕಥಾ ಶ್ರವಣ: ಬ್ರಹ್ಮಣ್ಯಾಚಾರ್ಯ, ಪ್ರವಚನ: ಹ.ರಾ. ನಾಗರಾಜಾಚಾರ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಮೂಹಿಕ ಸಾಂಪ್ರದಾಯಿಕ ಪಂಢರಿ ಭಜನೆ, ಆಯೋಜನೆ ಮತ್ತು ಸ್ಥಳ: ಅನಂತಸ್ವಾಮಿ ಆಶ್ರಮ, ಸುಭೇದಾರ್ ಛತ್ರಂ ರಸ್ತೆ, ಗಾಂಧಿನಗರ, ಬೆಳಿಗ್ಗೆ 8ರಿಂದ

ಬಿಇಎಸ್ ಜಾನಪದ ಉತ್ಸವ–2025: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿ: ಜಾನಪದ ಎಸ್. ಬಾಲಾಜಿ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಲಕ್ಷ್ಮಣ್, ಎಸ್.ಟಿ. ಶ್ರೀನಿವಾಸನ್, ಟಿ. ನಾರಾಯಣಪ್ಪ, ಅಧ್ಯಕ್ಷತೆ: ಬಿ.ಎಸ್. ಶಿವಲಿಂಗೇಗೌಡ, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಾಲೇಜು, ಜಯನಗರ ನಾಲ್ಕನೇ ಹಂತ, ಬೆಳಿಗ್ಗೆ 9.30ರಿಂದ



ಬೈರಮಂಗಲ ರಾಮೇಗೌಡ

'ಗೋಕಾಕ್ ಸಾಹಿತ್ಯ ಯಾನ': ಅಧ್ಯಕ್ಷತೆ: ಸ್ನೇಹಲತಾ ಜಿ. ನಾಡಿಗೇರ್, ಅತಿಥಿಗಳು: ಅನಿಲ್ ಗೋಕಾಕ್, ನರಹಳ್ಳಿ ಬಾಲಸುಬ್ರಹ್ಮಣ್ಯ, ವಿದ್ಯಾರಶ್ಮಿ ಪೆಲತ್ತಡ್ಕ, ವಿ.ಕೃ. ಗೋಕಾಕ್ ಫೆಲೋಶಿಪ್ ಪಡೆದವರು: ಅಂಜನಾ ಹೆಗಡೆ, ಲಿಂಗರಾಜ ಸೊಟ್ಟಪ್ಪನವರ್, ಆಯೋಜನೆ: ವಿನಾಯಕ ಕೃಷ್ಣ ಗೋಕಾಕ್ ವಾಙ್ಮಯ ಟ್ರಸ್ಟ್, ಸ್ಥಳ: ಎನ್.ಎಂ.ಕೆ.ಆರ್. ವಿ. ಮಹಿಳಾ ಕಾಲೇಜು, ಜಯನಗರ, ಬೆಳಿಗ್ಗೆ 11.30ರಿಂದ

'ಶ್ರೀಕೃಷ್ಣ ಸಂಧಾನ' ನಾಟಕ ಪ್ರದರ್ಶನ: ಆಯೋಜನೆ: ವಿನಾಯಕ ಕಲಾ ಬಳಗ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಜ್ಯೋತ್ಸ್ನಾ ಶ್ರೀಕಾಂತ್, ಎನ್.ಸಿ. ಭಾರಧ್ವಾಜ್, ಎ.ಎಸ್. ಎನ್. ಸ್ವಾಮಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಬಾಲು ಮಸ್ತಿ, ಅಧಿತಿ ಕೃಷ್ಣಪ್ರಕಾಶ್, ಬಿ.ಸಿ. ಮಂಜುನಾಥ್, ಸುಕನ್ಯಾ ರಾಂಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 4.30ರಿಂದ

'ಮಾರ್ಕಂಡೇಯ ಪುರಾಣಾಂತರ್ಗತ ವೆಂಕಟಾಚಲ ಮಹಾತ್ಮೆ' ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

'ಶ್ರೀನಿವಾಸ ಕಲ್ಯಾಣ' ಪ್ರವಚನ: ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಈಜುಕೋಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಗರ್ಭಿಣಿಯರಿಗೆ ಆರೋಗ್ಯ ಇಲಾಖೆಯ 'ಕರೆ ಆರೈಕೆ'

• ಎಂ. ಮಹೇಶ್

ಮೈಸೂರು: ಗರ್ಭಿಣಿಯರಿಗೆ ಮೊಬೈಲ್ ಫೋನ್ 'ಕರೆ'ಯ ಮೂಲಕ ಆರೋಗ್ಯ ಸೇವೆ ಒದಗಿಸುವ ಯೋಜನೆಯನ್ನು ಆರೋಗ್ಯ ಇಲಾಖೆ ಆರಂಭಿಸಿದೆ.

ತಾಯಿ–ಮಗುವಿನ ಮರಣ ಪ್ರಮಾಣ ತಗ್ಗಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಹಯೋಗದಲ್ಲಿ ಸೇವೆಯನ್ನು ಆರಂಭಿಸಲಾಗಿದೆ.

ನಾಲ್ಕು ತಿಂಗಳು ಮೇಲ್ಪಟ್ಟ ಗರ್ಭಿಣಿ ಹಾಗೂ ಒಂದು ವರ್ಷದೊಳಗಿನ ಶಿಶುಗಳ ಆರೈಕೆಯಲ್ಲಿ ಕುಟುಂಬದವರು ವಹಿಸಬೇಕಾದ ಕಾಳಜಿ, ಲಸಿಕೆ ಕೊಡಿಸುವುದು ಹಾಗೂ ಇತರ ತಪಾಸಣೆ ಕುರಿತು ಕನ್ನಡ ಸೇರಿದಂತೆ ವಿವಿಧ ಭಾಷೆಗಳಲ್ಲಿ ಮುದ್ರಿತ ಆಡಿಯೊಗಳ ಮಾಹಿತಿ ಒದಗಿಸಲಾಗುವುದು. ಹೆಚ್ಚುವರಿ ಅಥವಾ ನಿರ್ದಿಷ್ಟ ಮಾಹಿತಿಯ ಅಗತ್ಯವಿದ್ದಲ್ಲಿ ಸಂದೇಶ ಕಳುಹಿಸಿ ಪಡೆದುಕೊಳ್ಳಬಹುದಾಗಿದೆ.

'ತಾಯಿ ಕಾರ್ಡ್ ಪಡೆದಿರುವ ಎಲ್ಲರಿಗೂ, ಅವರು ಒದಗಿಸಿದ ಮೊಬೈಲ್ ಫೋನ್ ಸಂಖ್ಯೆಗೆ ಇಲಾಖೆಯಿಂದ ಕರೆ ಬರುತ್ತದೆ. ಒಮ್ಮೆ ಸ್ವೀಕರಿಸಿದರೆ ನಿಯಮಿತವಾಗಿ ಸಲಹಾ ಕರೆಗಳು ಬರುತ್ತಿರುತ್ತವೆ. ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೂ ಇಂತಹ ಕರೆ ಬರುತ್ತವೆ. ಅವರು ಸ್ವೀಕರಿಸಿ ಕೇಳಿಸಿಕೊಂಡರೆ ಅದು ರೆಕಾರ್ಡ್ ಆಗುತ್ತದೆ. ಅದನ್ನು ಗರ್ಭಿಣಿಯರ ಸಂಖ್ಯೆಗೆ ಕಳುಹಿಸುವ ವ್ಯವಸ್ಥೆ ಇದಾಗಿದೆ' ಎಂದು ಡಿಎಚ್‌ಒ ಡಾ.ಪಿ.ಸಿ. ಕುಮಾರಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

ಜಾಗೃತಿ: 'ತಾಯಿ, ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ, ಮಕ್ಕಳ ಲಸಿಕಾ ಪ್ರಮಾಣದ ಶೇ 100ರಷ್ಟು ಗುರಿ ಸಾಧಿಸಲು ಯೋಜನೆ ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಆರೋಗ್ಯ ಸಿಬ್ಬಂದಿ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ' ಎನ್ನುತ್ತಾರೆ ಅವರು.

ಆರೋಗ್ಯ –ಶಿಕ್ಷಣ ಸೇವೆ

ಗರ್ಭಿಣಿಯರಿಗೆ ವಾರಕ್ಕೊಮ್ಮೆ ಕರೆ ಬರುತ್ತದೆ. ಮಗುವಿಗೆ ವರ್ಷವಾಗುವವರೆಗೆ ಕರೆ ಮಾಡಲಾಗುತ್ತದೆ. ಟೆಲಿಮೆಡಿಸಿನ್ ರೂಪದಲ್ಲಿ ಸಲಹೆ ನೀಡುವ ಕಾರ್ಯಕ್ರಮವಿದು

ಡಾ.ಪಿ.ಸಿ. ಕುಮಾರಸ್ವಾಮಿ, ಡಿಎಚ್‌ಒ, ಮೈಸೂರು

ಗರ್ಭಿಣಿಯರು, ತಾಯಂದಿರು ಮತ್ತು ಅವರ ಕುಟುಂಬದವರಿಗೆ ಸಂತಾನೋತ್ಪತ್ತಿ, ನವಜಾತ ಶಿಶುಗಳು ಮತ್ತು ಮಕ್ಕಳ ಆರೋಗ್ಯ ಸಂಬಂಧಿತ ಸಕಾಲಿಕ, ನಿಖರ ಮಾಹಿತಿಯನ್ನು ಒದಗಿಸುವ ಮೊಬೈಲ್ ಆರೋಗ್ಯ ಶಿಕ್ಷಣ ಸೇವೆ ಇದಾಗಿದೆ. ಮಗುವಿಗೆ ಒಂದು ವರ್ಷದವರೆಗೆ (72 ವಾರಗಳು) ಬಾಣಂತಿ ಮತ್ತು ಶಿಶುವಿನ ಸಾವು ಸಂಭವಿಸುವುದನ್ನು ತಪ್ಪಿಸುವ ಉದ್ದೇಶದಿಂದ ಈ ಕರೆ ಸೇವೆ ಆರಂಭಿಸಲಾಗಿದೆ. ಇದಕ್ಕೆ 'ಕಿಲ್ಕಾರಿ' ಎಂದು ಹೆಸರಿಡಲಾಗಿದೆ. 0124-4451600 ಮೂಲಕ ಪಾಲಕರೊಂದಿಗೆ ಮಾತನಾಡಲಾಗುತ್ತದೆ. ಒಂದು ವೇಳೆ ಕರೆ ಸ್ವೀಕರಿಸಲು ಅಸಾಧ್ಯವಾದಲ್ಲಿ, ಆರೋಗ್ಯ ಮಾಹಿತಿ ಪಡೆಯಲು 14423 ಇನ್‌ಬಾಕ್ಸ್ ನಂಬರ್‌ಗೆ ಕರೆ ಮಾಡಬಹುದು ಎನ್ನುತ್ತಾರೆ ಅಧಿಕಾರಿಗಳು.



ನೆನಪಿಸುವ ಉದ್ದೇಶ

ಧನುರ್ವಾಯು- ಗಂಟಲಮಾರಿ ಚುಚ್ಚುಮದ್ದು ನೀಡುವುದು, ರಕ್ತಹೀನತೆ ತಡೆಗೆ ಕನಿಷ್ಠ 180 ಕಬ್ಬಿಣಾಂಶ ಮಾತ್ರೆ ಸೇವಿಸುವುದು, ಪ್ರತಿ ತಿಂಗಳು ವೈದ್ಯರಿಂದ ತಪಾಸಣೆ, ರಕ್ತಪರೀಕ್ಷೆ, ಕಾಲಕಾಲಕ್ಕೆ ಮಕ್ಕಳಿಗೆ 0–9 ತಿಂಗಳವರೆಗೆ ಕೊಡಿಸಬೇಕಾದ ಲಸಿಕೆ ಕುರಿತು ಪಾಲಕರಿಗೆ ತಿಳಿಸುವ 'ನೆನಪಿನ ಕರೆ'ಯ ಕಾರ್ಯಕ್ರಮವಿದು.

ಗರ್ಭಧಾರಣೆ ಅಥವಾ ಹೆರಿಗೆಯ ಮಾಹಿತಿಯನ್ನು ಆಶಾ ಕಾರ್ಯಕರ್ತೆ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿ ಅಥವಾ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ಮೊಬೈಲ್ ಸಂಖ್ಯೆ ನೀಡುವ ಮೂಲಕ ನೋಂದಣಿ ಮಾಡಿಸಿಕೊಳ್ಳಬೇಕು. ಈ ರೀತಿ ಮಾಡುವ ಮೂಲಕ 'ಕಿಲ್ಕಾರಿ' ಕರೆಗಳನ್ನು ಉಚಿತವಾಗಿ ಪಡೆಯಬಹುದು.

ಭಯೋತ್ಪಾದನಾ ಕೃತ್ಯಗಳ ಬಗ್ಗೆ ಸುಭಾಷ್ ದಾಸ್‌ಗುಪ್ತ ಬೇಸರ

'ಪಹಲ್ಗಾಮ್ ದಾಳಿ ಖಂಡನೀಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿ ಖಂಡನೀಯ. ನಮ್ಮ ದೇಶದ ಕೋಮುವಾದಿ ಪಕ್ಷಗಳು ಹಾಗೂ ಸಂಘಟನೆಗಳು ಸಮಾಜವನ್ನು ಧರ್ಮದ ಆಧಾರದ ಮೇಲೆ ಒಡೆಯಲು ಈ ದಾಳಿಯನ್ನು ಬಲವಾದ ಅಸ್ತ್ರವನ್ನಾಗಿ ಮಾಡಿಕೊಂಡಿವೆ' ಎಂದು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ (ಎಸ್‌ಯುಸಿಐ) ಪಕ್ಷದ ಕೇಂದ್ರ ಸಮಿತಿ ಸದಸ್ಯ ಸುಭಾಷ್ ದಾಸ್‌ಗುಪ್ತ ಬೇಸರ ವ್ಯಕ್ತಪಡಿಸಿದರು.

ಗಾಂಧಿ ಭವನದಲ್ಲಿ ಭಾನುವಾರ ನಡೆದ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ 78ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. 'ಪಹಲ್ಗಾಮ್ ದಾಳಿಯಲ್ಲಿ 26 ಪ್ರವಾಸಿಗರು ಮೃತಪಟ್ಟಿದ್ದಾರೆ. ಕಾಶ್ಮೀರದ ಜನರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ದಾಳಿ ನಡೆಸಲಾಗಿದೆ ಎಂದು ದಾಳಿಯ ಹೊಣೆ ಹೊತ್ತಿರುವ ಸಂಘಟನೆ ಹೇಳಿರುವುದು ಕಾಶ್ಮೀರದ ಜನರ ಆಶಯಕ್ಕೆ ವಿರುದ್ಧವಾಗಿದೆ' ಎಂದು ಹೇಳಿದರು.

'ಜಾಗತಿಕ ಮಟ್ಟದಲ್ಲಿ ಮಾನವ ಸಮಾಜವು, ಬಂಡವಾಳಶಾಹಿ ಪದ್ಧತಿಯಿಂದ ಆರ್ಥಿಕವಾಗಿ, ರಾಜಕೀಯವಾಗಿ ನಲುಗುತ್ತಿದೆ. ಹೀಗಾಗಿ ಇದಕ್ಕೆ ಪರ್ಯಾಯವಾಗಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿ ಮಾಡಬೇಕಿದೆ. ಮಾರ್ಕ್ಸ್‌ವಾದದಲ್ಲಿ ಧರ್ಮಕ್ಕೆ ಸರಿಯಾದ ಸ್ಥಾನಮಾನ ನೀಡಿಲ್ಲ. ಆದ್ದರಿಂದ ನಮ್ಮ ಹೋರಾಟ ಕೋಮುವಾದದ ವಿರುದ್ಧ ನಡೆಯಲಿದೆ' ಎಂದು ಹೇಳಿದರು.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಬಹಿರಂಗವಾಗಿ ಹಿಂದೂ ಕೋಮುವಾದವನ್ನು ಬಳಸಿಕೊಂಡರೆ, ಕಾಂಗ್ರೆಸ್ ಪಕ್ಷವು ಮೃದು ಕೋಮುವಾದದ ಧೋರಣೆ ಅನುಸರಿಸುತ್ತಿದೆ. ಎಲ್ಲಾ ಪಕ್ಷಗಳು ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಜನರನ್ನು ಒಡೆದು ಆಳುತ್ತಿವೆ' ಎಂದು ದೂರಿದರು.

ಎಸ್‌ಯುಸಿಐನ ರಾಜ್ಯ ಸಮಿತಿ ಸದಸ್ಯರಾದ ಅಪರ್ಣಾ, ಜ್ಞಾನಮೂರ್ತಿ ವಿ., ಎಂ.ಎನ್. ಶ್ರೀರಾಮ್, ವಿ.ಎನ್. ರಾಜಶೇಖರ್, ಬಿ. ರವಿ ಉಪಸ್ಥಿತರಿದ್ದರು.



ಎಸ್‌ಯುಸಿಐನ ಸಂಸ್ಥಾಪನಾ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ಸದಸ್ಯರು

ಮುಖ್ಯಾಂಶಗಳು

- ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ 78ನೇ ಸಂಸ್ಥಾಪನಾ ದಿನ
- ಎಲ್ಲಾ ಪಕ್ಷಗಳು ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಜನರನ್ನು ಒಡೆದು ಆಳುತ್ತಿವೆ–ಕಳವಳ
- ದಾಳಿ ಕಾಶ್ಮೀರದ ಜನರ ಆಶಯಕ್ಕೆ ವಿರುದ್ಧ

ಮಕ್ಕಳ ಸುಪ್ತಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳೆ ತುಂಬಿಕೊಳ್ಳಲಿ

ಮಕ್ಕಳನ್ನು ಹೀಯಾಳಿಸುವ ಮುನ್ನ



- ನನ್ನ ಸ್ನೇಹಿತನ ಹೆಂಡತಿ ತನ್ನ ಹದಿಹರೆಯದ ಮಗನಿಗೆ 'ಪಾಪಿ' ಎಂದು ಹೀಯಾಳಿಸುತ್ತಾರೆ. ಆತ ಈಗ ಎಸ್ಸೆಸ್ಸೆಲ್ಸಿ. ಅಮ್ಮನ ಹೀಯಾಳಿಕೆಯಿಂದ ಮಗನ ಮನಸ್ಸಿನ ಮೇಲೆ ಯಾವ ಬಗೆಯ ದುಷ್ಪರಿಣಾಮಗಳಾಗಬಹುದು. ಅವರಿಬ್ಬರನ್ನೂ ನಿಭಾಯಿಸೋದು ಹೇಗೆ?



ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ಮಗನನ್ನು ಅಮ್ಮ ಅಥವಾ ಅಪ್ಪ ಹಾಗೆಲ್ಲ ಹೀಯಾಳಿಸುವುದು ತಪ್ಪು. ಮಗುವಿನ ಬೆಳವಣಿಗೆಯ ಮೇಲೆ ಹಾಗೂ ಭವಿಷ್ಯತ್ತಿನ ಮೇಲೆ ನಕಾರಾತ್ಮಕ ಪರಿಣಾಮಗಳಾಗುತ್ತವೆ. ಮಕ್ಕಳನ್ನು ಸರಿದಾರಿಗೆ ತರುವ ಸದುದ್ದೇಶದಿಂದ ಪಾಲಕರು ಹೆಚ್ಚು ಬೈಯ್ದಂತೆ, ಶಿಕ್ಷಿಸಿದಂತೆ, ಹೀಯಾಳಿಸಿದಂತೆ ಮಗು ಮೊಂಡಾಗುವ ಸಾಧ್ಯತೆ ಹೆಚ್ಚು. ಅಷ್ಟೆ ಅಲ್ಲದೆ ಮಗು ತನ್ನ ಭವಿಷ್ಯ ಹಾಗೂ ಜೀವನದ ಕುರಿತು ಅಷ್ಟೇನೂ ಗಂಭೀರವಾದ ಆಲೋಚನೆ ಮಾಡುವುದಿಲ್ಲ. ತನ್ನನ್ನು ಪ್ರೀತಿಸದೇ, ಶಿಕ್ಷಿಸುವ ಪಾಲಕರ ವಿರುದ್ಧ ಬಂಡೇಳುತ್ತದೆ. ಮಕ್ಕಳನ್ನು ಪ್ರೀತಿಯಿಂದ ಬಗ್ಗಿಸಿದಷ್ಟು ಸುಲಭವಾಗಿ ಬೇರೊಂದು ರೀತಿಯಿಂದ ಬಗ್ಗಿಸಲಾಗದು.

ಮಾತನಾಡುವುದನ್ನು ಕಲಿತ ಮೇಲೆ ಮಗುವಿನ ಎಲ್ಲ ಸಂವಹನ ಚಟುವಟಿಕೆಗಳು ಮಾತಿನಿಂದ ನಡೆಯುತ್ತವೆ. ಮಗು ಎಲ್ಲರನ್ನೂ, ಬಹುತೇಕ ಎಲ್ಲ ಸಂದರ್ಭಗಳಲ್ಲಿಯೂ ಮಾತಿನಿಂದ ಅರ್ಥಮಾಡಿಕೊಳ್ಳುತ್ತದೆ. ಪುಟ್ಟ ಮಕ್ಕಳನ್ನು ಚಿನ್ನ, ರನ್ನ, ಮುದ್ದು ಬಂಗಾರ, ನನ್ನ ಜೀವ, ಎಂದೆಲ್ಲ ಬಣ್ಣಿಸಿ, ಮುದ್ದಿಸುವ ಪಾಲಕರ ವರ್ತನೆಯಿಂದ ಮಗು ಅಷ್ಟೇ ಮುಗ್ದವಾಗಿ ಅವರ ಮಾತನ್ನು ನಂಬಿಕೊಂಡು ಬೆಳೆಯುತ್ತದೆ. ತಾನು ತನ್ನ ಪಾಲಕರ ಪಾಲಿಗೆ ಅತ್ಯಂತ ಮುಖ್ಯ ವ್ಯಕ್ತಿ ಎನ್ನುವುದು ಅದರ ಸುಪ್ತ ಮನಸ್ಸಿನಲ್ಲಿ ದಾಖಲಾಗಿರುತ್ತದೆ. ಮಗು ಸಂಪೂರ್ಣವಾಗಿ ಪಾಲಕರನ್ನು ನಂಬಿರುತ್ತದೆ. ಅಷ್ಟೇ ಅವಲಂಬಿಸಿರುತ್ತದೆ. ಅದು ಸಹಜ.

ಅದೇ ಮಗು ಸ್ವಲ್ಪ ದೊಡ್ಡವನಾಗುತ್ತಿದ್ದಂತೆಯೇ ಪಾಲಕರು ಅದನ್ನು ಬೈಯ್ದು, ಹೊಡೆದು, ಅವಮಾನಿಸಿ, ಹಂಗಿಸಿದರೆ ಮಗುವಿಗೆ ಆಘಾತವಾಗುತ್ತದೆ. ಇದೇನಾಗುತ್ತಿದೆ ಎನ್ನುವುದನ್ನು ಅದು ಅರ್ಥಮಾಡಿಕೊಳ್ಳಲು ಆಗದೆ ಕಷ್ಟಪಡುತ್ತದೆ. ರಾಜಕುಮಾರನಾಗಿ ಬೆಳೆದು ಬೆಳಗಬೇಕಾಗಿದ್ದ ಮಗು, ಮುಂದೆ ರಾಜಭಟನಾಗಬೇಕಾಗುತ್ತದೆ. ಒಂದು ಸಮೀಕ್ಷೆಯ ಪ್ರಕಾರ ನಮ್ಮ ಸಮಾಜದಲ್ಲಿ ಬೆಳೆಯುವ ಮಗುವೊಂದು ತನ್ನ 5 ರಿಂದ 15 ವರ್ಷದ ಸಮಯದಲ್ಲಿ ಕನಿಷ್ಠ 14,000 ಸಲ ಪಾಲಕರಿಂದಾಗಲೀ, ಹಿರಿಯರಿಂದಾಗಲೀ, ಶಿಕ್ಷಕರಿಂದಾಗಲೀ, ಅವರಿವರಿಂದಾಗಲೀ, 'ನೀನು ಅಯೋಗ್ಯ, ಅಶಕ್ತ, ಪಾಪಿ, ಕಳ್ಳ, ಕೆಟ್ಟವನು' ಹೀಗೆ ನಿಂದನೆಗೆ ಗುರಿಯಾಗಿರುತ್ತದೆ. ಮೊದಲೆಲ್ಲಾ ಪಾಲಕರ, ಹಿರಿಯರ ಹೊಗಳಿಕೆಯನ್ನು ಕೇಳಿ, ಮುದ್ದಿಸಿಕೊಂಡ ಮಗು ಅದನ್ನು ನಂಬಿಕೊಂಡಿರುತ್ತದೆ. ಅದರಂತೆಯೇ ಬೆಳೆಯುತ್ತಿರುತ್ತದೆ. ತನ್ಮಧ್ಯೆ ಅವೇ ಪಾಲಕರಿಂದ, ಹಿರಿಯರಿಂದ, ಅಳಿದುಳಿದವರಿಂದ ತನ್ನ ಬಗ್ಗೆ ನಕಾರಾತ್ಮಕ ಮಾತುಗಳನ್ನು ಕೇಳಿದಾಗ ಮಗುವಿಗೆ ಆಘಾತವಾಗುತ್ತದೆ. ಗೊಂದಲಗೊಳ್ಳುತ್ತದೆ. ಒಳಗೊಳಗೇ ರೋದಿಸುತ್ತದೆ.

ಅಂತರಂಗದಲ್ಲಿ ಒಂಟಿಯಾಗುತ್ತದೆ. ಸಮಯ ಸರಿದಂತೆ ಮಗುವಿನ ಸುಪ್ತಮನಸ್ಸು ಅದನ್ನೇ ನಂಬುತ್ತದೆ. ಅಷ್ಟಾಗುವಾಗ ಬಾಲ್ಯದಲ್ಲಿ ಸಕಾರಾತ್ಮಕವಾಗಿ ದಾಖಲಾಗಿದ್ದ ಮಾತುಗಳು, ಚಿತ್ರಗಳು ಮಸುಕಾಗುತ್ತವೆ. ಮಗು ಪ್ರೌಢಾವಸ್ಥೆಯನ್ನು ತಲುಪುವಷ್ಟರಲ್ಲಿ, ಅವರಿವರಂತೆಯೇ, ಎಲ್ಲರೊಳಗೊಂದಾಗಿಬಿಡುತ್ತದೆ. ಅಥವಾ ಇನ್ನೂ ಹೆಚ್ಚಿನ ನಕಾರಾತ್ಮಕ ವ್ಯಕ್ತಿಯಾಗಿ ಬೆಳೆದಿರುತ್ತದೆ. ಪಾಲಕರ ಮೇಲಿನ ಪ್ರೀತಿ, ವಿಶ್ವಾಸ, ಗೌರವಗಳಿದ್ದ ಜಾಗದಲ್ಲಿ ಅಸಹನೆ, ತಿರಸ್ಕಾರಗಳು ಮನೆಮಾಡಿರುತ್ತವೆ.

ಇದರಿಂದಾಗಿಯೇ ಕೆಲವರು ಯಾರನ್ನೂ ನಂಬಲಾರದ, ಪ್ರೀತಿಸಲಾರದ, ಅವಲಂಬಿಸಲಾಗದ ಮನಸ್ಥಿತಿಯವರಾಗಿರುತ್ತಾರೆ. ಅಂಥವರು ಸಾಂಸಾರಿಕವಾಗಿಯೂ, ಸಾಮಾಜಿಕ ವಾಗಿಯೂ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಸುಪ್ತಮನಸ್ಸಿನ ಸಮಸ್ಯೆಗಳನ್ನು 'ರಿಗ್ರೆಶನ್ ಥೆರಪಿ'ಯಿಂದ ಮಾತ್ರ ಸ್ವಲ್ಪ ಕಡಿಮೆ ಮಾಡಬಹುದು.

ಗಣಿತದ ಶಿಕ್ಷಕರನ್ನು ಇಷ್ಟಪಡುವ ಮಗುವಿಗೆ ಗಣಿತ ಸುಲಭವಾಗುತ್ತದೆ. ಅವರನ್ನು ಇಷ್ಟ ಪಡದ ಮಗುವಿಗೆ ಗಣಿತ ಕಷ್ಟವಾಗುತ್ತದೆ. ಮೊದಲು ಮಕ್ಕಳ ಮನಸ್ಸನ್ನು ಗೆದ್ದ ಶಿಕ್ಷಕರು ಆದರ್ಶ ಶಿಕ್ಷಕರಾಗಿರುತ್ತಾರೆ. ಇದು ಸೋಜಿಗವೆನ್ನಿಸಿದರೂ, ಸತ್ಯ. ಸಾಮಾನ್ಯವಾಗಿ ಯಾವುದೇ ಮಗುವಿಗೆ ಯಾವುದೇ ವಿಷಯವನ್ನು ಕಲಿಯುವುದು ಕಷ್ಟವೇನಲ್ಲ. ಅದನ್ನು ಕಲಿಸುವವರು ಮೊದಲು ಮಗುವಿಗೆ ಇಷ್ಟವಾಗಬೇಕು. ಇದು ಮುಖ್ಯ!

ಮಗುವಿನ ಸುಪ್ತಮನಸ್ಸಿನಲ್ಲಿ ಅದರ ಬಾಲ್ಯದಲ್ಲಿ ಅಚ್ಚಾದ ಆಲೋಚನೆಗಳು, ನಂಬಿಕೆಗಳು ಮಾತ್ರ ಪ್ರೌಢವ್ಯಕ್ತಿಯಾಗಿ ಅಭಿವ್ಯಕ್ತವಾಗುತ್ತವೆ. ಮಗುವಿನ ಸುಪ್ತಮನಸ್ಸಿನಲ್ಲಿ ನಕಾರಾತ್ಮಕ ವಿಷಯಗಳು ಅಚ್ಚಾದ ಪರಿಣಾಮದಿಂದಾಗಿಯೇ ಮುಂದೆ ಅಪರಾಧಿಗಳಾಗಿಯೂ, ಸಮಾಜಕಂಟಕರಾಗಿಯೂ ರೂಪಗೊಳ್ಳುತ್ತಾರೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಸಮಾಜ ವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಬಹುಆಯ್ಕೆ ಪ್ರಶ್ನೆಗಳು

10) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?

ಎ) ರಾಮ ವರ್ಮಾ ಬಿ) ಮಾರ್ತಾಂಡ ವರ್ಮ
ಸಿ) ಅನಂತ ವರ್ಮಾ ಡಿ) ಮೇಲಿನ ಯಾರೂ ಅಲ್ಲ

ಉತ್ತರ:–(ಬಿ) ಮಾರ್ತಾಂಡ ವರ್ಮ

II) ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.

1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ....

2) ಭಾರತ .ಹಾಗೂ. ಯೂರೋಪ್ ನಡುವೆ ಹೊಸ ಜಲ ಮಾರ್ಗವನ್ನು.......................... ಕಂಡುಹಿಡಿದರು

3) ಭಾರತದಲ್ಲಿ ಫ್ರೆಂಚರ ರಾಜಧಾನಿ..........................

4) ರಾಬರ್ಟ್ ಕ್ಲೈವನು 1757ರಲ್ಲಿ ಸಿರಾಜ್–ಉದ್–ದೌಲನ ಮೇಲೆ..............................ಕದನ ಸಾರಿದನು

ಉತ್ತರ: (1) ಆಲ್ಫೋನ್ಸೊ–ಡಿ–ಅಲ್ಬುಕರ್ಕ್ (2) ಪೋರ್ಚುಗೀಸರು (3) ಪಾಂಡಿಚೇರಿ (4) ಪ್ಲಾಸಿ

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಭಾರತದ ಯಾವೆಲ್ಲಾ ಪದಾರ್ಥಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು?

ಉತ್ತರ:– ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.

2) 'ಕಾನ್‌ಸ್ಟಾಂಟಿನೋಪಲ್ ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು'. ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:– ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು. ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.

3) ಪ್ರಾರಂಭದಲ್ಲಿ ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು?

ಉತ್ತರ:– ಭಾರತದ ಸಾಂಬಾರು ಪದಾರ್ಥಗಳನ್ನು ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡುವ ಮೂಲಕ ಯುರೋಪಿಯನ್ನರೊಂದಿಗೆ (ಪ್ರಾರಂಭದಲ್ಲಿ) ವ್ಯಾಪಾರ ನಡೆಯುತ್ತಿತ್ತು. ವಿಶೇಷವಾಗಿ ಮೆಣಸು, ಶುಂಠಿ ಮೊದಲಾದ ವಸ್ತುಗಳಿಗೆ ಯುರೋಪಿನಲ್ಲಿ ಬಹಳ ಬೇಡಿಕೆಯಿತ್ತು.

4) ಮಧ್ಯಕಾಲೀನ ಇತಿಹಾಸದ ಸಮಯದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಹೇಗೆ ನಡೆಯುತ್ತಿದ್ದವು?

ಉತ್ತರ:– ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯಂ) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು

5) ಯೂರೋಪಿಯನ್ ರಾಷ್ಟ್ರಗಳಲ್ಲಿ ಭಾರತದ ಯಾವೆಲ್ಲಾ ವಸ್ತುಗಳಿಗೆ ಬಹಳ ಬೇಡಿಕೆಯಿತ್ತು?

ಉತ್ತರ:– ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನಿ, ಏಲಕ್ಕಿ, ಶುಂಠಿ ಮೊದಲಾದ ವಸ್ತುಗಳಿಗೆ ಯೂರೋಪಿನಲ್ಲಿ ಬಹಳ ಬೇಡಿಕೆಯಿತ್ತು.

6) ಮಧ್ಯಕಾಲೀನ ಇತಿಹಾಸದಲ್ಲಿ ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಅರಬ್ಬರು ಏಕಸ್ವಾಮ್ಯ ಸಾಧಿಸಿದ್ದರೆ, ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಯಾವ ದೇಶದ ವರ್ತಕರು ಏಕಸ್ವಾಮ್ಯ ಸಾಧಿಸಿದ್ದರು?

ಉತ್ತರ:– ಇಟಲಿ

7) ಭಾರತದೊಡನೆ ವ್ಯಾಪಾರವಹಿವಾಟು ನಡೆಸಲು ಯೂರೋಪಿಯನ್ನರಿಗೆ ಹೊಸ ಜಲಮಾರ್ಗವನ್ನು ಯಾವ ಕಾರಣಕ್ಕಾಗಿ ಕಂಡುಹಿಡಿಯ ಬೇಕಾಯಿತು? ಹಾಗೂ ಯಾವುದು ಇವರ ನೆರವಿಗೆ ಬಂದವು?

ಉತ್ತರ:– ಭಾರತ (ಏಷ್ಯಾ) ಮತ್ತು ಯುರೋಪ್ ನಡುವಿನ ವ್ಯಾಪಾರ ಮತ್ತು ವ್ಯವಹಾರಗಳು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು. 1453ರಲ್ಲಿ ಆಟೋಮಾನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು. ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು. ಇದರಿಂದಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿರಲಿಲ್ಲ. ಇದೇ ವೇಳೆ ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಲಾರಂಭಿಸಿದರು. ಇದಕ್ಕೆ ಪೂರಕವಾಗಿ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪನ), ಸಿಡಿಮದ್ದು, ಮೊದಲಾದವುಗಳು ನೆರವಿಗೆ ಬಂದವು

8) 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗ ಯಾರು?

ಉತ್ತರ:– 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗನೆಂದರೆ ಪೋರ್ಚುಗೀಸ್ ನಾವಿಕ ವಾಸ್ಕೊಡಗಾಮ

9) ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ. ಪೋರ್ಚುಗೀಸ್ ನಾವಿಕ ಬಂದುದರಿಂದ ಆದ ಪರಿವರ್ತನೆ ಏನು?

ಉತ್ತರ:– ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ ಪೋರ್ಚುಗೀಸ್ ನಾವಿಕ ಬಂದುದರಿಂದ ಅವರಿಂದ ಪ್ರೇರಣೆಗೊಂಡ ಯುರೋಪಿನ ಡಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದವು. ಈ ಬೆಳವಣಿಗೆಯು ಕಾಲಾನುಕ್ರಮದಲ್ಲಿ ಭಾರತವು ವಸಾಹತು ರಾಷ್ಟ್ರವಾಗಿ ಪರಿವರ್ತನೆಗೊಳ್ಳಬೇಕಾಯಿತು.

ಭಾರತವನ್ನು ವಸಾಹತುವಾಗಿ ಪರಿವರ್ತಿಸಿದ ಯೂರೋಪಿಯನ್ ರಾಷ್ಟ್ರಗಳ ಚರಿತ್ರೆಯಲ್ಲಿಯೂ ಸಹಾ ನಿರ್ಣಾಯಕ ಬದಲಾವಣೆಗಳಾದವು. ಈ ಮೊದಲಾದ ಪರಿವರ್ತನೆಯನ್ನು ಇತಿಹಾಸದಲ್ಲಿ ನೋಡುವಂತಾಯಿತು.

10) ಜಲಮಾರ್ಗದ ಮೂಲಕ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊಟ್ಟಮೊದಲ ಯುರೋಪಿಯನ್ನರು ಪೋರ್ಚುಗೀಸರಾದರೆ ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು ಯಾರು?

ಉತ್ತರ:– ಪೋರ್ಚುಗೀಸರು

11) ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ ಯಾರು ಭಾರತಕ್ಕೆ ಬಂದನು.?

ಉತ್ತರ:– ಫ್ರಾನ್ಸಿಸ್ಕೊ ಡಿ ಆಲ್ಮೇಡ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC: MATHS

MATRICES

7. Write a brief note on the Subtraction of matrices.

Ans:- If A and B are matrices of the same order then A - B is defined to be a matrix obtained by subtracting each element of B from the corresponding element of A.

$$\text{If } A=\left[a_{ij}\right];\ B=\left[b_{ij}\right];$$

Wherein, i = 1, 2, 3.......m & j = 1, 2, 3........n

then $A - B = \left[a_{ij} - b_{ij}\right]$;

Eg:–If $A=\begin{bmatrix}8&5\\4&9\end{bmatrix}$ & $B=\begin{bmatrix}5&3\\8&2\end{bmatrix}$ then A–B=?

Soln:– $A-B=\begin{bmatrix}8-5&5-3\\4-8&9-2\end{bmatrix}=\begin{bmatrix}3&2\\-4&7\end{bmatrix}$

Problems:-

1. If $\begin{bmatrix}x+3&z+4&2y-7\\-6&a-1&0\\b-3&-21&0\end{bmatrix}=\begin{bmatrix}0&6&3y-2\\-6&-3&2c+2\\2b+4&-21&0\end{bmatrix}$

Find the values of a, b, c, x, y and z.

Soln:- **Given that the matrices are equal**

$x+3=0 \Rightarrow x=-3$

$z+4=6 \Rightarrow z=6-4 \Rightarrow z=2$

$a-1=-3 \Rightarrow a=-3+1 \Rightarrow a=-2$

$2c+2=0 \Rightarrow c=\frac{-2}{2} \Rightarrow c=-1$

$b-3=2b+4 \Rightarrow 2b-b=-4-3 \Rightarrow b=-7$

$2y-7=3y-2 \Rightarrow 3y-2y=-7+2 \Rightarrow y=-5$

2. If $A=\begin{bmatrix}a+b&b^2+2\\0&-6\end{bmatrix}$ & $B=\begin{bmatrix}2a+1&3b\\0&b^2-5b\end{bmatrix}$ and also A=B, find the values of a and b?

Soln:- Given, A = B

∴ from equality of matrices we get,

$a+b=2a+1$ ....(i)

$b^2+2=3b$ ....(ii)

$-6=b^2-5b$ ....(iii)

From (i) we get, $b-a=1$.......(iv)

From (ii) we get, $b^2-3b+2=0$......(v)

$(b-2)(b-1)=0$

$\Rightarrow b=2$ and $b=1$

But b = 1 does not satisfy the eqn (iii) and b = 2 agrees with it.

Hence b = 2.

Substituting for b as 2 in (iv), we get a = 1

∴ values of a & b are 1 & 2 respectively.

3. Solve for A & B if $2A+3B=\begin{bmatrix}-1&1\\1&-1\end{bmatrix}$ **and** $3A+2B=\begin{bmatrix}1&-1\\-1&1\end{bmatrix}$.

Soln:- $2A+3B=\begin{bmatrix}-1&1\\1&-1\end{bmatrix}$ ....(i)

$3A+2B=\begin{bmatrix}1&-1\\-1&1\end{bmatrix}$.........(ii)

Multiplying eqn (i) by 2 & eqn (ii) by 3

we get, $4A+6B=\begin{bmatrix}-2&2\\2&-2\end{bmatrix}$.......(iii)

and $9A+6B=\begin{bmatrix}3&-3\\-3&3\end{bmatrix}$.......(iv)

Solving simultaneous eqns (iii) & (iv)

we get, $-5A=\begin{bmatrix}-5&5\\5&-5\end{bmatrix} \Rightarrow A=\begin{bmatrix}1&-1\\-1&1\end{bmatrix}$

Substituting the value of A in the eqn

$2A+3B=\begin{bmatrix}-1&1\\1&-1\end{bmatrix}$

$3B=\begin{bmatrix}-1&1\\1&-1\end{bmatrix}-2A=\begin{bmatrix}-1&1\\1&-1\end{bmatrix}-2\begin{bmatrix}1&-1\\-1&1\end{bmatrix}$

$3B=\begin{bmatrix}-1&1\\1&-1\end{bmatrix}-\begin{bmatrix}2&-2\\-2&2\end{bmatrix}=\begin{bmatrix}-3&3\\3&-3\end{bmatrix}$

$\therefore B=\begin{bmatrix}-1&1\\1&-1\end{bmatrix}$

Substituting the value of A in the eqn

$2A+3B=\begin{bmatrix}-1&1\\1&-1\end{bmatrix}$

$3B=\begin{bmatrix}-1&1\\1&-1\end{bmatrix}-2A=\begin{bmatrix}-1&1\\1&-1\end{bmatrix}-2\begin{bmatrix}1&-1\\-1&1\end{bmatrix}$

$=\begin{bmatrix}-1&1\\1&-1\end{bmatrix}-\begin{bmatrix}2&-2\\-2&2\end{bmatrix}=\begin{bmatrix}-3&3\\3&-3\end{bmatrix}$

$\Rightarrow B=\begin{bmatrix}-1&1\\1&-1\end{bmatrix}$

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

Multiplication of matrices

Write a brief note on the Multiplication of matrices

Ans:- If A is a matrix of the order m x n and B is a matrix of the order n x p then the product AB is defined and is of order m x p.

Thus AB is defined only if the number of columns of A is equal to the number of rows of B.

$$\text{If } A=\left[a_{ij}\right];\ B=\left[b_{jk}\right];$$

Wherein, i = 1, 2, 3........m, and j = 1, 2, 3........n; k = 1, 2,.......p be two matrices of order m x n and n x p respectively.

Problems:-

1. If $A=\begin{bmatrix}5&-3\\-1&2\end{bmatrix}$ & $B=\begin{bmatrix}-2&-1\\4&7\end{bmatrix}$; **find AB.**

Soln: $A=\begin{bmatrix}5&-3\\-1&2\end{bmatrix}$ & $B=\begin{bmatrix}-2&-1\\4&7\end{bmatrix}$

$AB=\begin{bmatrix}5&-3\\-1&2\end{bmatrix} \times \begin{bmatrix}-2&-1\\4&7\end{bmatrix}$

$AB=\begin{bmatrix}(5\times-2)+(-3\times4)&(5\times-1)+(-3\times7)\\(-1\times-2)+(2\times4)&(-1\times-1)+(2\times7)\end{bmatrix}$

$AB=\begin{bmatrix}-10-12&-5-21\\2+8&1+14\end{bmatrix}=\begin{bmatrix}-22&-26\\10&15\end{bmatrix}$

ವಿದ್ಯಾರ್ಥಿ ವೇತನ ಕೈಪಿಡಿ

ಪದವಿ ವಿದ್ಯಾರ್ಥಿಗಳಿಗೆ

ಕ್ಯಾಡೆನ್ಸ್ ಸ್ಕಾಲರ್‌ಶಿಪ್ ಯೋಜನೆಯು ಪದವಿ ಮತ್ತು ವೃತ್ತಿಪರ ಕೋರ್ಸ್ ತೆಗೆದುಕೊಂಡಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುತ್ತದೆ.

ಅರ್ಹತೆ: ಭಾರತೀಯ ಪ್ರಜೆಯಾಗಿರಬೇಕು. 12ನೇ ತರಗತಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಕಡಿಮೆ ಆದಾಯ ಹೊಂದಿರಬೇಕು. ಎಸ್‌ಟಿಇಎಂ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಮತ್ತು ಅಂಗವಿಕಲ ವಿದ್ಯಾರ್ಥಿಗಳು, ಲೈಂಗಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಆದ್ಯತೆ.

ಆರ್ಥಿಕ ನೆರವು: ಪ್ರಮುಖ ಶೈಕ್ಷಣಿಕ ವೆಚ್ಚಗಳನ್ನು ಭರಿಸಲು ಆರ್ಥಿಕ ನೆರವು.

ಅರ್ಜಿ ಸಲ್ಲಿಸಲು ಕೊನೆ ದಿನ: 31-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/TCSP5

ಕಿರಾಣಿ ಅಂಗಡಿ ಮಾಲೀಕರ ಮಕ್ಕಳಿಗೆ

ಕಿರಾಣಿ ಅಂಗಡಿ ಮಾಲೀಕರ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ನಿರ್ಮಿಸಲು ಫ್ಲಿಪ್‌ಕಾರ್ಟ್ ಫೌಂಡೇಷನ್ ವಿದ್ಯಾರ್ಥಿವೇತನವನ್ನು ನೀಡುತ್ತಿದೆ. ವೃತ್ತಿಪರ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಪದವಿ ಕೋರ್ಸ್‌ಗಳಿಗೆ ದಾಖಲಾಗಿರುವ ಕಿರಾಣಿ ಅಂಗಡಿ ಮಾಲೀಕರ ಮಕ್ಕಳ ಸಬಲೀಕರಣಕ್ಕಾಗಿ ಈ ವಿದ್ಯಾರ್ಥಿವೇತನವು ಮೀಸಲಾಗಿದೆ.

ಅರ್ಹತೆ: ಅಭ್ಯರ್ಥಿಗಳು ಪ್ರಸ್ತುತ ಭಾರತದಲ್ಲಿನ ಸರ್ಕಾರಿ ಕಾಲೇಜುಗಳಲ್ಲಿ ವೃತ್ತಿಪರ ಪದವಿ ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಮ್ಯಾಥಮ್ಯಾಟಿಕ್ಸ್) ಕೋರ್ಸ್‌ಗಳ 1ನೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿರಬೇಕು. ಹೆತ್ತವರಲ್ಲಿ ಒಬ್ಬರು ಕಿರಾಣಿ ಅಂಗಡಿಯ ಮಾಲೀಕರಾಗಿರಬೇಕು (ಕೆಎಸ್‌ಒ). ಅಭ್ಯರ್ಥಿಗಳು ತಮ್ಮ 12ನೇ ತರಗತಿಯ ಪರೀಕ್ಷೆಗಳಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ಸೇರಿ ₹5 ಲಕ್ಷವನ್ನು ಮೀರಬಾರದು.

ಆರ್ಥಿಕ ಸಹಾಯ: ₹50,000 ನಿಗದಿತ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: 01-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/FLIP1

ಬರ್ಮಿಂಗ್ಹ್ಯಾಮ್ ಸ್ಕಾಲರ್‌ಶಿಪ್

ಬರ್ಮಿಂಗ್ಹ್ಯಾಮ್ ವಿಶ್ವವಿದ್ಯಾಲಯ ನೀಡುವ ಸ್ಕಾಲರ್‌ಶಿಪ್ ಇದಾಗಿದೆ.

ಅರ್ಹತೆ: ಬರ್ಮಿಂಗ್ಹ್ಯಾಮ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕೋರ್ಸ್‌ಗೆ ದಾಖಲಾಗಲು ಅವಕಾಶ ಪಡೆದ ಭಾರತೀಯ ವಿದ್ಯಾರ್ಥಿಗಳು.

ಆರ್ಥಿಕ ನೆರವು: ಬೋಧನಾ ಶುಲ್ಕವಾಗಿ £6,000 (ಸರಿಸುಮಾರು ₹6,50,772)

ಅರ್ಜಿ ಸಲ್ಲಿಸಲು ಕೊನೆಯ ದಿನ: 31-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/UCBD1

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಮನುಷ್ಯನ ಬೆಳವಣಿಗೆಗೆ ಬೇಕಾದಷ್ಟು ಸ್ವಾರ್ಥ ಮಾತ್ರ ಅವನಲ್ಲಿ ಇರಬೇಕು. ಆದರೆ ಅದು ಮಿತಿಮೀರಬಾರದು.
- ಶಿವರಾಮ ಕಾರಂತ

ಬಂಗಾರದ ಬೆಲೆಯಲ್ಲಿ ಜಿಗಿತ ಮಿತ ಬಳಕೆಯೇ ಮದ್ದು

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಳೆದ ವಾರ ಬಂಗಾರದ ಬೆಲೆಯು 10 ಗ್ರಾಂಗೆ ₹1 ಲಕ್ಷ ದಾಟುವ ಮೂಲಕ ದಾಖಲೆ ಸೃಷ್ಟಿಯಾಯಿತು. ನಂತರ, ಬೆಲೆ ಸ್ವಲ್ಪಮಟ್ಟಿಗೆ ಕಡಿಮೆ ಆಯಿತಾದರೂ ಅದೂ ದಾಖಲೆ ಬೆಲೆಯ ಸನಿಹದಲ್ಲೇ ಇದೆ. ಮುಂಬೈ ಚಿನಿವಾರಪೇಟೆಯಲ್ಲಿ ಹೋದ ಶುಕ್ರವಾರ 24 ಕ್ಯಾರೆಟ್ ಚಿನ್ನದ (99.9ರಷ್ಟು ಪರಿಶುದ್ಧತೆ) ದರವು 10 ಗ್ರಾಂಗೆ ₹99 ಸಾವಿರ ಇದ್ದರೆ, 22 ಕ್ಯಾರೆಟ್ ಚಿನ್ನದ ಬೆಲೆಯು ₹92 ಸಾವಿರ ಇತ್ತು. ಬಂಗಾರದ ಬೆಲೆ ಕೆಲವು ತಿಂಗಳಿಂದ ಏರುತ್ತಲೇ ಇದ್ದು, ಇನ್ನಷ್ಟು ಹೆಚ್ಚಳವಾಗುವ ಲಕ್ಷಣಗಳಿವೆ. ಹಾಗೆ ನೋಡಿದರೆ, ಚಿನ್ನದ ದರದ ಇತಿಹಾಸವನ್ನು ಗಮನಿಸಿದಾಗ, ಅದರ ಬೆಲೆಯು ಅಲ್ಪಾವಧಿಯಲ್ಲಿ ಕಡಿಮೆಯಾಗುವುದು ಅಥವಾ ಯಥಾಸ್ಥಿತಿಯಲ್ಲಿ ಇರುವುದನ್ನು ಹೊರತುಪಡಿಸಿದರೆ ಸದಾ ಹೆಚ್ಚುತ್ತಲೇ ಇರುವುದು ಕಂಡುಬರುತ್ತದೆ. ದೀರ್ಘಾವಧಿಯಲ್ಲಿ ಅದರ ಬೆಲೆ ಕಡಿಮೆಯಾಗಿದ್ದೇ ಇಲ್ಲ. ಇನ್ನು, ಈಗ ಇದರ ಬೆಲೆ ಹೆಚ್ಚಳಕ್ಕೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ಪ್ರಸ್ತಾವಗಳು ಹಾಗೂ ತಮ್ಮ ದೇಶದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಗ್ಗೆ ಅವರು ಸಾರ್ವಜನಿಕವಾಗಿ ಬೆದರಿಕೆಯ ವೈಖರಿಯಲ್ಲಿ ಆಡಿದ ಮಾತುಗಳು ಮೂಡಿಸಿರುವ ಆತಂಕ ಕಾರಣವಾಗಿದೆ.



ಅನುತ್ಪಾದಕ ಆಸ್ತಿಯಾದ ಚಿನ್ನದ ಆಮದು ಹೆಚ್ಚಳವು ಆರ್ಥಿಕತೆಯನ್ನು ಅಸಮತೋಲನಗೊಳಿಸುತ್ತದೆ

ಬಡ್ಡಿ ದರ ಇಳಿಸದ ಕಾರಣಕ್ಕಾಗಿ ಫೆಡರಲ್ ರಿಸರ್ವ್ ಮುಖ್ಯಸ್ಥ ಜೆರೋಮ್ ಪೊವೆಲ್ ಅವರನ್ನು ಆ ಸ್ಥಾನದಿಂದ ಶೀಘ್ರವೇ ವಜಾಗೊಳಿಸುವ ಮಾತುಗಳನ್ನು ಟ್ರಂಪ್ ಅವರು ಇತ್ತೀಚೆಗೆ ಆಡಿದ್ದರು. ತದನಂತರ, ಅಂತಹ ಕ್ರಮಕ್ಕೆ ಮುಂದಾಗುವ ಯಾವ ಇರಾದೆಯೂ ತಮಗಿಲ್ಲ ಎಂದು ಟ್ರಂಪ್ ಹೇಳಿಕೆ ನೀಡಿದ್ದರೂ ಅನಿಶ್ಚಿತತೆಯು ಎಲ್ಲಾ ಮಾರುಕಟ್ಟೆಗಳ ಮೇಲೂ ಪ್ರಭಾವ ಬೀರಿದೆ. ಚಿನ್ನದ ಬೆಲೆಯು ಮಾರುಕಟ್ಟೆಯ ಪ್ರವೃತ್ತಿಗಳಿಗೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸುತ್ತದೆ ಎಂಬುದು ಇಲ್ಲಿ ಗಮನಾರ್ಹ.

ಸುಂಕ ಸಮರವು ಹಣದುಬ್ಬರ ಮತ್ತು ಬಡ್ಡಿ ದರ ಹೆಚ್ಚಳಕ್ಕೆ ಎಡೆಮಾಡಿಕೊಡುತ್ತದೆ ಎಂಬುದು ಚಿಂತೆಗೆ ಕಾರಣವಾಗಿದೆ. ಫೆಡರಲ್ ರಿಸರ್ವ್ ವಿರುದ್ಧ ಯಾವುದೇ ಬಗೆಯ ಕ್ರಮ ಕೈಗೊಂಡರೂ ಅದು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಗಬಹುದು. ಯಾವುದೇ ಆರ್ಥಿಕ ಅಥವಾ ರಾಜಕೀಯ ಅನಿಶ್ಚಿತತೆಯ ಸನ್ನಿವೇಶದಲ್ಲಿ ಬಂಗಾರದ ಮೇಲಿನ ಹೂಡಿಕೆಯು ಅತ್ಯಂತ ಸುರಕ್ಷಿತವಾದುದಾಗಿರುತ್ತದೆ. ಕರೆನ್ಸಿ ಮೌಲ್ಯದಲ್ಲಿನ ಕುಸಿತದಿಂದ ಆಗುವ ನಷ್ಟವನ್ನು ತಪ್ಪಿಸಿಕೊಳ್ಳಲು ಚಿನ್ನವನ್ನು ಖರೀದಿಸಿ ದಾಸ್ತಾನು ಮಾಡಿಕೊಳ್ಳಲಾಗುತ್ತದೆ. ಹಣದುಬ್ಬರದ ಸಂದರ್ಭವು ಬಂಗಾರದ ಬೆಲೆ ಏರುಮುಖವಾಗಲು ಇಂಬು ನೀಡುತ್ತದೆ. ಪ್ರಸ್ತುತ ಡಾಲರ್ ಬೆಲೆಯಲ್ಲಿನ ಕುಸಿತವು ಚಿನ್ನದ ಬೆಲೆ ಹೆಚ್ಚಳಕ್ಕೆ ಮುಖ್ಯ ಕಾರಣವಾಗಿದೆ. ಇದೀಗ ಡಾಲರ್ ಬೆಲೆಯು 2022ರ ನಂತರದಲ್ಲಿನ ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿದಿದೆ. ಡಾಲರ್ ಯಾವಾಗ ದುರ್ಬಲಗೊಳ್ಳುತ್ತದೋ ಆಗ ಇತರ ಕರೆನ್ಸಿಗಳನ್ನು ಹೊಂದಿರುವ ಹೂಡಿಕೆದಾರರಿಗೆ ಕಡಿಮೆ ಬೆಲೆಯಲ್ಲಿ ಚಿನ್ನ ಕೊಳ್ಳುವ ಅವಕಾಶ ಒದಗುತ್ತದೆ. ಹೀಗಾಗಿ, ಚಿನ್ನ ಖರೀದಿಗೆ ಬೇಡಿಕೆ ಹೆಚ್ಚುತ್ತದೆ. ಇದರ ಜೊತೆಗೆ ಅಮೆರಿಕದ ಆರ್ಥಿಕ ಪರಿಸ್ಥಿತಿ, ಬಿಗಡಾಯಿಸುತ್ತಿರುವ ಅಮೆರಿಕದ ಸಾಲ ಬಿಕ್ಕಟ್ಟು, ಚೀನಾ, ಜಾಗತಿಕ ಸೆಂಟ್ರಲ್ ಬ್ಯಾಂಕುಗಳು ಹಾಗೂ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಮುಂದುವರಿಕೆ ಇವು ಇದಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ. ಉಕ್ರೇನ್ ಯುದ್ಧ ಹಾಗೂ ಇತರ ಜಾಗತಿಕ ಸಮಸ್ಯೆಗಳು ಹುಟ್ಟುಹಾಕಿರುವ ಭೌಗೋಳಿಕ- ರಾಜಕೀಯ ಉದ್ವಿಗ್ನ ಸ್ಥಿತಿಗಳು ಕೂಡ ಚಿನ್ನದ ಬೆಲೆ ಏರಿಕೆಯಲ್ಲಿ ಪಾತ್ರ ವಹಿಸಿವೆ.

ಬಂಗಾರದ ಬೆಲೆಯಲ್ಲಿನ ಹೆಚ್ಚಳವು ಭಾರತದ ಮೇಲೆ ಗಮನಾರ್ಹ ಪ್ರಭಾವ ಬೀರುತ್ತದೆ. ಚೀನಾದ ನಂತರ ಭಾರತವು ಪ್ರಪಂಚದ ಎರಡನೇ ದೊಡ್ಡ ಚಿನ್ನದ ಮಾರುಕಟ್ಟೆಯಾಗಿದೆ. ನಮ್ಮಲ್ಲಿ ಹಳದಿ ಲೋಹಕ್ಕೆ ಇರುವ ಬೇಡಿಕೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದ್ದು, ಈ ಪ್ರಮಾಣ 2023ರಲ್ಲಿ 761 ಟನ್‌ಗಳಾಗಿದ್ದರೆ, 2024ರಲ್ಲಿ 802.8 ಟನ್‌ಗಳನ್ನು ದಾಖಲಿಸಿದೆ. ಚಿನ್ನದ ಬೇಡಿಕೆ ಮೌಲ್ಯವು 2024ರಲ್ಲಿ ₹5.15 ಲಕ್ಷ ಕೋಟಿ ತಲುಪಿದ್ದು, ಇದು ಶೇಕಡ 31ರಷ್ಟು ವೃದ್ಧಿಯಾಗಿದೆ. ಹಾಗೆ ನೋಡಿದರೆ, ನಮ್ಮ ದೇಶದಲ್ಲಿ ಚಿನ್ನವು ಸಾಂಸ್ಕೃತಿಕ ಮಹತ್ವ ಹೊಂದಿದ ಉತ್ಪನ್ನವೇ ವಿನಾ ಆರ್ಥಿಕತೆಗೆ ಕೊಡುಗೆ ನೀಡುವ ಉತ್ಪನ್ನವಲ್ಲ. ಅನುತ್ಪಾದಕ ಆಸ್ತಿಯಾದ ಚಿನ್ನದ ಆಮದು ಹೆಚ್ಚಳವು ಆರ್ಥಿಕತೆಯನ್ನು ಅಸಮತೋಲನಗೊಳಿಸುತ್ತದೆ. ಅದರ ಬೆಲೆ ಅಧಿಕಗೊಳ್ಳುವುದು ಕಳ್ಳಸಾಗಣೆಯನ್ನು ಹೆಚ್ಚಿಸುತ್ತದೆ. ಚಿನ್ನದ ಮಿತ ಬಳಕೆಗೆ ಸಂಬಂಧಿಸಿದಂತೆ ಹಲವಾರು ವರ್ಷಗಳಿಂದ ಪ್ರಚಾರ ಅಭಿಯಾನ ಮಾಡುತ್ತಿದ್ದರೂ ಅದು ಯಾವುದೇ ರೀತಿ ಪರಿಣಾಮವನ್ನು ಬೀರಿಲ್ಲ. ಇವೆಲ್ಲದರ ಮಧ್ಯೆಯೇ ದೇಶವು ಈಗ ಮದುವೆ ಶುಭಕಾರ್ಯಗಳ ಋತುವಿಗೆ ಕಾಲಿಡುತ್ತಿದೆ. ವಿಶೇಷವಾಗಿ, ಆರ್ಥಿಕ ಬೆಳವಣಿಗೆಯು ಮಂದಗತಿಗೆ ತಿರುಗುತ್ತಿರುವ ಸಂದರ್ಭದಲ್ಲಿ ಅಧಿಕ ಚಿನ್ನದ ದರ ಹಲವರ ಬಜೆಟ್ ಲೆಕ್ಕಾಚಾರಗಳನ್ನು ಅಸ್ತವ್ಯಸ್ತಗೊಳಿಸುತ್ತದೆ.

ದಿನದ ಟ್ವೀಟ್

ಪರಿಸರ ಸಮತೋಲನಕ್ಕೆ ಶ್ರಮಿಸೋಣ

ಪರಿಸರದ ಸಮತೋಲನ ಕಾಪಾಡುವಲ್ಲಿ ಕತ್ತೆಕಿರುಬಗಳು ಪ್ರಮುಖ ಪಾತ್ರ ವಹಿಸುತ್ತವೆ. ಇಂತಹ ಜೀವಿಗಳನ್ನು ಕಾಪಾಡಲು ಶ್ರಮಿಸೋಣ. ಅಂತರರಾಷ್ಟ್ರೀಯ ಕತ್ತೆಕಿರುಬ ದಿನದ ಶುಭಾಶಯಗಳು!

ಅರಣ್ಯ ಇಲಾಖೆ, ಕರ್ನಾಟಕ

ಕಿಡಿನುಡಿ

ಸಾಮಾನ್ಯ ಜನ ಯುದ್ಧ ಆಗಿಯೇ ಹೋಗಲಿ ಎಂದು ಉದ್ವೇಗದಿಂದ ಹೇಳುವುದು ಸಹಜ. ಆದರೆ ಜವಾಬ್ದಾರಿಯುತ ಸ್ಥಾನದಲ್ಲಿ ಯಾರೇ ಇದ್ದರೂ ಅವರು ಯುದ್ಧದ ವಿಷಯದಲ್ಲಿ ಲಘುವಾಗಿ ಮಾತನಾಡಬಾರದು. ಸಿದ್ದರಾಮಯ್ಯ ಅವರು ಯುದ್ಧ ಬೇಡ ಅಂತ ಹೇಳಿದ್ದು ತಪ್ಪು ಎಂದು ಕೆಲವರು ಹೇಳುತ್ತಿದ್ದಾರೆ. ನೀವು ಮೋದಿ ಹತ್ತಿರ ಹೋಗಿ ಯುದ್ಧ ಮಾಡ್ತೀರಾ ಅಂತ ಕೇಳಿದ್ರೆ ಅವರೂ ಅದನ್ನೇ ಹೇಳುತ್ತಾರೆ.

ಕೃಷ್ಣ ಸಿ.ಕೆ.

25 ವರ್ಷಗಳ ಹಿಂದೆ

ಶುಕ್ರವಾರ, 28-4-2000

- **ಒಂದೇ ದಿನದಲ್ಲಿ 84 ಹೊಸ ಕರುಳುಬೇನೆ ಪ್ರಕರಣಗಳು ದಾಖಲು**

ಧಾರವಾಡ, ಏ. 27– ಹುಬ್ಬಳ್ಳಿ- ಧಾರವಾಡ ಅವಳಿ ನಗರ ಸೇರಿದಂತೆ ಧಾರವಾಡ ಜಿಲ್ಲೆಯಲ್ಲಿ ಕರುಳುಬೇನೆ ಉಲ್ಬಣವಾಗುವ ಲಕ್ಷಣಗಳು ಕಾಣಿಸಿವೆ. ಕಳೆದ 24 ತಾಸುಗಳ ಅವಧಿಯಲ್ಲಿ ಜಿಲ್ಲೆಯಲ್ಲಿ 84 ಹೊಸ ಕರುಳು ಬೇನೆ ಪೀಡಿತರನ್ನು ಆಸ್ಪತ್ರೆಗಳಿಗೆ ದಾಖಲು ಮಾಡಲಾಗಿದೆ ಎಂದು ಜಿಲ್ಲಾ ಆಡಳಿತ ನೀಡಿರುವ ಪ್ರಕಟಣೆ ತಿಳಿಸಿದೆ.

- **ಶಾಂತಾದೇವಿ ಮಾಳವಾಡ ಅಧ್ಯಕ್ಷೆಯಾಗಿ ಆಯ್ಕೆ**

ಬೆಂಗಳೂರು, ಏ. 27 – ಹಿರಿಯ ಲೇಖಕಿ ಶಾಂತಾದೇವಿ ಮಾಳವಾಡ ಅವರನ್ನು ಬಾಗಲಕೋಟೆಯಲ್ಲಿ ನಡೆಯಲಿರುವ 68ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಇಂದು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಇದರೊಂದಿಗೆ ಸಮ್ಮೇಳನಾಧ್ಯಕ್ಷತೆ ಗೌರವಕ್ಕೆ ಎರಡನೇ ಬಾರಿ ಲೇಖಕಿಯೊಬ್ಬರು ಪಾತ್ರರಾದಂತಾಗಿದೆ. ಈ ಮೊದಲು 1974ರಲ್ಲಿ ಮಂಡ್ಯದಲ್ಲಿ ನಡೆದಿದ್ದ 48ನೇ ಸಾಹಿತ್ಯ ಸಮ್ಮೇಳನಕ್ಕೆ ಲೇಖಕಿ ಜಯದೇವಿ ತಾಯಿ ಲಿಗಾಡೆ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು.

ಬಾಗಲಕೋಟೆ ಸಮ್ಮೇಳನಕ್ಕೆ ಲೇಖಕಿಯನ್ನೇ ಅಧ್ಯಕ್ಷರನ್ನಾಗಿ ಮಾಡಬೇಕು ಎಂಬ ಸಾಹಿತ್ಯ ವಲಯದ ಒತ್ತಾಸೆ ಶಾಂತಾದೇವಿ ಅವರ ಆಯ್ಕೆಯೊಂದಿಗೆ ಈಡೇರಿದಂತಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 28-4-1975

- **ಕನ್ನಡ ಶಾಲೆಗಳನ್ನು ಮುಚ್ಚಲು ಕೇರಳ ಸರ್ಕಾರ ಆಜ್ಞೆ ಮಾಡಿಲ್ಲ**

ಮಂಗಳೂರು, ಏ. 27 – ಕಾಸರಗೋಡು ತಾಲ್ಲೂಕಿನ ಕನ್ನಡ ಶಾಲೆಗಳನ್ನು ಮುಚ್ಚಲು ಕೇರಳ ಸರ್ಕಾರ ಯಾವ ಆಜ್ಞೆಯನ್ನೂ ಹೊರಡಿಸಿಲ್ಲವೆಂದು ಕೇರಳ ವಿಧಾನಸಭೆಯ ಮಂಜೇಶ್ವರ ಕ್ಷೇತ್ರದ ಸದಸ್ಯ ಎಂ.ರಾಮಪ್ಪ ಅವರು ಇಂದು ಇಲ್ಲಿ ತಿಳಿಸಿದರು.

ಈ ಬಗ್ಗೆ ಕರ್ನಾಟಕದ ವಿಧಾನ ಮಂಡಲದಲ್ಲಿ ವ್ಯಕ್ತಪಡಿಸಲಾದ ಕಳವಳ ಮತ್ತು ಪತ್ರಿಕಾ ವರದಿಗಳನ್ನು ಕೇರಳದ ಮುಖ್ಯಮಂತ್ರಿ ಅಚ್ಯುತ ಮೆನನ್ ಅವರ ಗಮನಕ್ಕೆ ತಂದಾಗ ಅವರು ವರದಿಗಳನ್ನು ನಿರಾಕರಿಸಿದರೆಂದು ರಾಮಪ್ಪ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಕಾಸರಗೋಡು ತಾಲ್ಲೂಕಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವ ಬದಲು ಕಳೆದ ವರ್ಷ ಕನ್ನಡ ಮಾಧ್ಯಮದ ಐದು ಪ್ರೌಢ ಶಾಲೆಗಳು ಮತ್ತು ಎರಡು ಪ್ರಾಥಮಿಕ ಶಾಲೆಗಳ ಆರಂಭಕ್ಕೆ ಸರ್ಕಾರ ಅನುಮತಿ ನೀಡಿದೆ' ಎಂದು ಅಚ್ಯುತ ಮೆನನ್ ಅವರು ಹೇಳಿದರೆಂದು ಅವರು ತಿಳಿಸಿದ್ದಾರೆ.

- **ಬೆಲೆ ಸ್ಥಿರತೆ ಸಾಧನೆಗೆ ಉತ್ತಮ ವಾತಾವರಣ**

ನವದೆಹಲಿ, ಏ. 27– ಕಳೆದ 6 ತಿಂಗಳಲ್ಲಿ ಸಾಮಾನ್ಯ ಬೆಲೆ ಮಟ್ಟ ಇಳಿಮುಖವಾಗುತ್ತಿದ್ದರೂ ಬೆಲೆ ಸ್ಥಿರತೆ ಸಾಧಿಸಲು ಮುಂದಿನ ವರ್ಷದಲ್ಲಿ ದೃಢ ಪ್ರಯತ್ನಗಳು ಅವಶ್ಯವೆಂದು ಅಧಿಕೃತ ವಲಯಗಳು ಭಾವಿಸಿವೆ.

ರಾಷ್ಟ್ರದಲ್ಲಿನ ಬೆಲೆ ಪರಿಸ್ಥಿತಿ ಕುರಿತು ಹಣಕಾಸು ಸಚಿವ ಶಾಖೆ ಈಚೆಗೆ ಸಿದ್ಧಪಡಿಸಿದ ಒಂದು ವರದಿಯು ಒಟ್ಟು ಸರಬರಾಜು ಮತ್ತು ಬೇಡಿಕೆ ನಡುವಣ ಅಂತರ ನಿವಾರಣೆ ಆಗುವವರೆಗೆ ಹಣದುಬ್ಬರ ನಿರೋಧಕ ಕ್ರಮಗಳನ್ನು ಮುಂದುವರಿಸಿಕೊಂಡು ಹೋಗಬೇಕಾದುದು ಅಗತ್ಯವೆಂದು ತಿಳಿಸಿದೆ.

ಬೆಂಗಳೂರಿನ ಸಮಸ್ಯೆಗಳನ್ನು ಪರಿಹರಿಸುವ ಸವಾಲು ಮತ್ತು ಕಾಯ್ದೆಯ ಮಿತಿ

ಆಡಳಿತಕ್ಕೆ ಕಾಯಕಲ್ಪ: ಉದ್ದೇಶ ಈಡೇರುವುದೇ?



ವಿಶ್ಲೇಷಣೆ

ಸಂತೋಷ ನರಗುಂದ

ಬಹುಚರ್ಚಿತ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ- 2024ಕ್ಕೆ ರಾಜ್ಯಪಾಲರ ಅಂಕಿತ ಬಿದ್ದಿದೆ, ಈ ಕುರಿತು ಅಧಿಸೂಚನೆಯನ್ನೂ ಹೊರಡಿಸಲಾಗಿದೆ. ಈ ಮೂಲಕ, ಸ್ಥಳೀಯ ಆಡಳಿತದ ದಿಸೆ ನಿರ್ಧರಿಸುವ ಕಾನೂನಾಗಿ ಅದು ಹೊರಹೊಮ್ಮಿದೆ. ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರಕ್ಕೆ ನಿರೀಕ್ಷಿತ ಮಟ್ಟದಲ್ಲಿ ಉತ್ತಮವಾದ ಆಡಳಿತವನ್ನು ಒದಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸಾಧ್ಯವಾಗುತ್ತಿಲ್ಲ ಎಂಬುದು ಈ ಕಾಯ್ದೆಯ ಜಾರಿಗೆ ರಾಜ್ಯ ಸರ್ಕಾರ ನೀಡುತ್ತಿರುವ ಸಮರ್ಥನೆ.

ನೂತನ ಕಾನೂನಿನ ಅಡಿಯಲ್ಲಿ 'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಗರಿಷ್ಠ 7 ನಗರಪಾಲಿಕೆಗಳನ್ನು ರಚಿಸಲು ಅವಕಾಶ ಇದೆ. ಇವುಗಳ ಮೂಲಕ ಒಟ್ಟು 800ರಿಂದ 1,000ಕ್ಕೂ ಹೆಚ್ಚು ಕೌನ್ಸಿಲರ್‌ಗಳನ್ನು ಹೊಂದುವ ಪ್ರಸ್ತಾವ ಇದೆ. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು (ಜಿಬಿಎ) ರಚಿಸಿ, ಅದರ ಅಡಿಯಲ್ಲಿ ಪಾಲಿಕೆಗಳನ್ನು ಸ್ಥಾಪಿಸಲಾಗುವುದು. ಈ ಮೂಲಕ ವಿಕೇಂದ್ರೀಕೃತ ಸ್ಥಳೀಯ ಆಡಳಿತಕ್ಕೆ ಶಕ್ತಿ ತುಂಬಲಾಗುವುದು. ವಿವಿಧ ಪೌರ ಸಂಸ್ಥೆಗಳ ಹೊಣೆಗಾರಿಕೆಯನ್ನು ಸುಗಮಗೊಳಿಸಿ, ಬೃಹತ್ ಬೆಂಗಳೂರು ಪ್ರದೇಶದಲ್ಲಿ ಪರಿಣಾಮಕಾರಿಯಾದ ನಗರಾಡಳಿತವನ್ನು ಖಾತರಿಪಡಿಸುವುದು ಮತ್ತು ಅಭಿವೃದ್ಧಿ ಕಾರ್ಯಗಳನ್ನು ವೇಗವಾಗಿ ಅನುಷ್ಠಾನಗೊಳಿಸುವುದು ಗ್ರೇಟರ್ ಬೆಂಗಳೂರು ಆಡಳಿತ ವ್ಯವಸ್ಥೆಯ ಉದ್ದೇಶ ಎಂಬುದು ಸರ್ಕಾರದ ಪ್ರತಿಪಾದನೆ.

ಆದರೆ ಹೊಸ ಕಾನೂನನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸ್ಥಳೀಯ ಸಂಘ- ಸಂಸ್ಥೆಗಳು ಮತ್ತು ಮತದಾರರ ಜೊತೆ ವ್ಯಾಪಕವಾದ ಸಮಾಲೋಚನೆ ನಡೆಸಲಾಗಿಲ್ಲ ಎಂಬ ಟೀಕೆಗಳು ಬೇರೆ ಬೇರೆ ವಲಯಗಳಿಂದ ವ್ಯಕ್ತವಾಗಿವೆ. ಇನ್ನೊಂದೆಡೆ, ಮೆಟ್ರೊಪಾಲಿಟನ್ ಆಡಳಿತವನ್ನು ಬಲಪಡಿಸಲು ಬೇಕಾದ ತಿದ್ದುಪಡಿಗಳನ್ನು ಮಾಡುವತನಕ ವಿಧಾನ ಪರಿಷತ್ತಿನಲ್ಲಿ ಮಸೂದೆಗೆ ಅಂಗೀಕಾರ ಸಿಗದಂತೆ ನೋಡಿಕೊಳ್ಳಲು ಅಗತ್ಯವಾದ ಸಂಖ್ಯಾಬಲ ವಿರೋಧ ಪಕ್ಷಕ್ಕೆ ಇತ್ತು. ಆದರೂ ಅದು ಹಾಗೆ ಮಾಡದೆ, ತೋರಿಕೆಗೆ ಮಾತ್ರ ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿದೆ.

ಬೆಂಗಳೂರಿನಂತಹ ಮಹಾನಗರದಲ್ಲಿ ಎಲ್ಲ ನಾಗರಿಕರಿಗೆ ಉತ್ಕೃಷ್ಟ ಶಿಕ್ಷಣ, ಆರೋಗ್ಯ ಸೇವೆ ಮತ್ತು ಉದ್ಯೋಗಾವಕಾಶ ಒದಗಿಸುವುದರ ಮೂಲಕ ಅವರ ಜೀವನ ಗುಣಮಟ್ಟ ಸುಧಾರಿಸುವುದು ಸವಾಲಿನ ಕೆಲಸ. ಇದನ್ನು ಸಮರ್ಥವಾಗಿ ನಿಭಾಯಿಸಬೇಕಾದರೆ ನಗರದ ಆಡಳಿತ ವ್ಯವಸ್ಥೆಯು ಸಂಪೂರ್ಣ ಸ್ವಾಯತ್ತವಾಗಿ ಮತ್ತು ಸದೃಢವಾಗಿ ಇರಬೇಕಾಗುತ್ತದೆ. ಈಗ ಜಾರಿಗೆ ಬರಲಿರುವ ವ್ಯವಸ್ಥೆಯು ಬೆಂಗಳೂರಿಗರು ಎದುರಿಸುತ್ತಿರುವ ವಸತಿ, ಕುಡಿಯುವ ನೀರು, ಶುಚಿತ್ವ, ಸಾರಿಗೆ, ಸಂಚಾರ ಮತ್ತು ಭದ್ರತೆಗೆ ಸಂಬಂಧಿಸಿದ ದಿನನಿತ್ಯದ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಸ್ಥಳೀಯ ಸರ್ಕಾರಕ್ಕೆ ಅಗತ್ಯವಿರುವ ಅಧಿಕಾರ ಹಾಗೂ ಸಂಪನ್ಮೂಲಗಳನ್ನು ನೀಡಲಿದೆಯೋ ಇಲ್ಲವೋ ಎಂಬುದು ಕುತೂಹಲ ಕೆರಳಿಸಿದೆ.

ಈ ಸಂದರ್ಭದಲ್ಲಿ, ಹೊಸ ಕಾನೂನು ಬೆಂಗಳೂರಿನ ಪ್ರಸ್ತುತ ಸ್ಥಳೀಯ ಸ್ವಸರ್ಕಾರ (ಲೋಕಲ್ ಸೆಲ್ಫ್ ಗವರ್ನಮೆಂಟ್) ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ನಿವಾರಿಸಿ, ಅಗತ್ಯವಿರುವ ಸುಧಾರಣಾ ಕ್ರಮಗಳನ್ನು ಪರಿಚಯಿಸುವುದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂದು ಅರ್ಥೈಸಿಕೊಳ್ಳುವುದು ಬಹುಮುಖ್ಯ.

ಮಹಾನಗರ ಪಾಲಿಕೆಗೆ ಸಕಾಲದಲ್ಲಿ ಚುನಾವಣೆ ನಡೆಸುವುದು ಹೊಸ ವ್ಯವಸ್ಥೆಯ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. 2020ರ ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿ ಕೌನ್ಸಿಲ್‌ನ ಅವಧಿ ಮುಕ್ತಾಯಗೊಂಡು ಇದೀಗ 55 ತಿಂಗಳುಗಳೇ ಕಳೆದಿವೆ. ಹೀಗಿದ್ದರೂ ಮಹಾನಗರಪಾಲಿಕೆಗೆ ಈವರೆಗೂ ಚುನಾವಣೆ ನಡೆದಿಲ್ಲ. ಈ ಹಿಂದೆಯೂ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯು ಎರಡರಿಂದ ಐದು ವರ್ಷಗಳಷ್ಟು ವಿಳಂಬ ಆಗಿದ್ದ ನಿದರ್ಶನಗಳಿವೆ. ಈ ದೀರ್ಘಕಾಲದ ಸಮಸ್ಯೆಗೆ ಹೊಸ ಅಧಿನಿಯಮವು ತೃಪ್ತಿಕರ ಪರಿಹಾರವನ್ನು ಒದಗಿಸುವಲ್ಲಿ ವಿಫಲವಾಗಿದೆ.

ಸ್ಥಳೀಯ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಯದಿರುವುದಕ್ಕೆ ಕ್ಷೇತ್ರ ಮರುವಿಂಗಡಣೆ ಮತ್ತು ವಾರ್ಡ್ ಮೀಸಲಾತಿ ಗುರುತಿಸುವಿಕೆಯಲ್ಲಿ ರಾಜ್ಯ ಸರ್ಕಾರದ ಹಸ್ತಕ್ಷೇಪವೇ ಕಾರಣ ಎಂದು ಮಹಾಲೇಖಪಾಲರ (ಸಿಎಜಿ) 2020ರ ವರದಿ ಹೇಳಿದೆ. ಸಂವಿಧಾನದ 74ನೇ ತಿದ್ದುಪಡಿಯ ಆಶಯದ ಅನುಸಾರ, ಐದು ವರ್ಷಗಳಿಗೊಮ್ಮೆ ತಪ್ಪದೇ ಚುನಾವಣೆ ನಡೆಯುವುದನ್ನು ಖಾತರಿಪಡಿಸಲು, ಮಹಾನಗರ ಪಾಲಿಕೆಗಳ ಚುನಾವಣೆಯ ಸಂಪೂರ್ಣ ಜವಾಬ್ದಾರಿಯನ್ನು ರಾಜ್ಯ ಚುನಾವಣಾ ಆಯೋಗದಂತಹ ಸ್ವಾಯತ್ತ ಸಂಸ್ಥೆಗೆ ಒಪ್ಪಿಸುವುದು ಅಗತ್ಯ. ಆದರೆ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ಅಧಿನಿಯಮವು ಈ ವಿಷಯದಲ್ಲಿ ಯಾವುದೇ ಸುಧಾರಣೆಯನ್ನು ಪ್ರಸ್ತಾಪಿಸಿಲ್ಲ. ಎಂದಿನಂತೆಯೇ ಕ್ಷೇತ್ರ ಮರುವಿಂಗಡಣೆ ಮತ್ತು ಮೀಸಲಾತಿ ಗುರುತಿಸುವಿಕೆಯ ಅಧಿಕಾರವು ರಾಜ್ಯ ಸರ್ಕಾರದ ಬಳಿಯೇ ಇರಲಿದೆ. ಹಾಗಿದ್ದ ಮೇಲೆ ಪ್ರಾಧಿಕಾರದ ಅಡಿಯಲ್ಲಿ ರಚನೆಯಾಗಲಿರುವ ನಗರ ಪಾಲಿಕೆಗಳ ಚುನಾವಣೆಯು ಸಕಾಲದಲ್ಲಿ ನೆರವೇರುವ ಖಾತರಿ ಇಲ್ಲದಂತಾಗಿದೆ.

ಮಹಾಪೌರರಿಗೆ ಐದು ವರ್ಷಗಳಿಗಿಂತ ಕಡಿಮೆ ಆಡಳಿತಾವಧಿಯನ್ನು ನಿಗದಿಪಡಿಸಿರುವ ಕೆಲವೇ ರಾಜ್ಯಗಳ ಪೈಕಿ ಕರ್ನಾಟಕ ಕೂಡ ಒಂದು ಎಂದು ಸಿಎಜಿ ವರದಿಯೇ ಗುರುತಿಸಿದೆ. ಮಹಾನಗರದ ಸರ್ವಾಂಗೀಣ ಅಭಿವೃದ್ಧಿಗಾಗಿ ಮಹಾಪೌರರಿಗೆ ಐದು ವರ್ಷಗಳ ಆಡಳಿತಾವಧಿ ಒದಗಿಸುವುದು ಅಗತ್ಯ. ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುವಲ್ಲಿ ಆಡಳಿತಾವಧಿಯೂ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಹೊಸ ಕಾಯ್ದೆಯ ಅಡಿಯಲ್ಲಿ ನಗರ ಪಾಲಿಕೆಗಳ ಮಹಾಪೌರರಿಗೆ ಐದು ವರ್ಷ ಆಡಳಿತಾವಧಿಯ ಗ್ಯಾರಂಟಿಯೇ ಇಲ್ಲ. ಒಂದೆಡೆ, ನಗರ ಪಾಲಿಕೆಗಳ ಮಹಾಪೌರ ಸ್ಥಾನಕ್ಕೆ ಬರೀ 30 ತಿಂಗಳ ಆಡಳಿತಾವಧಿಯನ್ನು ನಿಗದಿಪಡಿಸಲಾಗಿದೆ. ಇನ್ನೊಂದೆಡೆ, ಜಿಬಿಎ ಮಟ್ಟದಲ್ಲಿ, ಬೆಂಗಳೂರಿನ ನಿವಾಸಿಗಳಿಗೆ ನೇರವಾಗಿ ಉತ್ತರದಾಯಿ ಆಗಿರುವ ಚುನಾಯಿತ ಮೆಟ್ರೊಪಾಲಿಟನ್ ಮೇಯರ್ ಸ್ಥಾನವನ್ನೇ ಕೈಬಿಡಲಾಗಿದೆ. ಜಿಬಿಎ ಕಾರ್ಯಕಾರಿ ಮುಖ್ಯಸ್ಥರಾಗಿ ಮುಖ್ಯಮಂತ್ರಿಯವರೇ ಕಾರ್ಯನಿರ್ವಹಿಸುವುದಾದರೆ, ಅಧಿಕಾರ ವಿಕೇಂದ್ರೀಕರಣದ ಉದ್ದೇಶ ಸಾಕಾರವಾಗುವುದು ಅಸಾಧ್ಯ ಎಂಬುದೇ ಕಳವಳಕ್ಕೆ ಕಾರಣವಾಗಿದೆ.

ಈ ಮೊದಲು, ಬಿಬಿಎಂಪಿ ಕಾಯ್ದೆ- 2020ರ ಅಡಿಯಲ್ಲಿ, ನಾಗರಿಕರು ನಗರದ ಅಭಿವೃದ್ಧಿ ಕುರಿತು ಸಲಹೆಗಳನ್ನು ನೀಡಲು ಮತ್ತು ತಮ್ಮ ನೆರೆಹೊರೆಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ತಂದು ತ್ವರಿತ ಪರಿಹಾರ ಕಂಡುಕೊಳ್ಳಲು ವಾರ್ಡ್ ಸಮಿತಿ, ಪ್ರದೇಶ ಸಭಾ ಹಾಗೂ ವಲಯ ಸಮಿತಿಗಳನ್ನು ರಚಿಸಲು ಅವಕಾಶ ಇತ್ತು. ಆದರೆ ಹೊಸ ಕಾಯ್ದೆಯ ಅಡಿಯಲ್ಲಿ ಪ್ರದೇಶ ಸಭಾಗಳನ್ನು ಮತ್ತು ವಲಯ ಸಮಿತಿಗಳನ್ನು ಕೈಬಿಡಲಾಗಿದೆ. ಅಲ್ಲದೆ, ವಾರ್ಡಿನ ಚುನಾಯಿತ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಲ್ಪಡುವ ವಾರ್ಡ್ ಸಮಿತಿಗಳನ್ನು, ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾಗುವ ವಿಧಾನಸಭಾ ಕ್ಷೇತ್ರ ಮಟ್ಟದ ಸಮಾಲೋಚನೆ ಮತ್ತು ಸಮನ್ವಯ ಸಮಿತಿಗಳ ಅಧೀನಕ್ಕೆ ಒಳಪಡಿಸಲಾಗಿದೆ. ಈ ಮೂಲಕ ಅವುಗಳ ಪಾತ್ರವನ್ನು ದುರ್ಬಲಗೊಳಿಸಲಾಗಿದೆ. ಇದರಿಂದ ವಿಕೇಂದ್ರೀಕೃತ ಆಡಳಿತಕ್ಕೆ ಧಕ್ಕೆಯಾಗುವುದಲ್ಲದೆ ಸ್ಥಳೀಯ ಅಭಿವೃದ್ಧಿ ಕಾರ್ಯಗಳ ಯೋಜನೆ ರೂಪಿಸುವ ಪ್ರಕ್ರಿಯೆಯಲ್ಲಿ ಮತ್ತು ಅವುಗಳ ಅನುಷ್ಠಾನದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಜನಸಾಮಾನ್ಯರ ಪಾಲ್ಗೊಳ್ಳುವಿಕೆಗೆ ತೀವ್ರ ಹಿನ್ನಡೆಯಾಗುವ ಸಾಧ್ಯತೆ ಇದೆ.

ಬೃಹದಾಕಾರದಲ್ಲಿ ವಿಸ್ತರಿಸುತ್ತಿರುವ ಬೆಂಗಳೂರು ಮಹಾನಗರಕ್ಕೆ ಸುಧಾರಿತ ಆಡಳಿತ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶವನ್ನು ಈ ಕಾಯ್ದೆ ಹೊಂದಿದ್ದರೂ ಅದರಲ್ಲಿ ಅನೇಕ ಕೊರತೆಗಳು ಇನ್ನೂ ಹಾಗೆಯೇ ಉಳಿದಿರುವುದು ವಿಷಾದಕರ ಸಂಗತಿ. ರಾಜ್ಯ ಸರ್ಕಾರ ತಾನೇ ರಚಿಸಿದ ಬ್ರ್ಯಾಂಡ್ ಬೆಂಗಳೂರು ಸಮಿತಿಯ ಶಿಫಾರಸುಗಳನ್ನು ಪ್ರಾಮಾಣಿಕವಾಗಿ ಅನುಸರಿಸಿದ್ದರೆ, ಈ ಕಾಯ್ದೆಯು ಇನ್ನೂ ಉತ್ತಮ ಮತ್ತು ಜನಸ್ನೇಹಿ ರೂಪವನ್ನು ಪಡೆಯಬಹುದಿತ್ತು. ಕೆಂಪೇಗೌಡರು ಸ್ಥಾಪಿಸಿದ ಬೆಂಗಳೂರಿಗೆ 21ನೇ ಶತಮಾನಕ್ಕೆ ಅನುಗುಣವಾದ ಒಂದು ಸ್ವಾಯತ್ತ ಮತ್ತು ಆಧುನಿಕ ಮೆಟ್ರೊಪಾಲಿಟನ್ ನಗರ ವ್ಯವಸ್ಥೆಯನ್ನು ಕಲ್ಪಿಸುವ ಒಂದು ಸುವರ್ಣಾವಕಾಶ ಇದರಿಂದ ಕೈತಪ್ಪಿ ಹೋದಂತೆ ಆಗಿದೆ.



ಲೇಖಕ: ಜನಾಗ್ರಹ ಸೆಂಟರ್ ಫಾರ್ ಸಿಟಿಜನ್‌ಷಿಪ್ ಆ್ಯಂಡ್ ಡೆಮಾಕ್ರಸಿ ಸಂಸ್ಥೆಯ 'ಭಾಗವಹಿಸುವಿಕೆಯ ಆಡಳಿತ' ವಿಭಾಗದ ಮುಖ್ಯಸ್ಥ

ಚುರುಮುರಿ



ಗುಟ್ಕಾಗೆ ಹೋದ ಆರೋಗ್ಯ

• ಸುಮಂಗಲಾ

'ಮಂದಿ ಬಸ್ಸು, ರೈಲೊಳಗೆ ಗುಟ್ಕಾ ತಿಂದು ಉಗುಳೂದಲ್ಲದೆ ಈಗ ಮೆಟ್ರೊದೊಳಗೂ ಗುಟ್ಕಾ ಅಗಿಲಾಕೆ ಶುರು ಮಾಡ್ಯಾರೆ' ಎಂದು ಬೆಕ್ಕಣ್ಣ ಸುದ್ದಿ ಓದುತ್ತ ಬೈಯುತ್ತಿತ್ತು.

'ಅಂವಾ ಎಷ್ಟರೆ ಬುದ್ಧಿಗೇಡಿ! ನಮ್ಮ ಮೆಟ್ರೊವಳಗೆ ಅಷ್ಟ್ ಫಳಫಳ ಹೊಳೆಯೂ ಹಂಗ ಒರೆಸಿ, ಕ್ಲೀನಾಗಿಟ್ಟರತಾರೆ, ಅಂತಲ್ಲಿ ಗುಟ್ಕಾ ತಿಂದು, ಮೂಲೆಮೂಲೆವಳಗೆ ಉಗುಳಿ, ಕೆಂಪು ಮೆಟ್ರೊ ಮಾಡಾಕೆ ಹೊಂಟಾನೆ' ಎಂದು ನಾನೂ ಬೈದ್ಯೆ.

'ಅಂವಾ ಪಾಕೀಟು ಬಿಚ್ಚಿ ಬಾಯಿಗೆ ಹಾಕಿಕೊಳ್ಳದು ನೋಡಿ, ಪಕ್ಕದಲ್ಲಿದ್ದಂವ ಒಬ್ಬ ಬೈದ್ರೆ, ಮೆಟ್ರೊ ನಿಂದಷ್ಟೇ ಅಲ್ಲ, ನಮ್ಮದೂ ಐತಿ ಅಂತಾನ, ಎಷ್ಟರೆ ಸೊಕ್ಕು' ಎನ್ನುತ್ತ ವಿಡಿಯೊ ತೋರಿಸಿತು.

'ಅಂವಾ ಒಬ್ಬಾಂವ ಬೈಯೊ ಮುಂದ ಉಳಿದ ಪ್ರಯಾಣಿಕರು ಸುಮ್ಮನೇ ನೋಡಿಕೋತ ಕುಂತಾರೆ. ಗುಟ್ಕಾ ಹಾಕಬ್ಯಾಡಲೇ ಅಂತ ಅಕ್ಕಪಕ್ಕದಲ್ಲಿದ್ದವರೂ ಬೈಯಬೇಕಿತ್ತು'.

'ಅಯ್ಯೋ ನಮಗ್ಯಾಕೆ ಬಿಡು ಅಂತ, ತಮ್ಮ ಮೊಬೈಲು ನೋಡಿಕೊತ ಸುಮ್ಮನೆ ಕುಂದರತಾರ. ಮೆಟ್ರೊದಾಗೆ ಗುಟ್ಕಾ ಸ್ಕ್ಯಾನರ್ ಅಳವಡಿಸಬೇಕು. ಮೊದಲು ಗುಟ್ಕಾ ಬ್ಯಾನ್ ಮಾಡಬಕು' ಬೆಕ್ಕಣ್ಣ ಹುರುಪಿನಿಂದ ವಾದಿಸಿತು.

'ಬಾಲಿವುಡ್‌ನ ನಿನ್ನ ಫೇವರಿಟ್ ಹೀರೊಗಳೆಲ್ಲ ಗುಟ್ಕಾ ಜಾಹೀರಾತು ಕೊಡ್ತಾರಲ್ಲ, ಅವ್ರಿಗೆ ನಾಚಿಕೆಯಾಗಬಕು. ರೊಕ್ಕ ಬರತೈತೆ ಅಂದ್ರ ಎಂಥಾ ಜಾಹೀರಾತಿಗಾದರೂ ನಿಂತು ಪೋಸ್ ಕೊಡತಾರೆ'.

'ನಾವು ಯಾಲಕ್ಕಿ, ಅಡಿಕೆ ಜಾಹೀರಾತು ಕೊಡಾಕೆ ಹತ್ತೀವಿ, ಹೊಗೆಸೊಪ್ಪಿಗೆ ಅಲ್ಲ ಅಂತಾರೆ ಅವ್ರು' ಎಂದು ಬೆಕ್ಕಣ್ಣ ಸಮರ್ಥಿಸಿಕೊಂಡಿತು.

'ಗುಟ್ಕಾ ಜಾಹೀರಾತು ಕೊಡೋ ಅವ್ರೆಲ್ಲ ಬಾಲಿವುಡ್ಡಿನ ಗುಟ್ಕಾ ಗ್ಯಾಂಗ್ ಅಂತಲೇ ಕುಪ್ರಸಿದ್ಧರು ಕಣಲೇ! ನಮ್ಮ ಮಲೆನಾಡಿನವರು ಬೆಳೆಯೋ ಅಡಿಕೆ ಕ್ಯಾನ್ಸರ್‌ಕಾರಕ ಅಂತ ಸುಳ್ಳೇ ವಾದಿಸ್ತಾರೆ. ಅಡಿಕೆವಳಗೆ ಹೊಗೆಸೊಪ್ಪು ಇರತದೇನು?'

'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ಅಂತಾರಲ್ಲ ಹಂಗೆ ಗುಟ್ಕಾಗೆ ಹೋದ ಆರೋಗ್ಯ ಏನು ಕೊಟ್ಟರೂ ಬಾರದು' ಎಂದು ಬೆಕ್ಕಣ್ಣ ಹೊಸ ಗಾದೆ ಹೊಸೆಯಿತು.

ಸಂಗತ

ಇದು ಮಾರುಕಟ್ಟೆಯ ಮಾಯಾಲೋಕ

ಗ್ರಾಹಕರನ್ನು ವಂಚಿಸುವ ಮಾರುಕಟ್ಟೆಯ ತಂತ್ರ ಹಾಗೂ ಕುತಂತ್ರಗಳ ವಿರುದ್ಧ ಜನಜಾಗೃತಿ ಮೂಡಬೇಕಾಗಿದೆ

• ಚಿಕ್ಕೋಬನಹಳ್ಳಿ ಚಾಂದ್ ಬಾಷ

ಶ್ಯಾಂಪೂ ಸ್ಯಾಷೆಯ ಸರ ಮತ್ತು ಹ್ಯಾಂಡ್‌ವಾಷ್ ರೀಫಿಲ್ಲನ್ನು ಫುಡ್‌ಮಾರ್ಟ್‌ವೊಂದರಲ್ಲಿ ಕೊಂಡೆ. ಶ್ಯಾಂಪೂವಿನ ಸರದಲ್ಲಿ ಹದಿನಾರು ಸ್ಯಾಷೆಗಳಿದ್ದವು. ಅವುಗಳನ್ನು ಬಳಸತೊಡಗಿದಾಗ ಕೆಲವು ಸ್ಯಾಷೆಗಳ ತುಂಬಾ ಶ್ಯಾಂಪೂ ಇದ್ದರೆ, ಒಂದೆರಡು ಸ್ಯಾಷೆಗಳಲ್ಲಿ ಅರ್ಧದಷ್ಟು ಶ್ಯಾಂಪೂ ಕೂಡ ಇರಲಿಲ್ಲ!


ಈ ಹಿಂದೆ ಆ ಬ್ರ್ಯಾಂಡ್‌ನ ಹ್ಯಾಂಡ್‌ವಾಷ್ ರೀಫಿಲ್ಲನ್ನು ಕೊಂಡಾಗ 900 ಎಂ.ಎಲ್. ಇರುತ್ತಿತ್ತು. ಬೆಲೆ ನೂರು ರೂಪಾಯಿ. ಇತ್ತೀಚೆಗೆ ಕೊಂಡ ಹ್ಯಾಂಡ್‌ವಾಷ್ ರೀಫಿಲ್ಲಿನ ಬೆಲೆಯೂ ನೂರು ರೂಪಾಯಿಯೇ ಆಗಿತ್ತು. ಎಲ್ಲದರ ಬೆಲೆ ಹೆಚ್ಚಾದರೂ ಹ್ಯಾಂಡ್‌ವಾಷ್ ರೀಫಿಲ್ಲಿನ ಬೆಲೆ ಹೆಚ್ಚಾಗಿಲ್ಲವಲ್ಲ ಎಂದು ಖುಷಿಪಟ್ಟೆ. ಆದರೆ ಪ್ಯಾಕೆಟ್ಟನ್ನು ಸೂಕ್ಷ್ಮವಾಗಿ ಗಮನಿಸಿದಾಗ, 750 ಎಂ.ಎಲ್. ಮಾತ್ರ ತುಂಬಲಾಗಿತ್ತು!

ಮಾಂಸ ತರಲು ಮಟನ್ ಮಾರ್ಕೆಟ್‌ಗೆ ಹೋಗಿದ್ದೆ. ಒಂದು ಕೆ.ಜಿ. ಮಾಂಸ ಕೊಡಲು ಹೇಳಿದೆ. 'ಚರ್ಬಿ ಬೇಡಪ್ಪ, ಒಳ್ಳೆ ಮಟನ್ ಕೊಡು' ಎಂದೆ. 'ನೋಡಿ ಸರ್ ಹೇಗಿದೆ' ಎಂದು ಒಳ್ಳೊಳ್ಳೆ ಗಟ್ಟಿ ತುಂಡುಗಳನ್ನೇ ತೋರಿಸಿ, ಕತ್ತರಿಸಿ ತಕ್ಕಡಿಗೆ ಹಾಕಿದ. ತಕ್ಕಡಿಯ ಒಳಭಾಗ ನಮ್ಮ ಕಣ್ಣಿಗೆ ಕಾಣದಷ್ಟು ಮೇಲ್ಗಡೆ ಇತ್ತು. ಒಂದು ಕೆ.ಜಿ. ಮಾಂಸ ತೂಗಿ ಕಪ್ಪುಬಣ್ಣದ ಪ್ಲಾಸ್ಟಿಕ್ ಕವರಿಗೆ ಹಾಕಿದ. ಮನೆಗೆ ತೆರಳಿ ಕವರ್ ಒಳಗಿನ ಮಾಂಸವನ್ನು ಪಾತ್ರೆಗೆ ಸುರಿದಾಗ ನೂರರಿಂದ ನೂರೈವತ್ತು ಗ್ರಾಮ್‌ನಷ್ಟು ಚರ್ಬಿಯ ಉಂಡೆ ಇತ್ತು! ಅರೆ ನನ್ನ ಕಣ್ಣ ಮುಂದೆಯೇ ನನಗೆ ತೋರಿಸಿಯೇ ಮಾಂಸ ಹಾಕಿದನಲ್ಲ, ಚರ್ಬಿ ಉಂಡೆ ಎಲ್ಲಿಂದ ಬಂತು ಎಂದು ಯೋಚಿಸಿದಾಗ ಹೊಳೆದದ್ದು, ಅದನ್ನು ತಕ್ಕಡಿಯೊಳಗೆ ಮಾಂಸ ಹಾಕುವ ಮೊದಲೇ ಹಾಕಿಟ್ಟಿದ್ದ!

ಹೀಗೆ ಹೇಳುತ್ತಾ ಹೋದಂತೆಲ್ಲ ಮಾರುಕಟ್ಟೆಯ ಮಾಯಾಲೋಕದ ಕಣ್ಣಾಮುಚ್ಚಾಲೆ ಆಟಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಶ್ಯಾಂಪೂವಿನ ಸರದಲ್ಲಿ ಒಂದೆರಡು ಸ್ಯಾಷೆಗಳಲ್ಲಿ ಶ್ಯಾಂಪೂ ಕಡಿಮೆ ಇದ್ದರೂ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ಹ್ಯಾಂಡ್‌ವಾಷ್ ರೀಫಿಲ್ಲಿನಲ್ಲಿ 150 ಗ್ರಾಂ ಕಡಿಮೆ ಇದ್ದರೂ ಗಮನಿಸುವುದಿಲ್ಲ. ಒಂದು ಕೆ.ಜಿ. ಮಾಂಸದಲ್ಲಿ ನೂರರಿಂದ ನೂರೈವತ್ತು ಗ್ರಾಮ್‌ನಷ್ಟು ಚರ್ಬಿ ಇದ್ದರೂ ಹೋಗಲಿ ಬಿಡು ಎಂದು ತಾತ್ಸಾರ ಮಾಡುತ್ತೇವೆ. ಕೆಲ ಕಂಪನಿಗಳು ತಾವು ತಯಾರಿಸುವ ವಸ್ತುಗಳ ಗುಣಮಟ್ಟವನ್ನೂ ಈ ಹಿಂದಿನಂತೆ ಉಳಿಸಿಕೊಂಡಿಲ್ಲ. ಜನ ಮಾತನಾಡುವುದನ್ನು ನಾವು ಗಮನಿಸಿರುತ್ತೇವೆ. ಈ ಕಂಪನಿ ಪ್ರಾರಂಭದಲ್ಲಿ ಹೊರತಂದ ದ್ವಿಚಕ್ರ ವಾಹನ ತುಂಬಾ ಗಟ್ಟಿಮುಟ್ಟಾಗಿತ್ತು, ಇತ್ತೀಚೆಗೆ ಮಾರುಕಟ್ಟೆಗೆ ಬಿಟ್ಟಿರುವ ವಾಹನ ಗಟ್ಟಿಮುಟ್ಟಾಗಿಲ್ಲ. ಈ ಕಂಪನಿಯ ಹೊಸ ಕಾರು ಹಳೆಯ ಕಾರಿನಂತೆ ಮೈಲೇಜ್ ಕೊಡದು. ಸೇಫ್ಟಿ ಇಲ್ಲ. ಈ ಕಂಪನಿಯ ಚಹಾಪುಡಿ ಮೊದಲಿನಂತೆ ಸ್ವಾದಿಷ್ಟವಾಗಿಲ್ಲ. ಆ ಕಂಪನಿಯ ಕಾಫಿಪುಡಿ ಮೊದಲಿನಂತೆ ಘಮಿಸದು. ಈ ಕಂಪನಿಯ ಮಸಾಲೆ ಪೌಡರ್‌ಗೆ ಹಿಂದಿನ ರುಚಿಯಿಲ್ಲ... ಹೀಗೆ ಹಲವಾರು ವಿಚಾರಗಳ ಬಗ್ಗೆ ಜನ ಗೊಣಗುತ್ತಲೇ ಇರುತ್ತಾರೆ. ಆದರೆ ಮೇಲಿನ ಉದಾಹರಣೆಗಳೆಲ್ಲ ಮಾರುಕಟ್ಟೆಯ ತಂತ್ರ ಮತ್ತು ಕುತಂತ್ರವನ್ನು ಬಹಿರಂಗಗೊಳಿಸುತ್ತವೆ.

ಗ್ರಾಹಕರ ಗಮನಕ್ಕೆ ತಂದು ಕೆಲ ವಸ್ತುಗಳ ಬೆಲೆ ಏರಿಸಿದಾಗ ಬೀದಿಗಿಳಿಯುವ ನಾವು, ಗ್ರಾಹಕರ ಗಮನಕ್ಕೆ ತಾರದೆಯೇ ಪ್ರಮಾಣ ಮತ್ತು ಗುಣಮಟ್ಟವನ್ನು ಕಡಿಮೆ ಮಾಡಿದಾಗ ತಲೆಕೆಡಿಸಿಕೊಳ್ಳುವುದೇ ಇಲ್ಲ. ಸ್ವಲ್ಪ ಮಟ್ಟಿಗೆ ಪ್ರಮಾಣ ಮತ್ತು ಗುಣಮಟ್ಟವನ್ನು ಕಡಿಮೆ ಮಾಡಿದರೂ ಕಂಪನಿಗಳು ದೊಡ್ಡ ಮಟ್ಟದಲ್ಲಿಯೇ ಲಾಭವನ್ನು ಪಡೆಯುತ್ತವೆ. ಆದರೆ ಗ್ರಾಹಕ ಮಾತ್ರ ಕ್ರಿಕೆಟ್ ಆಟದ ಮೈದಾನದಲ್ಲಿನ ಚೆಂಡಿನಂತೆ ಆಗುತ್ತಾನೆ. ಕಂಪನಿ ಹಾಗೂ ವರ್ತಕರು ಗ್ರಾಹಕರನ್ನು ಹೇಗೆ ಬೇಕಾದರೂ ವಂಚಿಸಬಹುದು. ಆದರೆ ಗ್ರಾಹಕ ಯಾವ ರೀತಿಯಲ್ಲೂ ಕಂಪನಿಗೆ, ವರ್ತಕರಿಗೆ ವಂಚಿಸಲು ಸಾಧ್ಯವಿಲ್ಲ.



ಯಾವುದೇ ಉತ್ಪಾದಕ ಕಂಪನಿ ತನ್ನ ಉತ್ಪಾದಿತ ವಸ್ತುಗಳ ಬೆಲೆ ಏರಿಸುವ ಅಥವಾ ಅದರ ಪ್ರಮಾಣ ಮತ್ತು ಗುಣಮಟ್ಟವನ್ನು ಕಡಿಮೆ ಮಾಡುವ ಮುನ್ನ ಗ್ರಾಹಕರ ಗಮನಕ್ಕೆ ತರಬೇಕಾದುದು ಆದ್ಯ ಕರ್ತವ್ಯ ಆಗುತ್ತದೆ. ತಯಾರಿಕಾ ಕಂಪನಿಗಳು, ವರ್ತಕರು ಬರೀ ಲಾಭದ ದೃಷ್ಟಿಯಿಂದ ವ್ಯವಹರಿಸದೆ, ಗ್ರಾಹಕರ ನಂಬಿಕೆ, ವಿಶ್ವಾಸ ಉಳಿಸಿಕೊಳ್ಳುವ ದೃಷ್ಟಿಯಿಂದಲೂ ವ್ಯವಹರಿಸಬೇಕಾದ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಗಮನಕ್ಕೆ ತಾರದೆಯೇ ಪ್ರಮಾಣ, ಗುಣಮಟ್ಟ ಕಡಿಮೆ ಮಾಡುವುದು ಅಥವಾ ಬೆಲೆ ಏರಿಸುವುದು ಸಮಂಜಸ, ನ್ಯಾಯಯುತ ನಡೆ ಎನಿಸುವುದಿಲ್ಲ. ಸರ್ಕಾರಗಳು ತಮ್ಮ ಅಧೀನದಲ್ಲಿರುವ ಸಂಸ್ಥೆ, ಕಂಪನಿ, ನಿಗಮಗಳಲ್ಲಿ ಉತ್ಪಾದಿಸುವ ವಸ್ತುಗಳ ಬೆಲೆ ಹೆಚ್ಚಿಸುವಾಗ ಅದನ್ನು ಗ್ರಾಹಕರ ಗಮನಕ್ಕೆ ತಂದು ಮಾಡುತ್ತವೆ. ಖಾಸಗಿ ವಲಯಕ್ಕೂ ಈ ನಿಯಮ ಅನ್ವಯವಾಗುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಸಂಬಂಧ ಕಾನೂನು ಬಿಗಿಗೊಳಿಸಬೇಕಿದೆ. ಜೊತೆಗೆ ಮಾರುಕಟ್ಟೆಯ ಮಾಯಾಲೋಕದ ಕುತಂತ್ರಗಳ ಬಗ್ಗೆ ಸದಾ ಜಾಗರೂಕರಾಗಿರಲು ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕಾಗುತ್ತದೆ.

ಗ್ರಾಹಕರ ಗಮನಕ್ಕೆ ತಂದು ಬೆಲೆ ಏರಿಸಿದಾಗ ತೋರುವ ಹೋರಾಟದ ಮನೋಭಾವವನ್ನು ಗ್ರಾಹಕರ ಗಮನಕ್ಕೆ ತಾರದೆಯೇ ಮೋಸ ಮಾಡುವ ಮಾರುಕಟ್ಟೆಯ ತಂತ್ರ, ಕುತಂತ್ರದ ವಿರುದ್ಧವೂ ಹೋರಾಡಬೇಕಾದ ಜರೂರು ಇಂದಿನ ಅಗತ್ಯವಾಗಿದೆ.

ವಾಚಕರ ವಾಣಿ

ಇಂಥ ಹೇಳಿಕೆ ತರವೇ?

'ಕಾಶ್ಮೀರದ ಪಹಲ್ಗಾಮ್‌ನಲ್ಲಿ ದಾಳಿ ಮಾಡುವವನು ಧರ್ಮ ಕೇಳುತ್ತಾ ಕೂರಲು ಆಗುವುದೇ? ಕೇಳಿರಲಿಕ್ಕಿಲ್ಲ ಎಂಬ ಭಾವನೆ ನನ್ನದು. ಒಂದು ವೇಳೆ ಕೇಳಿದ್ದರೂ ಧರ್ಮದ ಹೆಸರಿನಲ್ಲಿ ಎಲ್ಲವನ್ನೂ ಜೋಡಿಸುವುದು ಸರಿಯಲ್ಲ' ಎಂದು ಸಚಿವ ಆರ್.ಬಿ.ತಿಮ್ಮಾಪುರ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 27). ಒಂದು ದಾರುಣ ಪ್ರಕರಣದ ಬಗ್ಗೆ ಏನು ಮಾತನಾಡುತ್ತಿದ್ದೇನೆ ಎಂಬ ಅರಿವು ಸಚಿವರಿಗೆ ಇದ್ದಂತಿಲ್ಲ. 'ನನ್ನ ಭಾವನೆ' ಎಂದು ಇಂಥ ವಿಷಮ ಸಂದರ್ಭದಲ್ಲಿ ಹೇಳಿಬಿಡುವುದು ಸರಿಯೇ?

ಸಂತೋಷ್ ಜಗದಾಳೆ ಅವರು ಇಸ್ಲಾಂನ ಸಾಲುಗಳನ್ನು ಹೇಳಲಾಗದಿದ್ದಕ್ಕೆ ಹತ್ಯೆಗೀಡಾದರು ಎಂದು ಅವರ ಮಗಳು ಅಸಾವರಿ ಹೇಳಿದ್ದಾರೆ. ಶಿವಮೊಗ್ಗದ ಮಂಜುನಾಥ ರಾವ್ ಅವರ ಪತ್ನಿ ಪಲ್ಲವಿ ಅವರ ಪ್ರಕಾರ, ಉಗ್ರರು 'ನೀನು ಹಿಂದೂನಾ' ಎಂದು ಕೇಳಿ ಅವರ ಪತಿಯನ್ನು ಹತ್ಯೆ ಮಾಡಿದ್ದಾರೆ. 'ನನ್ನ ಅಳಿಯ ಹಿಂದೂ ಎಂದು ತಿಳಿಯುತ್ತಿದ್ದಂತೆ ಗುಂಡಿಕ್ಕಿದರು' ಎಂದು ಭರತ್ ಭೂಷಣ್ ಅವರ ಅತ್ತೆ ಹೇಳಿದ್ದಾರೆ. 'ನೀವು ಯಾವ ಧರ್ಮದವರು' ಎಂದು ಪ್ರಶ್ನಿಸಿದರು ಎಂದು ಹತ್ಯೆಗೀಡಾದ ಶುಭಂ ದ್ವಿವೇದಿ ಅವರ ಪತ್ನಿ ಹೇಳಿದ್ದಾರೆ. ಇವೆಲ್ಲವೂ ಮಾಧ್ಯಮಗಳಲ್ಲಿ ವರದಿಯಾಗಿವೆ. ಸಚಿವರು ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ, ಹತ್ಯೆ ನಡೆದ ಸ್ಥಳದಿಂದ ಸಾವಿರಾರು ಮೈಲಿ ದೂರದ ಬಾಗಲಕೋಟೆಯಲ್ಲಿ ಕುಳಿತು ತಮ್ಮ ಭಾವನೆ ವ್ಯಕ್ತಪಡಿಸುತ್ತಾರೆ. ಅಂದರೆ ಇಲ್ಲಿ ಸಚಿವರ 'ಭಾವನೆ'ಯ ಪ್ರಕಾರ, ಹತ್ಯೆಗೀಡಾದವರ ಆಪ್ತರು ಹೇಳಿದ್ದೆಲ್ಲವೂ ಸುಳ್ಳು ಎಂದೇ?

ಸಾಮಗ ದತ್ತಾತ್ರಿ, ಬೆಂಗಳೂರು

ದುಬಾರಿ ಶುಲ್ಕಕ್ಕೆ ಬೇಕು ಕಡಿವಾಣ

ರಾಜ್ಯದ ಹಲವು ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಹಾಗೂ ಕೇಂದ್ರ ಪಠ್ಯಕ್ರಮ ಆಧಾರಿತ ಸಿಬಿಎಸ್‌ಇ ಶಾಲೆಗಳಲ್ಲಿ ಪೂರ್ವಪ್ರಾಥಮಿಕ ಹಾಗೂ ಪ್ರಾಥಮಿಕ ತರಗತಿಗಳಿಗೆ ದಾಖಲಾತಿ ಪಡೆಯಲು ಪಾಲಕರು ಲಕ್ಷಗಟ್ಟಲೆ ಶುಲ್ಕ ಭರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್‌ಕೆಜಿ, ಯುಕೆಜಿಗೆ ₹60 ಸಾವಿರ ಹಾಗೂ ಒಂದನೇ ತರಗತಿಗೆ ₹1 ಲಕ್ಷ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ಈ ಮಾಹಿತಿಗಳು ಸಂಬಂಧಿಸಿದ ಶಾಲೆಯ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಇದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಸರಿಯಲ್ಲ. ಪ್ರಾಥಮಿಕ ಶಿಕ್ಷಣವೇ ಇಷ್ಟೊಂದು ದುಬಾರಿ ಆದರೆ ಇನ್ನು ಉನ್ನತ ಶಿಕ್ಷಣದ ಪಾಡೇನು? ಶಿಕ್ಷಣ ಇಲಾಖೆಯು ಪ್ರತಿ ಶೈಕ್ಷಣಿಕ ವರ್ಷಕ್ಕೂ ಆಯಾ ಶಾಲೆಗಳಿಗೆ ಸರ್ಕಾರ ನಿಗದಿಪಡಿಸಿದ ಗರಿಷ್ಠ ಶಾಲಾ ಶುಲ್ಕದ ಬಗ್ಗೆ ಸುತ್ತೋಲೆ ನೀಡುತ್ತದೆ. ಆದರೂ ಈ ರೀತಿ ದುಬಾರಿ ಶುಲ್ಕಕ್ಕೆ ಮೊರೆ ಹೋಗುವುದು ಸರಿಯಲ್ಲ.

ಸುರೇಂದ್ರ ಪೈ, ಭಟ್ಕಳ

ಪಾಕಿಸ್ತಾನದ ನಾಗರಿಕರೇ ಸರ್ಕಾರಕ್ಕೆ ಬುದ್ಧಿ ಹೇಳಲಿ

'ಪಹಲ್ಗಾಮ್‌ನಲ್ಲಿ ಭಾರತೀಯ ಪ್ರವಾಸಿಗರನ್ನು ಹತ್ಯೆ ಮಾಡಿರುವುದು ಪಾಕಿಸ್ತಾನದ 'ನಾಗರಿಕ'ರಲ್ಲ, ಭಯೋತ್ಪಾದಕರು, ಆದರೆ ಭಾರತ ಸರ್ಕಾರ ಆ ಕೃತ್ಯಕ್ಕೆ ಪ್ರತಿಕ್ರಿಯಿಸುವಾಗ ನಾಗರಿಕವಾಗೇ ನಡೆದುಕೊಳ್ಳಬೇಕಾಗುತ್ತದೆ' ಎಂದು ಭಾರತ ಸರ್ಕಾರವು ಸಿಂಧೂ ಜಲ ಒಪ್ಪಂದವನ್ನು ಅಮಾನತು ಮಾಡಿರುವುದಕ್ಕೆ ಎಚ್.ಎಸ್.ಮಂಜುನಾಥ ಪ್ರತಿಕ್ರಿಯಿಸಿದ್ದಾರೆ (ಪ್ರ.ವಾ., ಏ. 26). ಪಾಕಿಸ್ತಾನದ ನೆರವಿಲ್ಲದೆ, ಆ ದೇಶದ ಬಗ್ಗೆ ಮೃದು ಧೋರಣೆ ಹೊಂದಿರುವ ಸ್ಥಳೀಯರ ಸಹಕಾರವಿಲ್ಲದೆ ಉಗ್ರರು ಜಮ್ಮು-ಕಾಶ್ಮೀರದಲ್ಲಿ ಇಂತಹ ಹೇಯ ಕೃತ್ಯ ಎಸಗಲು ಸಾಧ್ಯವಾಗದು. 'ಪಾಕಿಸ್ತಾನವು ಹಲವು ದಶಕಗಳಿಂದ ಭಯೋತ್ಪಾದಕರಿಗೆ ತರಬೇತಿ ಮತ್ತು ಹಣಕಾಸಿನ ನೆರವು ನೀಡುವ ಕೊಳಕು ಕೆಲಸ ಮಾಡುತ್ತಿದೆ' ಎಂದು ಪಾಕಿಸ್ತಾನದ ರಕ್ಷಣಾ ಸಚಿವರೇ ಒಪ್ಪಿಕೊಂಡಿದ್ದಾರೆ. ಪುಲ್ವಾಮಾ, ಕಾರ್ಗಿಲ್, ಮುಂಬೈ ಮತ್ತು ಸಂಸತ್ತಿನ ಮೇಲೆ ನಡೆದ ಭಯೋತ್ಪಾದಕರ ದಾಳಿಗಳು ಪಾಕಿಸ್ತಾನದ ರಕ್ಷಣಾ ಸಚಿವರ ಮಾತನ್ನು ಪುಷ್ಟೀಕರಿಸುತ್ತವೆ ಮತ್ತು ತಾನು ನಂಬಿಕೆಗೆ ಅರ್ಹವಲ್ಲದ ದೇಶ ಎಂಬುದನ್ನು ಪಾಕಿಸ್ತಾನ ಸಾಬೀತುಪಡಿಸುತ್ತಲೇ ಬಂದಿದೆ.

ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸಿರುವುದರಿಂದ ಪಾಕಿಸ್ತಾನದ ಜನರಿಗೆ ಸಮಸ್ಯೆಯಾಗುವುದೇನೋ ನಿಜ. ತಮ್ಮದೇ ಸರ್ಕಾರದ ದರ್ಪ, ದುರ್ವರ್ತನೆ ಮತ್ತು ಭಾರತದ ವಿರುದ್ಧ ಭಯೋತ್ಪಾದಕರನ್ನು 'ಛೂ' ಬಿಡುವ ಕಾರಣಕ್ಕಾಗಿ ಅವರು ಸ್ವಲ್ಪಮಟ್ಟಿನ ಸಮಸ್ಯೆಯನ್ನು ಎದುರಿಸಲು ಸಿದ್ಧರಿರಲೇಬೇಕು. ಉಗ್ರರಿಗೆ ಆಶ್ರಯತಾಣವಾಗಿರುವ ಪಾಕಿಸ್ತಾನದ ಜೊತೆ ಭಾರತದ ಸೌಮ್ಯ ಭಾಷೆ ಮತ್ತು ಪ್ರತಿಕ್ರಿಯೆಗಳು ಪ್ರಯೋಜನಕ್ಕೆ ಬಾರವೆಂಬುದು ಕಟು ಸತ್ಯ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕಾದ ಅನಿವಾರ್ಯ ಸ್ಥಿತಿಗೆ ಪಾಕಿಸ್ತಾನವೇ ಭಾರತವನ್ನು ದೂಡಿದೆ. ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸಿರುವುದರಿಂದ ಬಾಧಿತರಾಗುವ ಪಾಕಿಸ್ತಾನದ ಪ್ರಜ್ಞಾವಂತ ನಾಗರಿಕರಾದರೂ ತಮ್ಮ ಸರ್ಕಾರಕ್ಕೆ ಬುದ್ಧಿ ಹೇಳಬಹುದು, ಪಾಠ ಕಲಿಸಬಹುದು ಎಂಬ ಆಶಾಭಾವವನ್ನು ಭಾರತೀಯರು ಇಟ್ಟುಕೊಳ್ಳಬಹುದೇನೊ!

ಪುಟ್ಟೇಗೌಡ, ಬೆಂಗಳೂರು

ಮಂಟೇಸ್ವಾಮಿ ಪ್ರಾಧಿಕಾರ ರಚನೆ ಸಲ್ಲದು

ಹಳೆ ಮೈಸೂರು ಭಾಗದ ನೀಲಗಾರ ಪರಂಪರೆಯ ಹಿಂದೂ ಧಾರ್ಮಿಕ ಕೇಂದ್ರವಾದ, ಹಿಂದುಳಿದ ವರ್ಗಗಳು ಹಾಗೂ ತಳಸಮುದಾಯಗಳ ಆರಾಧ್ಯ ದೈವವಾಗಿರುವ ಮಂಟೇಸ್ವಾಮಿ ಪರಂಪರೆಗೆ ಸೇರಿದ ಮಠಗಳನ್ನು ಸ್ವಾಧೀನಪಡಿಸಿಕೊಂಡು ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲ್ಲೂರಿನಲ್ಲಿ ರಾಜ್ಯ ಸರ್ಕಾರವು ಮಂಟೇಸ್ವಾಮಿ, ರಾಚಪ್ಪಾಜಿ ಮತ್ತು ಸಿದ್ಧಪ್ಪಾಜಿ ಕ್ಷೇತ್ರಗಳ ಅಭಿವೃದ್ಧಿ ಪ್ರಾಧಿಕಾರ ರಚಿಸಲು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಜಾತ್ಯತೀತ, ಜಾನಪದ ಪರಂಪರೆಯ ಉಸಿರಾಗಿರುವ ಮಂಟೇಸ್ವಾಮಿ ಪರಂಪರೆಯು ಹಳೆ ಮೈಸೂರು, ತಮಿಳುನಾಡಿನ ಕೆಲ ಭಾಗಗಳನ್ನು ಒಳಗೊಂಡಿದ್ದು, ಲಕ್ಷಾಂತರ ಭಕ್ತರನ್ನು ಹೊಂದಿದೆ. ಸರ್ಕಾರ ಇದರ ಮೇಲೆ ಹಿಡಿತ ಸಾಧಿಸುವುದು ಸರಿಯಲ್ಲ.

ಈ ಮಠವನ್ನು 15ನೇ ಶತಮಾನದ ಸಾಮಾಜಿಕ ಹರಿಕಾರ ಮಂಟೇಸ್ವಾಮಿ ಸ್ಥಾಪಿಸಿದ್ದು, ಮಠಾಧಿಪತಿಗಳಾಗುತ್ತಾ ಬಂದಿರುವವರು ನೀಲಗಾರ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ ಹಾಗೂ ಮಠದಲ್ಲಿ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸಿದ್ದಾರೆ. ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಮುನ್ನಡೆಸುತ್ತಿದ್ದಾರೆ. ತಳಸಮುದಾಯಗಳ ಹಾಗೂ ಹಿಂದುಳಿದ ವರ್ಗಗಳ ಭಕ್ತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಈ ಮಠವನ್ನು ಸರ್ಕಾರ ಏಕಾಏಕಿ ಸ್ವಾಧೀನಪಡಿಸಿಕೊಂಡು ಪ್ರಾಧಿಕಾರ ರಚನೆ ಮಾಡಲು ಹೊರಟಿರುವುದು ಸರಿಯಲ್ಲ. ಇದೇ ರೀತಿ ಮುಂದಾಗಿ ರಾಜ್ಯದ ದೊಡ್ಡ ದೊಡ್ಡ ಮಠಗಳು ಹಾಗೂ ದೇವಸ್ಥಾನಗಳನ್ನು ಪ್ರಾಧಿಕಾರ ರಚನೆ ಮಾಡಿ ವಶಪಡಿಸಿಕೊಳ್ಳುವುದೇ ಎಂಬ ಪ್ರಶ್ನೆ ಮೂಡುತ್ತದೆ. ಹಾಗೆ ಮಾಡಲಾಗದಿದ್ದರೆ, ಮಂಟೇಸ್ವಾಮಿ ಪಾರಂಪರಿಕ ಮಠಗಳು ಹಾಗೂ ಆಸ್ತಿಗಳ ಮೇಲೆ ಮಾತ್ರವೇಕೆ ಸರ್ಕಾರದ ಕಣ್ಣು?

ಲಕ್ಷ್ಮಿ ಕಿಶೋರ್ ಅರಸ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಇಂಧನ 'ಹಸಿವು' ನೀಗಿಸುವ ಸವಾಲು



ಇಂಧನ ಬೇಡಿಕೆ ಮುಂಚೂಣಿಯಲ್ಲಿ ಚೀನಾ, ಭಾರತ

● ಅಮೃತ್ ಕಿರಣ್ ಬಿ.ಎಂ.

ಆರ್ಥಿಕತೆ, ತಂತ್ರಜ್ಞಾನ, ಕೈಗಾರಿಕೆ, ಮೂಲಸೌಕರ್ಯ ಮೊದಲಾದ ಕ್ಷೇತ್ರಗಳಲ್ಲಿ ಅತ್ಯಂತ ವೇಗವಾಗಿ ದಾಪುಗಾಲಿಡುತ್ತಿರುವ ಜಗತ್ತಿನ ಬಹುತೇಕ ದೇಶಗಳ ಬೆಳವಣಿಗೆಗೆ ಇಂಧನ (ಎನರ್ಜಿ) ಸಾಕಾಗುತ್ತಿಲ್ಲ. ಅಭಿವೃದ್ಧಿಯ ವೇಗಕ್ಕೆ ಬಲ ನೀಡಬಲ್ಲ ವಿವಿಧ ಇಂಧನ ಮೂಲಗಳಿಗೆ ಬೇಡಿಕೆ ಹಿಂದೆಂದಿಗಿಂತಲೂ ಅಧಿಕವಾಗುತ್ತಿದೆ. 2024ರಲ್ಲಿ ಜಾಗತಿಕವಾಗಿ ಇಂಧನ ಉತ್ಪಾದನೆಗೆ ಶೇ 2.2ರಷ್ಟು ಬೇಡಿಕೆ ಹೆಚ್ಚಳವಾಗಿದೆ ಎಂದು ಅಂತರರಾಷ್ಟ್ರೀಯ ಇಂಧನ ಏಜೆನ್ಸಿ ತನ್ನ 2025ರ ವರದಿಯಲ್ಲಿ ಹೇಳಿದೆ. ಅದರ ಪ್ರಕಾರ, ಇಂಧನ ಬೇಡಿಕೆ 648 ಎಕ್ಸಾಜೂಲ್‌ಗಳಿಗೆ (EJ) ಏರಿಕೆಯಾಗಿದೆ. ಪಳೆಯುಳಿಕೆ ಇಂಧನ ಮೂಲಗಳಾದ ಕಲ್ಲಿದ್ದಲು, ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ನವೀಕರಿಸಬಹುದಾದ ಸೌರ, ಪವನಶಕ್ತಿ ಇಂಧನ ಮೂಲಗಳಿಗೆ ಗಣನೀಯ ಪ್ರಮಾಣದಲ್ಲಿ ಬೇಡಿಕೆ ಸೃಷ್ಟಿಯಾಗಿದೆ.

ಕೈಗಾರಿಕಾ ಬಳಕೆಯ ಪ್ರಮಾಣ ಹೆಚ್ಚಳ, ಅಧಿಕ ಉಷ್ಣಾಂಶ ಹಾಗೂ ಬಿಸಿಗಾಳಿ, ತಂಪಾಗಿಸುವ ಪ್ರಕ್ರಿಯೆ (ಕೂಲಿಂಗ್), ಬ್ಯಾಟರಿಚಾಲಿತ ವಾಹನಗಳ ಸಂಖ್ಯೆ ಹೆಚ್ಚಳ, ದತ್ತಾಂಶ ಕೇಂದ್ರಗಳು ಹಾಗೂ ಕೃತಕ ಬುದ್ಧಿಮತ್ತೆ ಕ್ಷೇತ್ರಗಳು ವಿದ್ಯುತ್ತಿನ ಬೇಡಿಕೆಯನ್ನು ಶೇ 4.3ರಷ್ಟು ಹೆಚ್ಚಿಸಿವೆ.


> **ಭಾರತದಲ್ಲಿ ಒಂದೇ ವರ್ಷದಲ್ಲಿ 30 ಗಿಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ನಿರ್ಮಾಣವಾಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಸೌರ ವಿದ್ಯುತ್ ಉತ್ಪಾದನೆ ಮೂರು ಪಟ್ಟು ಹೆಚ್ಚಳವಾಗಿ, ದಾಖಲೆ ನಿರ್ಮಿಸಿದೆ**


ಅಧಿಕ ಇಂಧನ ಬೇಡಿಕೆಯಲ್ಲಿ ಚೀನಾ ಹಾಗೂ ಭಾರತ ಮೊದಲೆರಡು ಸ್ಥಾನಗಳಲ್ಲಿವೆ. ಎರಡೂ ರಾಷ್ಟ್ರಗಳಲ್ಲಿ ಇಂಧನದ ಬೇಡಿಕೆ ಕ್ರಮವಾಗಿ ಶೇ 2.9 ಮತ್ತು 4.9ರಷ್ಟು ಹೆಚ್ಚಾಗಿದೆ. ಅಮೆರಿಕ ಮೂರನೇ ಸ್ಥಾನದಲ್ಲಿದೆ. ಗಮನಾರ್ಹ ವಿಚಾರವೆಂದರೆ, ಹಲವು ವರ್ಷಗಳಿಂದ ಇಂಧನ ಬೇಡಿಕೆಯಲ್ಲಿ ಇಳಿಮುಖ ಪ್ರವೃತ್ತಿ ದಾಖಲಿಸಿದ್ದ ಅಭಿವೃದ್ಧಿ ಹೊಂದಿದ ದೇಶಗಳು ಮತ್ತೆ ಬೇಡಿಕೆಯ ಹಾದಿಗೆ ಮರಳಿವೆ. ಈ ದೇಶಗಳಲ್ಲಿ ಇಂಧನ ಬೇಡಿಕೆ ಪ್ರಮಾಣ 2024ರಲ್ಲಿ ಶೇ 1ರಷ್ಟು ಜಾಸ್ತಿಯಾಗಿದೆ.

ಪಳೆಯುಳಿಕೆ ಇಂಧನಗಳ ಪೈಕಿ 'ನೈಸರ್ಗಿಕ ಅನಿಲ'ಗಳಿಗೆ ಉಂಟಾಗಿರುವ ಬೇಡಿಕೆಯು ಹೊಸ ದಾಖಲೆ ಬರೆದಿದ್ದು, ಶೇ 2.7ರಷ್ಟು (11,500 ಕೋಟಿ ಘನ ಮೀಟರ್) ದಾಖಲೆಯ ಹೆಚ್ಚಳ ಕಂಡುಬಂದಿದೆ. ಕೈಗಾರಿಕಾ ಕ್ಷೇತ್ರದ ಬಳಕೆಯ ಕಾರಣಕ್ಕೆ ಅಮೆರಿಕ, ಐರೋಪ್ಯ ಒಕ್ಕೂಟದ ದೇಶಗಳಲ್ಲಿ ನೈಸರ್ಗಿಕ ಅನಿಲಗಳಿಗೆ ಗಮನಾರ್ಹ ಬೇಡಿಕೆ ಸೃಷ್ಟಿಯಾಗಿದೆ. ಆದರೆ ತೈಲದ ಬೇಡಿಕೆ ತುಸು ಇಳಿದಿದೆ.

ಪ್ರಮುಖ ಹಾಗೂ ಹಳೆಯ ಇಂಧನ ಮೂಲವಾಗಿರುವ ಕಲ್ಲಿದ್ದಲು ಬೇಡಿಕೆ ಶೇ 1ರಷ್ಟು ಹೆಚ್ಚಾಗಿದ್ದು, ವಿದ್ಯುತ್ ಉತ್ಪಾದನೆಗೆ ಬಹುತೇಕ ಇದು ಬಳಕೆಯಾಗುತ್ತಿದೆ. ತಾಪಮಾನ ಏರಿಕೆ ಹಾಗೂ ಬಿಸಿಗಾಳಿ ವಿದ್ಯಮಾನಗಳಿಂದ ತಂಪಾಗಿಸುವ ಉಪಕರಣಗಳಿಗೆ ವಿದ್ಯುತ್‌ನ ಅಗತ್ಯ ಅಧಿಕವಾಗುತ್ತಿದೆ. ಮುಖ್ಯವಾಗಿ ಚೀನಾ ಹಾಗೂ ಭಾರತದಲ್ಲಿ ಈ ಕಾರಣಗಳಿಂದ ಕಲ್ಲಿದ್ದಲು ಬಳಕೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. ಚೀನಾ ಹಾಗೂ ಭಾರತ 6.5 ಕೋಟಿ ಟನ್‌ಗಳಷ್ಟು ಕಲ್ಲಿದ್ದಲನ್ನು ಪ್ರತಿ ವರ್ಷ ಸುಡುತ್ತಿವೆ. ಚೀನಾವೊಂದೇ ಜಾಗತಿಕವಾಗಿ ಶೇ 58ರಷ್ಟು ಕಲ್ಲಿದ್ದಲನ್ನು ವಿದ್ಯುತ್ ಉತ್ಪಾದನೆ ಉದ್ದೇಶಕ್ಕೆ ಉರುವಲಾಗಿ ಬಳಸುತ್ತಿದೆ.

ಮತ್ತೆ ಕಲ್ಲಿದ್ದಲಿಗೆ ಮೊರೆ: ಜಾಗತಿಕ ತಾಪಮಾನ ನಿಯಂತ್ರಣದ ಭಾಗವಾಗಿ ಕಲ್ಲಿದ್ದಲು ಆಧರಿತ ಇಂಧನ ಉತ್ಪಾದನೆಯನ್ನು ನಿಧಾನವಾಗಿ ಸ್ಥಗಿತಗೊಳಿಸಲು ಮುಂದಾಗುತ್ತಿದ್ದ ಐರೋಪ್ಯ ದೇಶಗಳು (ಜರ್ಮನಿ, ರೊಮಾನಿಯಾ, ಆಸ್ಟ್ರಿಯಾ, ದಿ ನೆದರ್ಲೆಂಡ್ಸ್ ಹಾಗೂ ಇತರೆ) ತಾತ್ಕಾಲಿಕವಾಗಿ ಕಲ್ಲಿದ್ದಲು ಘಟಕಗಳನ್ನು ಮತ್ತೆ ತೆರೆಯುತ್ತಿವೆ. ಇದಕ್ಕೆ ಬಲವಾದ ಕಾರಣವೂ ಇದೆ. ಉಕ್ರೇನ್ ಜೊತೆಗಿನ ಯುದ್ಧದಿಂದಾಗಿ ಯುರೋಪ್‌ಗೆ ರಷ್ಯಾ ಪೂರೈಸುತ್ತಿದ್ದ ನೈಸರ್ಗಿಕ ಅನಿಲ ಸ್ಥಗಿತಗೊಂಡಿದ್ದರಿಂದ ಅಲ್ಲಿನ ದೇಶಗಳಲ್ಲಿ ಇಂಧನ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕಲ್ಲಿದ್ದಲಿಗೆ ಮತ್ತೆ ಮೊರೆ ಹೋಗುವಂತೆ ಮಾಡಿದೆ. ಆದಾಗ್ಯೂ, ಬ್ರಿಟನ್ ಸೇರಿದಂತೆ ಹಲವು ಐರೋಪ್ಯ ದೇಶಗಳು ಕಲ್ಲಿದ್ದಲು ಬಳಕೆ ನಿಯಂತ್ರಣಕ್ಕೆ ತಮ್ಮ ಬದ್ಧತೆಯನ್ನು ಮುಂದುವರಿಸಿವೆ.






* ಜೂಲ್ ಎನ್ನುವುದು ಕೆಲಸ ಅಥವಾ ಶಕ್ತಿಯನ್ನು ಅಳೆಯುವ ಅಂತರರಾಷ್ಟ್ರೀಯ ಮಾಪನ. ಅಂತರರಾಷ್ಟ್ರೀಯ ಇಂಧನ ಏಜೆನ್ಸಿ ಪ್ರಕಾರ ಒಂದು ಎಕ್ಸಾಜೂಲ್ ಎಂದರೆ 277.8 ಟೆರಾವಾಟ್ ಗಂಟೆಗಳು (Twh)

ವಿದ್ಯುತ್ ಬಳಕೆ ಏರುಗತಿ

ವಿದ್ಯುತ್ ಬಳಕೆ ಹೊಸ ಮೈಲಿಗಲ್ಲನ್ನೇ ಸೃಷ್ಟಿಸಿದ್ದು, 1,081 ಟೆರಾವಾಟ್ ಗಂಟೆಗಳಿಗೆ ಏರಿಕೆಯಾಗಿದೆ. ಹಿಂದಿನ ದಶಕಕ್ಕೆ ಹೋಲಿಸಿದರೆ ದುಪ್ಪಟ್ಟಾಗಿದೆ. ಏರಿಕೆ ಪ್ರಮಾಣವು ಜಪಾನ್‌ನ ವಾರ್ಷಿಕ ವಿದ್ಯುತ್ ಬಳಕೆಗೆ ಸಮನಾದುದು ಎಂದು ವಿಶ್ಲೇಷಿಸಲಾಗಿದೆ. ಕಟ್ಟಡಗಳಿಗಾಗಿಯೇ ಶೇ 60ರಷ್ಟು ವಿದ್ಯುತ್ ಬಳಕೆಯಾಗುತ್ತಿರುವುದು ಹೊಸ ಬೆಳವಣಿಗೆ. ಅಮೆರಿಕ ಹಾಗೂ ಚೀನಾದಲ್ಲಿ ಸ್ಥಾಪನೆಯಾಗಿರುವ ದತ್ತಾಂಶ ಕೇಂದ್ರಗಳಿಗೆ (ಡಾಟಾ ಸೆಂಟರ್‌ಗಳು) ಸರಿಸುಮಾರು ಶೇ 20ರಷ್ಟು ವಿದ್ಯುತ್ ವಿನಿಯೋಗವಾಗುತ್ತಿದೆ. ಬ್ಯಾಟರಿಚಾಲಿತ ವಾಹನ ಕ್ಷೇತ್ರದ ಬೆಳವಣಿಗೆಯು ವಿದ್ಯುತ್‌ಗೆ ಬೇಡಿಕೆಯನ್ನು ಹೆಚ್ಚಿಸಿದ್ದು, ಇವಿ–ಕಾರುಗಳ ಬಳಕೆ ಪ್ರಮಾಣ ಜಾಗತಿಕವಾಗಿ ಶೇ 25ರಷ್ಟು ಜಿಗಿದಿದೆ.



ಅಭಿವೃದ್ಧಿಯತ್ತ ದೃಷ್ಟಿ ನೆಟ್ಟಿರುವ ಜಗತ್ತು ಇಂಧನವನ್ನು ಗಣನೀಯ ಪ್ರಮಾಣದಲ್ಲಿ ಬಳಸುತ್ತಿದೆ. ವರ್ಷದಿಂದ ವರ್ಷಕ್ಕೆ ಇಂಧನಕ್ಕೆ, ಪ್ರಮುಖವಾಗಿ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆ ನಿಯಂತ್ರಣಕ್ಕಾಗಿ ಕಲ್ಲಿದ್ದಲಿನಂತಹ ಪಳೆಯುಳಿಕೆ ಇಂಧನಗಳ ಬದಲಾಗಿ, ನವೀಕರಿಸಬಹುದಾದ ಇಂಧನ ಮೂಲಗಳ ಬಗ್ಗೆ ಜಗತ್ತಿನ ರಾಷ್ಟ್ರಗಳು ಒತ್ತು ನೀಡುತ್ತಿದ್ದರೂ ಪೂರ್ಣ ಪ್ರಮಾಣದ ಇಂಧನ ಬೇಡಿಕೆಯನ್ನು ಪೂರೈಸಲು ಈ ಮೂಲಗಳಿಗೆ ಸಾಧ್ಯವಾಗುತ್ತಿಲ್ಲ. ಬೇಡಿಕೆ ಸವಾಲನ್ನು ಎದುರಿಸಲು ಹಲವು ರಾಷ್ಟ್ರಗಳು ಕಲ್ಲಿದ್ದಲಿನ ಬಳಕೆ ಹೆಚ್ಚಿಸಿವೆ. ಅದರ ಬಳಕೆ ಪ್ರಮಾಣ ಶೇ 1ರಷ್ಟು ಜಾಸ್ತಿಯಾಗಿದೆ. ಯುರೋಪಿನ ಕೆಲವು ರಾಷ್ಟ್ರಗಳು ಕಲ್ಲಿದ್ದಲು ಘಟಕಗಳನ್ನು ಮತ್ತೆ ತೆರೆದಿವೆ. ಚೀನಾ ಮತ್ತು ಭಾರತ ಕೂಡ ವಿದ್ಯುತ್‌ಗಾಗಿ ಕಲ್ಲಿದ್ದಲನ್ನು ಭಾರಿ ಪ್ರಮಾಣದಲ್ಲಿ ಸುಡುತ್ತಿವೆ

ಮರುಬಳಕೆ ಇಂಧನಗಳದ್ದೂ ವೇಗದ ಓಟ: ಜಾಗತಿಕ ವಿದ್ಯುತ್ ಬೇಡಿಕೆಯ ಪೈಕಿ ಕಳೆದ ವರ್ಷ ನವೀಕರಿಸಬಹುದಾದ ಇಂಧನ ಮೂಲಗಳಾದ ಸೌರ, ಪವನ, ಬಯೋ ಎನರ್ಜಿಗಳು ಶೇ 38ರಷ್ಟು ಕೊಡುಗೆ ನೀಡಿರುವುದು ಹೊಸ ದಾಖಲೆ ಎನಿಸಿದೆ. ಸತತ 22ನೇ ವರ್ಷವೂ ಈ ವಲಯ ಏರಿಕೆಯ ಪಥದಲ್ಲಿದೆ. ಕಳೆದ ವರ್ಷವೊಂದರಲ್ಲೇ 700 ಗಿಗಾವಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಘಟಕಗಳು ಉತ್ಪಾದನಾ ಘಟಕಗಳ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗಿವೆ. ವಿದ್ಯುತ್ ಉತ್ಪಾದನೆಯಲ್ಲಿ ಸೌರ ವಿದ್ಯುತ್ ಘಟಕಗಳು ಶೇ 80ರಷ್ಟು ಬೆಳವಣಿಗೆ ದರವನ್ನು ದಾಖಲಿಸಿವೆ. ಸೌರ ಮತ್ತು ಪವನ ವಿದ್ಯುತ್ ಘಟಕಗಳಿಂದ 670 ಟೆರಾವಾಟ್ ಗಂಟೆಗಳಷ್ಟು ವಿದ್ಯುತ್ ಲಭ್ಯವಾಗಿದೆ.

> **ಕೈಗಾರಿಕಾ ಹಾಗೂ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆ ಮತ್ತು ಅಭಿವೃದ್ಧಿ ಕಾರಣಗಳಿಂದ ಭಾರತದಲ್ಲಿ ಇಂಧನ ಬೇಡಿಕೆ ಪ್ರತಿ ವರ್ಷ ಹೆಚ್ಚುತ್ತಿದೆ. ಏರುತ್ತಿರುವ ಬೇಡಿಕೆಯನ್ನು ಪೂರೈಸಲು ಸಿದ್ಧತೆಗಳು ನಡೆಯುತ್ತಿವೆ. 2032ರ ವೇಳೆಗೆ ಶೇ 80 ಗಿಗಾವಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧರಿತ ವಿದ್ಯುತ್ ಉತ್ಪಾದಿಸುವ ಯೋಜನೆಗಳನ್ನು ಕೇಂದ್ರ ಸರ್ಕಾರ ಕೈಗೆತ್ತಿಕೊಂಡಿದೆ**

ಐರೋಪ್ಯ ಒಕ್ಕೂಟದ ರಾಷ್ಟ್ರಗಳಲ್ಲಿ ಕಲ್ಲಿದ್ದಲು ಮತ್ತು ನೈಸರ್ಗಿಕ ಅನಿಲ ಘಟಕಗಳಿಂದ ಉತ್ಪಾದನೆಯಾದ ವಿದ್ಯುತ್‌ನ ಪ್ರಮಾಣವನ್ನು ಸೌರ ಮತ್ತು ಪವನ ಘಟಕಗಳಿಂದ ಉತ್ಪಾದನೆಯಾದ ವಿದ್ಯುತ್ ಮೊದಲ ಬಾರಿ ಹಿಂದಿಕ್ಕಿದೆ. ಅಮೆರಿಕದಲ್ಲಿ ಸೌರ ಮತ್ತು ಪವನ ವಿದ್ಯುತ್‌ನ ಪಾಲು ಶೇ 16ಕ್ಕೆ ಏರಿಕೆಯಾಗಿದ್ದು, ಕಲ್ಲಿದ್ದಲಿನ ಪ್ರಮಾಣವನ್ನು ಮೀರಿಸಿದೆ. ಚೀನಾದಲ್ಲಿ ಶೇ 20ರಷ್ಟು ಪಾಲು ನವೀಕರಿಸಬಹುದಾದ ಮೂಲಗಳದ್ದು.

ಸೌರ ವಿದ್ಯುತ್ ಮೈಲಿಗಲ್ಲು: ಐರೋಪ್ಯ ಒಕ್ಕೂಟವು 2024ರಲ್ಲಿ, ಒಂದೇ ವರ್ಷದಲ್ಲಿ 60 ಗಿಗಾವಾಟ್ ಸಾಮರ್ಥ್ಯದ ಘಟಕಗಳನ್ನು ಹೊಸದಾಗಿ ಸೇರ್ಪಡೆ ಮಾಡಿದೆ. ಅದರ ಹಿಂದಿನ ವರ್ಷವೂ ಇಷ್ಟೇ ಸಾಮರ್ಥ್ಯದ ಘಟಕಗಳು ಸೇರ್ಪಡೆಯಾಗಿದ್ದವು. ಅಧಿಕ ವಿದ್ಯುತ್ ದರ, ಸೌರ ವಿದ್ಯುತ್ ಉತ್ಪಾದನಾ ಪ್ರೋತ್ಸಾಹಕ ಕ್ರಮಗಳಿಂದಾಗಿ, ಯುರೋಪ್‌ನಲ್ಲಿ ಹೊಸ ಘಟಕಗಳು ಇನ್ನಷ್ಟು ತೆರೆಯಲು ಕಾರಣವಾದವು.

ಚೀನಾವೊಂದೇ ತನ್ನ ಸೌರ ವಿದ್ಯುತ್ ಘಟಕಗಳ ಉತ್ಪಾದನಾ ಸಾಮರ್ಥ್ಯವನ್ನು ಒಟ್ಟು 340 ಗಿಗಾವಾಟ್‌ಗೆ ಹೆಚ್ಚಿಸಿದ್ದು, ಶೇ 30ರಷ್ಟು ಬೆಳವಣಿಗೆ ದಾಖಲಿಸಿದೆ. ಅಮೆರಿಕ, ಬ್ರೆಜಿಲ್, ಭಾರತದಲ್ಲೂ ಸೌರ ವಿದ್ಯುತ್ ಘಟಕಗಳ ಬೆಳವಣಿಗೆ ಗಮನಾರ್ಹವಾಗಿದೆ. ಅಮೆರಿಕದಲ್ಲಿ 50 ಗಿಗಾವಾಟ್, ಬ್ರೆಜಿಲ್‌ನಲ್ಲಿ 16.5 ಗಿಗಾವಾಟ್ ಸಾಮರ್ಥ್ಯದ ಘಟಕಗಳು ತಲೆಎತ್ತಿವೆ.

ಪರಮಾಣು ಇಂಧನ ಉತ್ಪಾದನಾ ಘಟಕಗಳು ಸಾಮರ್ಥ್ಯ 7 ಗಿಗಾವಾಟ್‌ನಷ್ಟು ಹೆಚ್ಚಳವಾಗಿದ್ದು, 2023ಕ್ಕೆ ಹೋಲಿಸಿದರೆ ಶೇ 33ರಷ್ಟು ಏರಿಕೆ ಕಂಡಿದೆ. ಒಟ್ಟಾರೆ ಸಾಮರ್ಥ್ಯ 420 ಗಿಗಾವಾಟ್‌ಗೆ ತಲುಪಿದೆ. 2023ಕ್ಕೆ ಹೋಲಿಸಿದರೆ, ಪರಮಾಣು ವಿದ್ಯುತ್ ಸ್ಥಾವರ ನಿರ್ಮಾಣ ಶೇ 50ರಷ್ಟು ಹೆಚ್ಚಳವಾಗಿದೆ. ಹೊಸದಾಗಿ ಒಂಬತ್ತು ಘಟಕಗಳು ಆರಂಭವಾಗಿವೆ. ಭಾರತವೂ ಸೇರಿದಂತೆ 15 ದೇಶಗಳಲ್ಲಿ 62 ಘಟಕಗಳು ಈಗಾಗಲೇ ನಿರ್ಮಾಣ ಹಂತದಲ್ಲಿದ್ದು, 70 ಗಿಗಾವಾಟ್ ವಿದ್ಯುತ್ ಹೊಸದಾಗಿ ಸೇರ್ಪಡೆಯಾಗಲಿದೆ ಎಂದು ಅಂದಾಜಿಸಲಾಗಿದೆ.

ಆಧಾರ: ಅಂತರರಾಷ್ಟ್ರೀಯ ಇಂಧನ ಏಜೆನ್ಸಿಯ 2025ರ ವರದಿ, ಅಂತರರಾಷ್ಟ್ರೀಯ ನವೀಕರಿಸಬಹುದಾದ ಇಂಧನಗಳ ಏಜೆನ್ಸಿಯ ದತ್ತಾಂಶ, ಪಿಐಬಿ

ರಾಷ್ಟ್ರೀಯ

ನೌಕಾಪಡೆಯ ಯುದ್ಧ ಸನ್ನದ್ಧತೆ



ಸಮರಾಭ್ಯಾಸ ನಡೆಸಿದ ನೌಕಾಪಡೆಯ ಯುದ್ಧ ನೌಕೆ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪಹಲ್ಗಾಮ್ ದಾಳಿಯ ಹಿನ್ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚಿರುವ ಸಂದರ್ಭದಲ್ಲೇ ಭಾರತೀಯ ನೌಕಾಪಡೆಯು ಅರಬ್ಬಿ ಸಮುದ್ರದಲ್ಲಿ ಸಮರಾಭ್ಯಾಸ ನಡೆಸಿದ್ದು, 'ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ಧ' ಎಂಬ ಸಂದೇಶ ರವಾನಿಸಿದೆ.

ನೌಕಾಪಡೆಯ ಪಶ್ಚಿಮ ನೌಕಾ ಕಮಾಂಡ್‌ನ ಯುದ್ಧ ನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಅರಬ್ಬಿ ಸಮುದ್ರದಲ್ಲಿ ಜಾಗೃತ ಸ್ಥಿತಿಯಲ್ಲಿ ಇಡಲಾಗಿದೆ. 'ಭಾರತೀಯ ನೌಕಾಪಡೆಯು ಯಾವಾಗಲೂ ಜಾಗರೂಕವಾಗಿರುತ್ತದೆ. ಪಹಲ್ಗಾಮ್ ಘಟನೆಯ ನಂತರ ಯುದ್ಧ ಸನ್ನದ್ಧತೆಯ ಮಟ್ಟವನ್ನು ಹೆಚ್ಚಿಸಲಾಗಿದೆ' ಎಂದು ಪಶ್ಚಿಮ ನೌಕಾ ಕಮಾಂಡ್‌ನ ಮುಂಬೈನಲ್ಲಿರುವ ಕೇಂದ್ರ ಕಚೇರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಶತ್ರುವಿನ ಯುದ್ಧ ನೌಕೆಯನ್ನು ನಾಶಪಡಿಸುವ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಯುದ್ಧ ನೌಕೆಯಿಂದ ಕ್ಷಿಪಣಿಗಳನ್ನು ಹಾರಿಸುವ ಚಿತ್ರ ಹಾಗೂ ವಿಡಿಯೊಗಳನ್ನು ಭಾರತೀಯ ನೌಕಾಪಡೆಯು ಭಾನುವಾರ ಬಿಡುಗಡೆ ಮಾಡಿದೆ. ಆದರೆ ಸಮರಾಭ್ಯಾಸ ಯಾವಾಗ ನಡೆಸಲಾಗಿದೆ ಎಂಬ ವಿವರಗಳನ್ನು ನೀಡಿಲ್ಲ.

'ನೌಕಾ ಕಾರ್ಯಾಚರಣೆಗಳನ್ನು ನಡೆಸಲು ಬಳಸುವ ಯುದ್ಧ ನೌಕೆಗಳು, ವಿಮಾನಗಳು, ಇತರ ವ್ಯವಸ್ಥೆಗಳು ಮತ್ತು ಸಿಬ್ಬಂದಿಯ ಸನ್ನದ್ಧತೆಯನ್ನು ಪರೀಕ್ಷೆಗೆ ಒಳಪಡಿಸಲು ಸಮರಾಭ್ಯಾಸ ನಡೆಸಲಾಗಿದೆ' ಎಂದು ನೌಕಾಪಡೆಯ ಹೇಳಿಕೆ ತಿಳಿಸಿದೆ. 'ದೇಶದ ಕಡಲ ಭದ್ರತೆಯನ್ನು ಕಾಪಾಡಲು ಭಾರತೀಯ ನೌಕಾಪಡೆಯು ಯಾವುದೇ ಸಮಯದಲ್ಲಿ, ಎಲ್ಲಿಯಾದರೂ, ಹೇಗಾದರೂ ಸಿದ್ಧವಾಗಿದೆ' ಎಂದು ಹೇಳಿದೆ.

ಯುದ್ಧವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್ ಒಳಗೊಂಡಂತೆ ಪಶ್ಚಿಮ ಕಮಾಂಡ್‌ನ ನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳು ಸಮರಾಭ್ಯಾಸದಲ್ಲಿ ಪಾಲ್ಗೊಂಡವು.

ಶ್ರೀನಗರ: ಮತ್ತೆ ಮೂವರು ಉಗ್ರರ ಮನೆಗಳು ಧ್ವಂಸ

ಶ್ರೀನಗರ(ಪಿಟಿಐ): ಭದ್ರತಾ ಪಡೆಗಳು ಉಗ್ರರ ನಿಗ್ರಹ ಕಾರ್ಯಾಚರಣೆಯನ್ನು ಮುಂದುವರಿಸಿವೆ. ಬಂಡಿಪೋರಾ, ಪುಲ್ವಾಮಾ ಹಾಗೂ ಶೋಪಿಯಾನ್ ಜಿಲ್ಲೆಗಳಲ್ಲಿ ನಡೆದ ಕಾರ್ಯಾಚರಣೆಗಳಲ್ಲಿ ಮೂವರು ಭಯೋತ್ಪಾದಕರ ಮನೆಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಇದರೊಂದಿಗೆ, ಉಗ್ರರು ಹಾಗೂ ಅವರಿಗೆ ಸಹಕಾರ ನೀಡುತ್ತಿರುವವ ವಿರುದ್ಧದ ಕಾರ್ಯಾಚರಣೆಯಲ್ಲಿ ಧ್ವಂಸ ಮಾಡಲಾದ ಮನೆಗಳ ಸಂಖ್ಯೆ 9ಕ್ಕೆ ಏರಿದಂತಾಗಿದೆ. ಶೋಪಿಯಾನ್ ಜಿಲ್ಲೆಯ ವಂಡಿನಾದಲ್ಲಿರುವ ಉಗ್ರ ಅದ್ನಾನ್ ಶಫಿ ಮನೆಯನ್ನು ಶನಿವಾರ ರಾತ್ರಿ ಧ್ವಂಸಗೊಳಿಸಲಾಗಿದೆ. ಈತ ಕಳೆದ ವರ್ಷ ಉಗ್ರ ಸಂಘಟನೆ ಸೇರಿದ್ದ. ಪುಲ್ವಾಮಾ ಜಿಲ್ಲೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ, ಉಗ್ರ ಅಮಿರ್ ನಜೀರ್ ಮನೆಯನ್ನು ನೆಲಸಮಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಬಂಡಿಪೋರಾ ಜಿಲ್ಲೆಯಲ್ಲಿರುವ ಎಲ್‌ಇಟಿ ಉಗ್ರ ಜಮೀಲ್ ಅಹ್ಮದ್ ಶೆರ್ಗೋಜ್ರಿ ಮನೆಯನ್ನು ಭದ್ರತಾ ಪಡೆಗಳು ಭಾನುವಾರ ಧ್ವಂಸಗೊಳಿಸಿವೆ –ಪಿಟಿಐ ಚಿತ್ರ

ಬಂಡಿಪೋರಾ ಜಿಲ್ಲೆಯಲ್ಲಿರುವ ಲಷ್ಕರ್–ಎ–ತಯಬಾ (ಎಲ್‌ಇಟಿ) ಉಗ್ರ ಜಮೀಲ್ ಅಹ್ಮದ್ ಶೆರ್ಗೋಜ್ರಿ ಮನೆಯನ್ನು ಧ್ವಂಸ ಮಾಡಲಾಗಿದೆ. ಈತ 2016ರಿಂದ ಭಯೋತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದಾನೆ ಎಂದೂ ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಪಹಲ್ಗಾಮ್ ದಾಳಿ ಪ್ರಕರಣದ ನಂತರ, ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಭಾರತವು ಪಾಕಿಸ್ತಾನದ ಮೇಲೆ ದಾಳಿ ಮಾಡಿದರೆ, ಪಾಕ್ ಕೂಡ ಭಾರತದ ಮೇಲೆ ಮರುದಾಳಿ ನಡೆಸಲಿದೆ ಎಂದು ಇಮ್ರಾನ್ ಖಾನ್ ಹೇಳಿರುವುದಾಗಿ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಅನ್ನು ಇನ್‌ವಿಡ್ ಟೂಲ್ ಮೂಲಕ ಪರಿಶೀಲಿಸಿದಾಗ ಹಲವು ಕೀಫ್ರೇಮ್‌ಗಳು ಕಂಡುಬಂದವು. ಅವುಗಳನ್ನು ಗೂಗಲ್‌ಲೆನ್ಸ್‌ನಲ್ಲಿ ಪರೀಕ್ಷಿಸಿದಾಗ ಒಂದೇ ವಿಡಿಯೊ ಅನ್ನು ಇದೇ ಪ್ರತಿಪಾದನೆಯೊಂದಿಗೆ ಹಲವರು ಹಂಚಿಕೊಂಡಿರುವುದು ಕಂಡುಬಂತು. ಇಮ್ರಾನ್ ಖಾನ್ ಅವರು 2023ರಿಂದ ಜೈಲಿನಲ್ಲಿ ಇರುವುದರಿಂದ ಇದು ಹಳೆಯ ವಿಡಿಯೊ ಇರಬಹುದು ಎನ್ನುವ ಅನುಮಾನ ಮೂಡಿತು. ನಿರ್ದಿಷ್ಟ ಪದ ಹಾಕಿ ಗೂಗಲ್‌ನಲ್ಲಿ ಹುಡುಕಿದಾಗ ಹಿಂದೂಸ್ಥಾನ್ ಟೈಮ್ಸ್‌ನಲ್ಲಿ 2019ರ ಫೆ.19ರಂದು ಅಪ್‌ಲೋಡ್ ಮಾಡಿದ್ದ ವಿಡಿಯೊ ಕಂಡಿತು; ಪುಲ್ವಾಮಾದಲ್ಲಿ 40 ಮಂದಿ ಭಾರತೀಯ ಸೈನಿಕರ ಹತ್ಯೆ ಪ್ರಕರಣ ನಡೆದಾಗ ಭಾರತವೇನಾದರೂ ದಾಳಿ ನಡೆಸಿದರೆ, ಪಾಕಿಸ್ತಾನವೂ ಪ್ರತಿದಾಳಿ ನಡೆಸಲಿದೆ ಎಂದು ಇಮ್ರಾನ್ ಹೇಳಿದ್ದರು. ಹಳೆಯ ವಿಡಿಯೊ ಅನ್ನು ಇತ್ತೀಚಿನ ವಿಡಿಯೊ ಎಂದು ಹಂಚಿಕೊಂಡು ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಸಮಯಾಚಾರ



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

182

ನಮ್ಮ ಮಾತು, ಮನಸ್ಸು ಮತ್ತು ನಮ್ಮ ಕಾರ್ಯ ಒಂದೇ ಸರಳ ರೇಖೆಯಲ್ಲಿ ಇದ್ದರೆ ಅದು ಭಕ್ತಿಯಾಗುತ್ತದೆ. ನಮ್ಮ ಇರುವಿಕೆ ಒಂದು, ತೋರುವಿಕೆ ಒಂದು ಆದರೆ ಅದು ವಂಚನೆಯಾಗುತ್ತದೆ. ಒಬ್ಬ ಬೇಡ ಇರ್ತಾನೆ. ಹಕ್ಕಿಗಳಿಗೆ ಒಂದಿಷ್ಟು ಕಾಳು ಹಾಕುತ್ತಾನೆ. ಒಬ್ಬ ಸಂತನೂ ಹಕ್ಕಿಗಳಿಗೆ ಕಾಳು ಹಾಕುತ್ತಾನೆ. ಇಬ್ಬರ ನಡುವೆ ವ್ಯತ್ಯಾಸ ಏನು ಎಂದರೆ, ಬೇಡ ಯಾಕೆ ಕಾಳು ಹಾಕುತ್ತಾನೆ ಎಂದರೆ ಪಕ್ಷಿಗಳು ಕಾಳಿನ ಆಸೆಗೆ ಬಂದು ನನ್ನ ಬಲೆಯಲ್ಲಿ ಬೀಳಬೇಕು. ತಾನು ಸಂತೋಷಪಡಬೇಕು ಎಂದು ಕಾಳು ಹಾಕುತ್ತಾನೆ. ಆದರೆ ಸಂತ ತನ್ನ ಸಂತೋಷಕ್ಕೆ ಕಾಳು ಹಾಕುವುದಿಲ್ಲ. ತಿನ್ನುವ ಹಕ್ಕಿಗಳು ಸಂತೋಷ ಪಡಲಿ ಅಂತ ಕಾಳು ಹಾಕುತ್ತಾನೆ. ತಾಯಿಯ ಪ್ರೇಮ ಯಾಕೆ ದೊಡ್ಡದು ಎಂದರೆ ಆಕೆಯದ್ದು ನಿಷ್ಕಾಮ ಪ್ರೇಮ. ಅಲ್ಲಿ ವಂಚನೆ ಇಲ್ಲ. ಒಬ್ಬ ಕವಿ ಕವನ ಬರೆದರೆ ಅದರ ಕೆಳಗೆ ತನ್ನ ಹೆಸರು ಹಾಕಿಕೊಳ್ಳುತ್ತಾನೆ. ಕಲಾವಿದ ಚಿತ್ರ ಬರೆದರೆ ತನ್ನ ಹೆಸರು ಬರೆದುಕೊಳ್ಳುತ್ತಾನೆ. ಒಂಬತ್ತು ತಿಂಗಳು ಹೊತ್ತು ಹೆತ್ತು ಮಗುವನ್ನು ಐದು ವರ್ಷ ದೊಡ್ಡವನನ್ನಾಗಿ ಮಾಡಿ ಶಾಲೆಗೆ ಸೇರಿಸುವಾಗ ಆಕೆ ಅಪ್ಪನ ಹೆಸರು ಬರೆಸಿದಳೇ ವಿನಾ ತನ್ನ ಹೆಸರು ಬರೆಸಲಿಲ್ಲ. ಇದು ನಿರ್ವಂಚನೆಯ ಬದುಕಿನ ರೀತಿ. ನಿಷ್ಕಾಮ ಪ್ರೇಮವೇ ನಿಜವಾದ ಭಕ್ತಿ. ಮನುಷ್ಯನ ಒಳಗೆ ನಿಷ್ಕಾಮ ಪ್ರೇಮ ಇತ್ತು ಎಂದರೆ ಬದುಕು ಅತ್ಯಂತ ಸುಂದರವಾಗುತ್ತದೆ.

ನಾನು ದುಡಿದಿದ್ದು ಎಂದರೆ ಅದು ಪದಾರ್ಥವಾಗುತ್ತದೆ. ದೇವರೇ ಇದೆಲ್ಲ ನೀನು ಕೊಟ್ಟಿದ್ದು ಎಂದರೆ ಅದು ಪ್ರಸಾದ ಆಗುತ್ತದೆ. ಬದುಕೇ ಒಂದು ಪ್ರಸಾದ. ನಾನು ಮನೆ ಕಟ್ಟಿದ್ದೇನೆ ಎನ್ನುತ್ತೀರಿ. ದೇವರು ಮಣ್ಣು ನಿರ್ಮಾಣ ಮಾಡದಿದ್ದರೆ, ನೀರು ನಿರ್ಮಾಣ ಮಾಡಿರದಿದ್ದರೆ ಮನೆ ಕಟ್ಟಲು ಸಾಧ್ಯ ಇತ್ತೇನು? ಸುಮ್ಮನೆ ನಮಗೆ ಒಂದು ಭ್ರಮೆ. ಸಮಯ ಎಂದರೆ ಒಂದು ಅವಕಾಶ. ನಾವು ಹುಟ್ಟಿ ಬಂದಿದ್ದೇವಲ್ಲ. ಇದೇ ಒಳ್ಳೆಯ ಸಮಯ ಎಂದು ತಿಳಿದುಕೊಳ್ಳಬೇಕು. ಇಲ್ಲಿಗೆ ಬಂದ ಮೇಲೆ ಹೇಗೆ ಲೋಕಕಲ್ಯಾಣದ ಕಾರ್ಯಗಳನ್ನು ಮಾಡಬೇಕು ಎಂದು ಯೋಚಿಸಿ ಅದರಂತೆ ನಡೆದುಕೊಳ್ಳುವುದೇ ಆಚಾರ. ಪ್ರಾಣಿಗಳೂ ಉಂಡುತಿಂದು ಬದುಕುತ್ತವೆ. ನಾವೂ ಹಾಗೆಯೇ ಬದುಕಿದರೆ ನಮಗೂ ಅವುಗಳಿಗೂ ಏನು ವ್ಯತ್ಯಾಸ? ದೇವರು ಇಷ್ಟು ಒಳ್ಳೆಯ ಜಗತ್ತು ಕೊಟ್ಟಿದ್ದಾನೆ. ಒಳ್ಳೆಯ ಜೀವನ ಕೊಟ್ಟಿದ್ದಾನೆ. ನಾವು ಏನು ಕೊಟ್ಟಿದ್ದೇವೆ ಎಂದು ವಿಚಾರ ಮಾಡಬೇಕಲ್ಲ. ಇದನ್ನು ಅರಿತು ಬದುಕುವುದೇ ಸಮಯಾಚಾರ. ಹೆಚ್ಚು ಕುಂದಿಲ್ಲದೆ ಬದುಕಬೇಕು ಎಂದರು ಶರಣರು. ಸ್ಟೀವ್ ಜಾಬ್ಸ್, 'ಯಾವ ಶಾಲೆ ಕಾಲೇಜು ವಿಶ್ವವಿದ್ಯಾಲಯಗಳು ಕಲಿಸದ ಪಾಠವನ್ನು ಹಸಿವು ಕಲಿಸುತ್ತದೆ' ಎಂದು ಹೇಳುತ್ತಾರೆ. ಬಸವಣ್ಣನವರು ಹೇಗೆ ಬದುಕಿದರು ನೋಡಿ. ಬೆಳಿಗ್ಗೆ ಎದ್ದಾಗ ಕರುಣೆ ತುಂಬಿದ ಕಣ್ಣುಗಳಿಂದ ಜಗತ್ತನ್ನು ನೋಡುವುದು. ದೇವರಿಗೆ ಕೈಮುಗಿದು ಮಾನ ಅಪಮಾನ ನಿನ್ನದಯ್ಯಾ ಅಂತ ಅವನ ಉಡಿಗೆ ಹಾಕೋದು. ಹೊರಗೆ ಹೊರಟಾಗ ಬಾಗಿದ ತಲೆ, ಮುಗಿದ ಕೈ, ಈ ಬದುಕು ಕೂಡಲಸಂಗನ ಭಿಕ್ಷೆ ಎಂಬ ಭಾವ. ಇದೇ ಸಮಯಾಚಾರ. ಇದೇ ನಿಜವಾದ ಜೀವನ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 28, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಪ್ರತಿಪದ್ ಗಂ. 21-11 ನಕ್ಷತ್ರ: ಭರಣಿ ಗಂ. 21-38 ಯೋಗ: ಆಯುಷ್ಮಾನ್ ಗಂ. 20-02 ಕರಣ: ಕಿಂಸ್ತುಘ್ನ ಗಂ. 11-06, ಮೇಷ ಮಾಸದ 15 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-14 **ಸೂರ್ಯಾಸ್ತ :** 06-42
ಮುಸ್ಲಿಂ ದಿನಾಂಕ : 29 ಶವ್ವಾಲ್
ಅದೃಷ್ಟ ಸಂಖ್ಯೆ : 2, 5

ಮೇಷ: ಕಳೆದು ಹೋಗಿರುವ ಒಡವೆ ಸಿಗುವ ಸಂಭವವಿದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ಯಶಸ್ಸು ದೊರೆಯುವುದು. ಆರ್ಥಿಕವಾಗಿ ಮುಂದುವರಿಯುವಿರಿ. ಪರಿಚಿತರ ಸಹಾಯದಿಂದ ಗುತ್ತಿಗೆ ಕೆಲಸ ನಿಮ್ಮದಾಗಲಿದೆ.

ವೃಷಭ: ಸಂಬಂಧ ಹಾಳು ಮಾಡುವಂಥ ಜನ ಸಿಗಲಿದ್ದಾರೆ. ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿರ್ಧಾರವು ಬಹಳ ಅನುಕೂಲಕರವಾಗುವುದು.

ಮಿಥುನ: ಲೇವಾದೇವಿ ವ್ಯವಹಾರಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ಕಬ್ಬಿಣ ಮಾರಾಟಗಾರರಿಗೆ ಉತ್ತಮ ದಿನ. ಅತ್ಯಂತ ಸಂತೋಷದ ವಾತಾವರಣ ಸಿಗಲಿದೆ. ದೇಹದ ಎಲ್ಲ ನೋವುಗಳು ಮರೆಯಾಗಲಿವೆ.

ಕರ್ಕಾಟಕ: ಮಾಡುವ ಕೆಲಸದಿಂದ ಗುಂಪಿನಲ್ಲಿ ಗುರುತಿಸುವ ವ್ಯಕ್ತಿಯಾಗುವ ಲಕ್ಷಣ ಕಾಣುತ್ತಿದೆ. ಹೊಲದ ಅಥವಾ ಜಮೀನಿನ ನಿರಂತರ ಕೆಲಸಕ್ಕೆ ಆಳನ್ನು ಗೊತ್ತು ಮಾಡಿಕೊಳ್ಳುವಿರಿ. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

ಸಿಂಹ: ಬೋಧನೆಯಲ್ಲಿ ವಿಶೇಷ ಪರಿಣತಿಯನ್ನು ಹೊಂದಿರುವ ನಿಮಗೆ ಅದರಲ್ಲೂ ಗಣಿತ ವಿಷಯದವರಿಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ.

ಕನ್ಯಾ: ಯೋಜನೆಗಳು ಕಾರ್ಯಗತಗೊಳ್ಳಲು ಚಾಣಾಕ್ಷತನ ಬೇಕು. ಮನುಷ್ಯ ಪ್ರಯತ್ನದ ಜತೆ ಮಹಾಗಣಪತಿಯ ಮೊರೆ ಹೋಗುವುದರಿಂದ ಕಾರ್ಯಸಿದ್ಧಿಯಾಗಲಿದೆ.

ತುಲಾ: ಭವಿಷ್ಯದ ಯೋಜನೆಗಳಿಗೆ ನೆರವಾಗಬಲ್ಲಂಥ ವ್ಯಕ್ತಿಯನ್ನು ಭೇಟಿಯಾಗುವ ಸಂಭವವಿದೆ. ಹೊಸ ಸ್ಥಳದಲ್ಲಿ ಹೊಸ ಜೀವನ ಪ್ರಾರಂಭಿಸಲು ನಿಶ್ಚಯಿಸುವಿರಿ. ಸಾಧ್ಯವಾದಷ್ಟೂ ಉಳಿತಾಯ ಮಾಡುವ ಪ್ರಯತ್ನ ನಡೆಸಿ.

ವೃಶ್ಚಿಕ: ಆತ್ಮೀಯತೆಯ ಸಂಬಂಧವೊಂದನ್ನು ಹುಟ್ಟು ಹಾಕಲು ಹೃದಯದ ಮಾತುಗಳಿಗೆ ಬೆಲೆ ಕೊಡುವಿರಿ. ರಾಜಕೀಯ ಕ್ಷೇತ್ರದಲ್ಲಿ ಪ್ರಭಾವ ಹೆಚ್ಚಲಿದೆ. ಜಾಹೀರಾತು ಸಂಸ್ಥೆಗಳವರಿಗೆ ಉತ್ತಮವಾಗಿರುವುದು.

ಧನು: ಹಂತ ಹಂತವಾಗಿ ಆಸೆಗಳು ಈಡೇರಲಿವೆ. ಕೃಷಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಚಿಂತೆ ಮಾಡಬೇಕಾದ ಅಗತ್ಯವಿಲ್ಲ. ಎಂಜಿನಿಯರ್‌ಗಳ ನಿರುದ್ಯೋಗದ ಸಮಸ್ಯೆ ಸ್ನೇಹಿತನ ಪ್ರಯತ್ನ ಬಲದಿಂದ ದೂರವಾಗಲಿದೆ.

ಮಕರ: ಬೇಸರ ಕಳೆಯಲು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ. ವಾಹನಗಳ, ಯಂತ್ರೋಪಕರಣಗಳ ಬಿಡಿ ಭಾಗ ಮಾರಾಟಗಾರರಿಗೆ ಬಿಡುವಿಲ್ಲದ ದಿನ. ಸ್ಥಿರ ಆಸ್ತಿ ಖರೀದಿಸುವ ಬಗ್ಗೆ ಯೋಚನೆ ಮಾಡಲಿದ್ದೀರಿ.

ಕುಂಭ: ಅರಸಿ ಬಂದ ಉದ್ಯೋಗವನ್ನು ದೂರಮಾಡುವುದು ಮೂರ್ಖತನ. ಆಹಾರ ಶೈಲಿಯು ಆರೋಗ್ಯ ಹದಗೆಡಲು ಕಾರಣವಾಗುತ್ತದೆ. ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದ ನಿರುತ್ಸಾಹಿಯಾಗಿರುತ್ತೀರಿ.


ಮೀನ: ಈ ದಿನ ವ್ಯವಸ್ಥಿತವಾಗಿ ದಿನಚರಿ ರೂಪಿಸಿಕೊಂಡರೆ ಈಗಾಗಲೇ ಆರಂಭಿಸಿರುವ ಯೋಜನೆಗಳು ಪೂರ್ಣಗೊಳ್ಳಲಿವೆ. ಅವಿವಾಹಿತರಿಗೆ ಉತ್ತಮ ಸಂಬಂಧಗಳು ಪ್ರಾಪ್ತಿಯಾಗುತ್ತವೆ.

ಪದಬಂಧ 6025

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಗಲವಾದ ಹರಿವಾಣ (3)
3.ವನದಲ್ಲಿ ಕಾಣಿಸಿದ ಉಡುಗೆ (3)
5.ಮದುವೆಯಲ್ಲಿ ಹೆಣ್ಣಿನ ತಂದೆ ವರನಿಗೆ ಕೊಡುವ ಉಡುಗೊರೆ (5)
6.ಶರಧಿಯಲ್ಲಿ ಸಿಕ್ಕಿರುವ ಬಾಣ (2)
8.ನಾವಿಕನಿಗೆ ಪ್ರಾಪ್ತವಾಗಿರುವ ಸ್ವರ್ಗ (2)
9.ಹತೋಟಿಗೊಂದು ಪರ್ಯಾಯ ಪದ (2)
10.ಕಲಾವಿದನು ತೆಗೆದ ಬಾಗಿಲು (2)
14.ಕೈಗೂಡದ ಆಸೆಯನ್ನು ಹೀಗೆನ್ನಿ (5)
15.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
16.ಅಪೇಕ್ಷೆಯನ್ನು ಈ ರೀತಿಯೂ ಹೇಳುತ್ತಾರೆ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಧೀನದಲ್ಲಿರುವಿಕೆ (4)
2. ಅತಿಯಾದ ಆತುರ (3)
3.ವರ ಹಿಡಿದಿರುವ ಚಿನ್ನದ ನಾಣ್ಯ (3)
4.ಬೆಂಬಿಡದೆ ಕಾಡುವವನನ್ನು ಹೀಗೆನ್ನುವರು (4)
7.ಕೀವು ಇಲ್ಲಿ ಕಾಣಿಸುತ್ತಿದೆ (3)
8.ನಾಕದಲ್ಲಿ ತೂರಿಸಿದ ಮೂಗು (3)
9.ಮಂಗಳ ಗ್ರಹವಿದು (4)
11.ಬಲಾತ್ಕಾರದ ಆಡಳಿತವನ್ನು ಹೀಗೆನ್ನಿ (4)
12.ನಗರದಲ್ಲಿದ್ದಾಗ ಕೇಳಿಸಿದ ಚರ್ಮ ವಾದ್ಯ (3)
13.ಹಾರ ಹಿಡಿದ ಬ್ರಾಹ್ಮಣನಿಲ್ಲಿ ತಿರುಗಿದ್ದಾನಲ್ಲಾ (3)



6024ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಲವಲವಿಕೆ 3.ಸಂಕುಲ 5.ಕರಾರುವಾಕ್ಕು 7.ಶರಣ 9.ಬಯಲು 11.ಕುರವಿ 13.ಸಮರಸಿಂಹ 15.ಮುದ್ರಣ 16.ದ್ವಾರಪಾಲಕ

ಮೇಲಿಂದ ಕೆಳಕ್ಕೆ: 1.ಲವಲೇಶ 2.ವಿವೇಕ 4.ಕುಮ್ಮಕ್ಕು 6.ರುಮಾಲು 8.ರಫ್ತು 9.ಬರ್ಬರ 10.ಕ್ಷಾರ 12.ವಿಮರ್ಶಕ 13.ಸಮುದ್ರ 14.ಹತ್ತಿರ

ಸುಡೊಕು 6410

		6		7		3		8
			2		4			
7		1		5		4		9
	9		5				7	
1				4	7			3
	6				8		5	
9		5			6			1
				3			8	
6		8	4			9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6409 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಸರಕು ರವಾನೆಗೆ ಅನ್ಯಮಾರ್ಗ

ಪಾಕ್‌ಗೆ ₹85 ಸಾವಿರ ಕೋಟಿ ಮೌಲ್ಯದ ಉತ್ಪನ್ನ ಪೂರೈಕೆ

ನವದೆಹಲಿ (ಪಿಟಿಐ): ವ್ಯಾಪಾರದ ನಿರ್ಬಂಧಗಳ ಉಲ್ಲಂಘನೆ ಮೂಲಕ ಪ್ರತಿ ವರ್ಷ ಭಾರತದಲ್ಲಿ ತಯಾರಾಗುವ ₹85 ಸಾವಿರ ಕೋಟಿ ಮೌಲ್ಯದ ಸರಕುಗಳು ದುಬೈ, ಸಿಂಗಪುರ ಮತ್ತು ಕೊಲಂಬೊ ಬಂದರುಗಳ ಮೂಲಕ ಪಾಕಿಸ್ತಾನಕ್ಕೆ ರವಾನೆಯಾಗುತ್ತವೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಅಂದಾಜಿಸಿದೆ.

ಭಾರತದಲ್ಲಿರುವ ಕಂಪನಿಗಳು ಈ ಬಂದರುಗಳಿಗೆ ಸರಕುಗಳನ್ನು ಪೂರೈಸುತ್ತವೆ. ಇವುಗಳನ್ನು ಅಲ್ಲಿನ ಗೋದಾಮುಗಳಲ್ಲಿ ದಾಸ್ತಾನು ಮಾಡಲಾಗುತ್ತದೆ. ಈ ಸರಕುಗಳಿಗೆ ಸುಂಕ ಪಾವತಿಸದೆ ಗೋದಾಮುಗಳಲ್ಲಿ ಸಂಗ್ರಹಿಸಬಹುದಾಗಿದೆ ಎಂದು ಹೇಳಿದೆ.



'ಈ ಗೋದಾಮುಗಳಲ್ಲಿ ಸರಕುಗಳ ಲೇಬಲ್ ಮತ್ತು ದಾಖಲೆಗಳನ್ನು ರಫ್ತು ಮಾಡುವ ದೇಶಕ್ಕೆ ಅನುಗುಣವಾಗಿ ಬದಲಾಯಿಸಲಾಗುತ್ತದೆ. ಉದಾಹರಣೆಗೆ ಭಾರತದ ಸರಕುಗಳ ಮೇಲೆ 'ಮೇಡ್ ಇನ್ ಯುಎಇ' ಎಂದು ಲೇಬಲ್ ಅಂಟಿಸುವ ಸಾಧ್ಯತೆಯಿದೆ. ಆ ಬಳಿಕ ಪಾಕಿಸ್ತಾನಕ್ಕೆ ರವಾನಿಸಲಾಗುತ್ತದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಭಾರತವು ನೇರವಾಗಿ ಪಾಕಿಸ್ತಾನದ ಜತೆಗೆ ವ್ಯಾಪಾರ ನಡೆಸುವುದಿಲ್ಲ. ಆದರೆ, ಪರೋಕ್ಷವಾಗಿ ಸರಕುಗಳು ರವಾನೆಯಾಗುತ್ತಿವೆ ಎಂದು ತಿಳಿಸಿದ್ದಾರೆ.

ಈ ವಿಧಾನವು ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರ ನಿರ್ಬಂಧಗಳಿಂದ ತಪ್ಪಿಸಿಕೊಳ್ಳಲು ಕಂಪನಿಗಳಿಗೆ ನೆರವಾಗಿದೆ. ಅಲ್ಲದೆ, ಈ ಮಾರ್ಗದ ಮೂಲಕ ರವಾನಿಸುವ ಸರಕುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತದೆ ಎಂದು ಹೇಳಿದ್ದಾರೆ.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯ ಬಳಿಕ ಪಾಕಿಸ್ತಾನದ ಮೇಲೆ ಕೇಂದ್ರ ಸರ್ಕಾರವು ಹಲವು ನಿರ್ಬಂಧಗಳನ್ನು ಹೇರಿದೆ. ಈ ಪೈಕಿ ಅಟ್ಟಾರಿ ಗಡಿ ಬಂದ್ ಕೂಡ ಸೇರಿದೆ. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವೂ ಭಾರತದ ಜತೆಗಿನ ಎಲ್ಲಾ ವ್ಯಾಪಾರ ಒಪ್ಪಂದಗಳನ್ನು ರದ್ದುಪಡಿಸಿದೆ.

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹445
12 ಕ್ಕೆ	₹60
ಮೈಸೂರು	
100ಕ್ಕೆ	₹445

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹314-602
ದ್ವಿತಳಿ (ಬಿ.ವಿ)	₹428-688

ಮುಂಗಾರು ಅಧಿವೇಶನದಲ್ಲಿ ವಿಮಾ ತಿದ್ದುಪಡಿ ಮಸೂದೆ ಮಂಡನೆ?



ನವದೆಹಲಿ (ಪಿಟಿಐ): ಜುಲೈನಲ್ಲಿ ಆರಂಭವಾಗಲಿರುವ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ವಿಮಾ ತಿದ್ದುಪಡಿ ಮಸೂದೆ ಮಂಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರವು ವಿಮಾ ವಲಯದಲ್ಲಿ ಶೇ 100ರಷ್ಟು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಗೆ ಅವಕಾಶ ಕಲ್ಪಿಸಲು ನಿರ್ಧರಿಸಿದೆ. ಇದಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಮಸೂದೆ ಮಂಡಿಸಲಿದೆ ಎಂದು ಹೇಳಿವೆ.

ಸಂಸತ್‌ನಲ್ಲಿ ಮಂಡನೆಗೂ ಮೊದಲು ಕೇಂದ್ರ ಸಚಿವ ಸಂಪುಟದ ಮುಂದೆ ಕರಡು ಮಸೂದೆ ಮಂಡಿಸಲಾಗುತ್ತದೆ. ಇದಕ್ಕೆ ಅನುಮೋದನೆ ದೊರೆತ ಬಳಿಕ ಕೇಂದ್ರ ಹಣಕಾಸು ಸಚಿವಾಲಯದ ಅಧೀನದಲ್ಲಿ ಬರುವ ಹಣಕಾಸು ಸೇವೆಗಳ ಇಲಾಖೆಯು ಮಸೂದೆ ಮಂಡನೆಯ ಪ್ರಕ್ರಿಯೆಗಳನ್ನು ಆರಂಭಿಸಲಿದೆ ಎಂದು ಹೇಳಿವೆ.

ಪ್ರಸ್ತುತ ವಿಮಾ ವಲಯದಲ್ಲಿ ಶೇ 74ರಷ್ಟು ಎಫ್‌ಡಿಐ ಹೂಡಿಕೆಗೆ ಅವಕಾಶವಿದೆ. ಇದನ್ನು ಹೆಚ್ಚಿಸುವ ಮೂಲಕ ಎಲ್ಲಾ ವರ್ಗದ ಜನರಿಗೂ ವಿಮಾ ಸೌಲಭ್ಯ ಒದಗಿಸುವುದು ಸರ್ಕಾರದ ಗುರಿಯಾಗಿದೆ. ಬಜೆಟ್ ಭಾಷಣದ ವೇಳೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ಕುರಿತು ಪ್ರಸ್ತಾಪಿಸಿದ್ದರು.

ವಿಮಾದಾರರ ಹಿತರಕ್ಷಣೆ ಮತ್ತು ಅವರಿಗೆ ಹಣಕಾಸಿನ ಭದ್ರತೆ ಒದಗಿಸುವುದು ಪ್ರಸ್ತಾವಿತ ಮಸೂದೆಯ ಗುರಿಯಾಗಿದೆ. ಅಲ್ಲದೆ, ಹಲವು ಕಂಪನಿಗಳಿಗೆ ವಿಮಾ ಕ್ಷೇತ್ರ ಪ್ರವೇಶಿಸಲು ಅವಕಾಶ ಒದಗಿಸಲಿದೆ. ಆ ಮೂಲಕ ದೇಶದ ಆರ್ಥಿಕತೆ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಒತ್ತು ನೀಡುವುದು ಸರ್ಕಾರದ ಉದ್ದೇಶವಾಗಿದೆ.

2047ರ ವೇಳೆಗೆ ದೇಶದ ಎಲ್ಲರಿಗೂ ವಿಮಾ ಸೌಲಭ್ಯ ನೀಡುವ ಗುರಿ ಹೊಂದಲಾಗಿದೆ. ಮಸೂದೆಯು ವಿಮಾ ವಲಯದ ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ ಅವಕಾಶ ಕಲ್ಪಿಸಲಿದೆ ಎಂದು ಸರ್ಕಾರ ಹೇಳಿದೆ.

ಷೇರುಪೇಟೆ ಏರಿಳಿತ ನಿಭಾಯಿಸುವುದು ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಷೇರುಪೇಟೆಯಲ್ಲಿ ಏರಿಳಿತ ಸರ್ವೇ ಸಾಮಾನ್ಯ. ಮಾರುಕಟ್ಟೆಯು ಯಾವಾಗ ಎಷ್ಟು ಏರಿಕೆ ಕಾಣುತ್ತದೆ; ಯಾವಾಗ ಎಷ್ಟು ಕುಸಿತ ದಾಖಲಿಸುತ್ತದೆ ಎಂದು ಅಂದಾಜಿಸುವುದು ಮಾರುಕಟ್ಟೆ ತಜ್ಞರಿಗೂ ಸಾಧ್ಯವಿಲ್ಲ.

ಷೇರುಪೇಟೆ ಪ್ರವೇಶದ ವೇಳೆ ಬಹುಪಾಲು ಮಂದಿ ದೀರ್ಘಾವಧಿಗೆ ಹೂಡಿಕೆ ಮಾಡುತ್ತೇವೆ ಎಂದುಕೊಂಡು ಬರುತ್ತಾರೆ. ಆದರೆ, ಮಾರುಕಟ್ಟೆಯ ತ್ವರಿತ ಮತ್ತು ಹರಿತವಾದ ಏರಿಳಿತಗಳು ಭಯ ಹುಟ್ಟಿಸುವ ಕಾರಣ, ಅನೇಕರು ಹೂಡಿಕೆಯ ಪಯಣವನ್ನೇ ಮೊಟಕುಗೊಳಿಸಿ ಹೂಡಿಕೆ ಮಾಡುವ ಆಸೆಗೆ ಪೂರ್ಣ ವಿರಾಮ ಹಾಕುತ್ತಾರೆ. ನಿಮಗೆ ಗೊತ್ತಿರಲಿ, ಯಾರು ಮಾರುಕಟ್ಟೆಯ ಒಳಮರ್ಮ ಅರಿತು ಶಿಸ್ತುಬದ್ಧವಾಗಿ ದೀರ್ಘಾವಧಿಗೆ ಹೂಡಿಕೆ ಮುಂದುವರಿಸುತ್ತಾರೋ ಅವರು ಖಂಡಿತವಾಗಿಯೂ ಸಂಪತ್ತು ಗಳಿಸುತ್ತಾರೆ.

ಏರಿಳಿತ ಸಾಮಾನ್ಯ: ಷೇರು ಮಾರುಕಟ್ಟೆಯಲ್ಲಿ ಏರಿಳಿತಗಳು ಇದ್ದದ್ದೇ ಎನ್ನುವುದನ್ನು ಈಗಾಗಲೇ ನಾವು ಹೇಳಿದ್ದೇವೆ. ಆದರೆ, ಪ್ರತಿ ಬಾರಿ ಮಾರುಕಟ್ಟೆ ಕುಸಿದ ನಂತರದಲ್ಲಿ ಜಿಗಿತ ದಾಖಲಿಸಿದೆ ಎನ್ನುವುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ.

2000-2001ರ ಡಾಟ್ ಕಾಂ ಬಬಲ್, 2008-2009ರ ಜಾಗತಿಕ ಆರ್ಥಿಕ ಕುಸಿತ, 2020ರ ಕೋವಿಡ್ ಹೀಗೆ ಅನೇಕ ಸಂದರ್ಭಗಳಲ್ಲಿ ಮಾರುಕಟ್ಟೆಯು ಗಣನೀಯವಾಗಿ ಕುಸಿತ ಕಂಡಿದೆ. ಆದರೆ, ಕುಸಿತದ ಬಳಿಕ ಒಂದು ಗಳಿಕೆಯ ಓಟ ಇದ್ದೇ ಇರುತ್ತದೆ.

ಯಾವ ಹೂಡಿಕೆದಾರರು ಷೇರುಪೇಟೆ ಕುಸಿತದ ಸಂದರ್ಭದಲ್ಲಿ ತಾಳ್ಮೆಯಿಂದ ಕ್ರಮಬದ್ಧವಾಗಿ ಅರಿತು ಹೂಡಿಕೆ ಮಾಡಿರುತ್ತಾರೋ ಅವರೆಲ್ಲಾ ಉತ್ತಮ ಗಳಿಕೆ ಪಡೆದಿದ್ದಾರೆ. 2020ರ ಮಾರ್ಚ್‌ನಲ್ಲಿ (ಕೋವಿಡ್ ವೇಳೆ) ಸೆನ್ಸೆಕ್ಸ್ 40,000 ಅಂಶಗಳಿಂದ 23,000 ಅಂಶಗಳಿಗೆ ಕುಸಿತ ಕಂಡಿತ್ತು. ಆದರೆ, ಈಗ 79,000 ಅಂಶಗಳ ಆಸುಪಾಸಿನಲ್ಲಿದೆ.

ಅನಿಶ್ಚಿತತೆ ಮತ್ತು ಅವಕಾಶಗಳ ಮಿಶ್ರಣ: ಷೇರುಪೇಟೆಯಲ್ಲಿ ಅನಿಶ್ಚಿತತೆ ಎನ್ನುವುದು ಎರಡು ಅಲಗಿನ ಕತ್ತಿ ಇದ್ದಂತೆ. ಏಕೆಂದರೆ ಮಾರುಕಟ್ಟೆಯಲ್ಲಿನ ತ್ವರಿತ ಮತ್ತು ಹರಿತವಾದ ಏರಿಳಿತಗಳು ರಿಸ್ಕ್ ಜೊತೆ ಜೊತೆಗೆ ಅವಕಾಶವನ್ನೂ ತಂದುಕೊಡುತ್ತವೆ.

ದೀರ್ಘಾವಧಿಗೆ ಷೇರು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರಿಗೆ ಮಾರುಕಟ್ಟೆ ಕುಸಿತ ಅವಕಾಶಗಳನ್ನು ಸೃಷ್ಟಿ ಮಾಡುತ್ತದೆ. ಮಾರುಕಟ್ಟೆ ಇಳಿಕೆಯ ಸಂದರ್ಭದಲ್ಲಿ ಕಡಿಮೆ ಬೆಲೆಗೆ ಉತ್ತಮ ಕಂಪನಿಗಳ ಷೇರು, ಮ್ಯೂಚುವಲ್ ಫಂಡ್‌ಗಳನ್ನು ಕೊಳ್ಳುವ ಅವಕಾಶ ಒದಗಿ ಬರುತ್ತದೆ. ಆದರೆ, ಮಾರುಕಟ್ಟೆ ಕುಸಿತ ಕಾಣುತ್ತಿದೆ ಎಂದು ಆತಂಕಪಟ್ಟು ಎಲ್ಲ ಹೂಡಿಕೆಗಳನ್ನು ಮಾರಾಟ ಮಾಡಿದರೆ ನಷ್ಟದ ಬಾಬ್ತು ನಿಮ್ಮದಾಗುತ್ತದೆ. ಹಾಗಾಗಿ, ದೀರ್ಘಾವಧಿಗೆ ಹೂಡಿಕೆ ಮಾಡುವಾಗ ಸರಿಯಾಗಿ ಅರಿತು ಶಿಸ್ತುಬದ್ಧವಾಗಿ ಹೂಡಿಕೆ ಮಾಡುವುದು ಬಹಳ ಮುಖ್ಯ.

ಏರಿಳಿತ ನಿಭಾಯಿಸುವುದು ಹೇಗೆ?: ಯಾವುದೇ ಹೂಡಿಕೆದಾರ ಒಂದೇ ರೀತಿಯ ಹೂಡಿಕೆಯನ್ನು ಗಣನೆಗೆ ತೆಗೆದುಕೊಂಡು ಹೂಡಿಕೆ ಮಾಡಬಾರದು. ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳಬೇಕು. ಈಕ್ವಿಟಿ ಮಾರುಕಟ್ಟೆ, ಮ್ಯೂಚುವಲ್ ಫಂಡ್‌ನಂತಹ ಹೆಚ್ಚು ರಿಸ್ಕ್ ಇರುವ ಹೂಡಿಕೆಗಳ ಜೊತೆ ಜೊತೆಗೆ ಫಿಕ್ಸೆಡ್ ಡೆಪಾಸಿಟ್, ಬಾಂಡ್, ಚಿನ್ನ, ಅಂಚೆ ಕಚೇರಿ ಹೂಡಿಕೆಗಳಲ್ಲೂ ಒಂದಿಷ್ಟು ಮೊತ್ತ ತೊಡಗಿಸಬೇಕು. ಆಗ ಮಾರುಕಟ್ಟೆಯ ಕುಸಿತವನ್ನು ನಿಭಾಯಿಸುವುದು ಸುಲಭ.



ಇನ್ನು ಮ್ಯೂಚುವಲ್ ಮತ್ತು ಷೇರುಗಳಲ್ಲಿ ಹೂಡಿಕೆ ಮಾಡುವಾಗ ವ್ಯವಸ್ಥಿತ ಹೂಡಿಕೆ ಯೋಜನೆಯನ್ನು (ಎಸ್‌ಐಪಿ) ಅನುಸರಿಸುವುದು ಮುಖ್ಯ. ಎಸ್‌ಐಪಿ ಮಾದರಿಯಲ್ಲಿ ಹೂಡಿಕೆ ಮಾಡಿದಾಗ ಮಾರುಕಟ್ಟೆ ಏರಿಳಿತದ ಅನುಕೂಲ ಸಿಗುತ್ತದೆ. ಮಾರುಕಟ್ಟೆ ಕುಸಿದಾಗ ಕಡಿಮೆ ಬೆಲೆಗೆ ಹೂಡಿಕೆಗಳನ್ನು ಕೊಳ್ಳಲು ಸಾಧ್ಯವಾಗಿ ಒಟ್ಟಾರೆ ಹೂಡಿಕೆಗಳ ಖರೀದಿ ಸರಾಸರಿ ತಗ್ಗಿಸಿಕೊಳ್ಳಲು ಸಾಧ್ಯವಾಗುತ್ತದೆ.

ಇನ್ನು ಮಾರುಕಟ್ಟೆ ಕುಸಿತ ಕಂಡಾಗ ನಾನು ಹೂಡಿಕೆ ಮಾಡುತ್ತೇನೆ ಎನ್ನುವ ಆಲೋಚನೆಯನ್ನು ಬಿಡಿ. ಶಿಸ್ತುಬದ್ಧವಾಗಿ ಹೂಡಿಕೆ ಮಾಡುವುದನ್ನು ಮುಂದುವರಿಸಿ. ಮಾರುಕಟ್ಟೆಯ ಕುಸಿತವನ್ನು ನಿಖರವಾಗಿ ಹೇಳಲೂ ಯಾರಿಗೂ ಸಾಧ್ಯವಿಲ್ಲ ಎನ್ನುವುದು ನಿಮಗೆ ತಿಳಿದಿರಲಿ. ಷೇರು ಮಾರುಕಟ್ಟೆ, ಮ್ಯೂಚುವಲ್ ಫಂಡ್ ಅಥವಾ ಇನ್ನಾವುದೇ ರೀತಿಯ ಹೂಡಿಕೆ ಮಾಡುವ ಮೊದಲು ನಿಮ್ಮ 6 ತಿಂಗಳ ಖರ್ಚಿಗಾಗುವಷ್ಟು ಮೊತ್ತವನ್ನು ಬ್ಯಾಂಕ್‌ನ ಉಳಿತಾಯ ಖಾತೆ, ಫಿಕ್ಸೆಡ್ ಡೆಪಾಸಿಟ್ ಮತ್ತು ಲಿಕ್ವಿಡ್ ಫಂಡ್‌ನಂತಹ ಹೂಡಿಕೆಗಳಲ್ಲಿ ಇಟ್ಟುಕೊಳ್ಳಿ. ತುರ್ತು ಖರ್ಚುಗಳಿಗೆ ಆ ಮೊತ್ತ ನೆರವಿಗೆ ಬರುವುದರಿಂದ ಸಂಕಷ್ಟ ಕಾಲದಲ್ಲಿ ಹೂಡಿಕೆಗಳನ್ನು ಬಿಡಿಸಿಕೊಳ್ಳುವ ಪರಿಸ್ಥಿತಿ ಬರುವುದಿಲ್ಲ.

ಈ ತಪ್ಪು ಮಾಡಬೇಡಿ: ಮಾರುಕಟ್ಟೆ ಕುಸಿದಾಗ ಹೂಡಿಕೆಗಳು ಇಳಿಕೆ ಕಾಣುವುದು ಸಾಮಾನ್ಯ. ಹಾಗಾಗಿ, ಕುಸಿತದ ವೇಳೆ ಯಾವುದೇ ಕಾರಣಕ್ಕೂ ಭಾವನಾತ್ಮಕ ನಿರ್ಧಾರಕ್ಕೆ ಮುಂದಾಗಿ ಉತ್ತಮ ಹೂಡಿಕೆಗಳನ್ನು ಮಾರಾಟ ಮಾಡಲು ಹೋಗಬೇಡಿ. ಹೀಗೆ ಮಾಡಿದರೆ ದೀರ್ಘಾವಧಿಯ ಗಳಿಕೆಯ ಅವಕಾಶ ಕೈ ತಪ್ಪುತ್ತದೆ. ಮಾರುಕಟ್ಟೆ ಕುಸಿತ ಕಂಡಾಗ ಮ್ಯೂಚುವಲ್ ಫಂಡ್ ಮತ್ತು ಈಕ್ವಿಟಿ ಮಾರುಕಟ್ಟೆಯ ಎಸ್‌ಐಪಿ ನಿಲ್ಲಿಸಬೇಡಿ. ಎಸ್‌ಐಪಿ ನಿಲ್ಲಿಸಿದರೆ ದೀರ್ಘಾವಧಿಯಲ್ಲಿ ದೊಡ್ಡ ಮೊತ್ತದ ಗಳಿಕೆ ಸಾಧ್ಯವಾಗುವುದಿಲ್ಲ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಗಳಿಕೆ ನಡುವೆ ಮಂಕಾದ ಸೂಚ್ಯಂಕಗಳು

ಏಪ್ರಿಲ್ 25ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಅಲ್ಪ ಗಳಿಕೆ ದಾಖಲಿಸಿವೆ. 79,212 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.84ರಷ್ಟು ಗಳಿಸಿಕೊಂಡಿದೆ. 24,039 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 0.79ರಷ್ಟು ಜಿಗಿದಿದೆ.

ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.73ರಷ್ಟು ಹೆಚ್ಚಳ ಕಂಡಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 0.83ರಷ್ಟು ಗಳಿಕೆ ದಾಖಲಿಸಿದೆ. ವಾರದ ಮೊದಲ ಮೂರು ದಿನಗಳಲ್ಲಿ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡುಕೊಂಡವು. ಆದರೆ, ನಂತರದ ಎರಡು ದಿನಗಳಲ್ಲಿ ಭಾರತ ಮತ್ತು ಪಾಕಿಸ್ತಾನ ಸಂಘರ್ಷದ ಪರಿಣಾಮ ಸೂಚ್ಯಂಕಗಳು ಕುಸಿತ ದಾಖಲಿಸಿದವು. ಇನ್ನು ಲಾಭಕ್ಕಾಗಿ ಷೇರುಗಳ ಮಾರಾಟ ಪ್ರಕ್ರಿಯೆ ಕೂಡ ಷೇರುಪೇಟೆಯ ಮೇಲೆ ಪರಿಣಾಮ ಬೀರಿದೆ.

ವಾರದ ಅಂದಾಜು ನೋಡಿದಾಗ ವಲಯವಾರು ಪ್ರಗತಿಯಲ್ಲಿ ಮಾಧ್ಯಮ ಶೇ 2.11, ನಿಫ್ಟಿ ಎಫ್‌ಎಂಸಿಜಿ ಶೇ 0.25 ಮತ್ತು ಫೈನಾನ್ಸ್ ಶೇ 0.14ರಷ್ಟು ಕುಸಿದಿವೆ. ಆಟೊ ಶೇ 2.91, ರಿಯಲ್ ಎಸ್ಟೇಟ್ ಶೇ 1.69, ಫಾರ್ಮಾ ಶೇ 1.68, ಲೋಹ ಶೇ 1.1, ನಿಫ್ಟಿ ಬ್ಯಾಂಕ್ ಶೇ 0.69, ಎನರ್ಜಿ ಶೇ 0.47, ಸೇವಾ ವಲಯ ಶೇ 0.48 ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.2ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ ಅದಾನಿ ಪೋರ್ಟ್ಸ್ ಶೇ 5.5, ಶ್ರೀರಾಮ್ ಫೈನಾನ್ಸ್ ಶೇ 5.2, ಏರ್‌ಟೆಲ್ ಶೇ 3.97, ಅದಾನಿ ಎಂಟರ್ ಪ್ರೈಸಸ್ ಶೇ 2.92, ಎಚ್‌ಡಿಎಫ್‌ಸಿ ಲೈಫ್ ಶೇ 2.51, ಐಷರ್ ಮೋಟರ್ಸ್ ಶೇ 2.16, ಎನ್‌ಟಿಪಿಸಿ ಶೇ 2.14, ಎಕ್ಸಿಸ್ ಬ್ಯಾಂಕ್ ಶೇ 2.13, ಅಪೋಲೊ ಹಾಸ್ಪಿಟಲ್ಸ್ ಶೇ 1.86, ಎಚ್‌ಯುಎಲ್ ಶೇ 1.81, ಏಷ್ಯನ್ ಪೇಂಟ್ಸ್ ಶೇ 1.6 ಮತ್ತು ಕೋಲ್ ಇಂಡಿಯಾ ಶೇ 1.52ರಷ್ಟು ಕುಸಿದಿವೆ.

ಟೆಕ್ ಮಹೀಂದ್ರ ಶೇ 11.92, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 9.82, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6.82, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 5.65, ಟಾಟಾ ಮೋಟರ್ಸ್ ಶೇ 5.37, ಟಿಸಿಎಸ್ ಶೇ 4.5, ಇನ್ಫೊಸಿಸ್ ಶೇ 4.22, ಇಂಡಸ್ ಇಂಡ್ ಬ್ಯಾಂಕ್ ಶೇ 3.51, ಹೀರೊ ಮೋಟೊಕಾರ್ಪ್ ಶೇ 3.05, ಟಾಟಾ ಕನ್ಸ್ಯೂಮರ್ ಶೇ 2.89, ಜಿಯೊ ಫೈನಾನ್ಶಿಯಲ್ ಶೇ 2.66, ಅಲ್ಟ್ರಾ ಟೆಕ್ ಸಿಮೆಂಟ್ ಶೇ 2.64ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಐಆರ್‌ಎಫ್‌ಸಿ, ಅಲ್ಟ್ರಾ ಟೆಕ್ ಸಿಮೆಂಟ್, ಟಿವಿಎಸ್ ಮೋಟಾರ್ ಕಂಪನಿ, ಅದಾನಿ ಗ್ರೀನ್ ಎನರ್ಜಿ, ಐಡಿಬಿಐ ಬ್ಯಾಂಕ್, ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಇಂಡಿಯನ್ ಆಯಿಲ್, ಎಸ್‌ಬಿಐ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಸಿಡಿಎಸ್‌ಎಲ್, ಸಿಟಿ ಯೂನಿಯನ್ ಬ್ಯಾಂಕ್, ಅವೆನ್ಯೂ ಸೂಪರ್ ಮಾರ್ಕೆಟ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಭಾರತ–ಪಾಕಿಸ್ತಾನ ನಡುವಿನ ಸಂಘರ್ಷ, ಜಾಗತಿಕ ವಿದ್ಯಮಾನಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ದೆಹಲಿ ಸುಲ್ತಾನ, ಮೊಘಲರಿಗೆ ಕೊಕ್

ಎನ್‌ಸಿಇಆರ್‌ಟಿ: 7ನೇ ತರಗತಿಯ ಸಮಾಜ ವಿಜ್ಞಾನದ ಹೊಸ ಪುಸ್ತಕ ಬಿಡುಗಡೆ


ನವದೆಹಲಿ (ಪಿಟಿಐ): ಏಳನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿದ್ದ ದೆಹಲಿ ಸುಲ್ತಾನರು ಮತ್ತು ಮೊಘಲರ ಆಳ್ವಿಕೆ ಕುರಿತ ಪಾಠಗಳನ್ನು ಕೈಬಿಟ್ಟು ಹೊಸ ಪಠ್ಯಪುಸ್ತಕವನ್ನು ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ಬಿಡುಗಡೆ ಮಾಡಿದೆ.

ಹೊಸ ಪಠ್ಯದಲ್ಲಿ 'ಮಹಾಕುಂಭ' ಮೇಳದ ಬಗ್ಗೆ ವಿವರಿಸಲಾಗಿದೆ. ಅಲ್ಲದೆ ಕೇಂದ್ರ ಸರ್ಕಾರದ 'ಬೇಟಿ ಬಚಾವೊ, ಬೇಟಿ ಪಢಾವೊ' ಸೇರಿ ವಿವಿಧ ಕಾರ್ಯಕ್ರಮಗಳ ಕುರಿತ ಮಾಹಿತಿ ನೀಡಲಾಗಿದೆ.

ಶಾಲಾ ಶಿಕ್ಷಣದಲ್ಲಿ ಭಾರತೀಯ ಸಂಪ್ರದಾಯ, ತತ್ವಜ್ಞಾನ, ಜ್ಞಾನ ವ್ಯವಸ್ಥೆ ಮತ್ತು ಸ್ಥಳೀಯ ವಿಷಯಗಳಿಗೆ ಆದ್ಯತೆ ನೀಡಬೇಕು ಎಂಬ ಆಶಯವನ್ನು ಈ ಮೂಲಕ ಒತ್ತಿ ಹೇಳಲಾಗಿದೆ.

'ಪ್ರಸ್ತುತ ಪುಸ್ತಕದ ಮೊದಲ ಭಾಗ ಮಾತ್ರ ಬಂದಿದೆ. ಎರಡನೇ ಭಾಗ ಮುಂದಿನ ದಿನಗಳಲ್ಲಿ ಬರಲಿದೆ' ಎಂದು ಎನ್‌ಸಿಇಆರ್‌ಟಿ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

ಹೊಸ ಪುಸ್ತಕದಲ್ಲಿ ಏನೇನಿದೆ



7ನೇ ತರಗತಿ ಹೊಸ ಪಠ್ಯ ಪುಸ್ತಕ

- 'ಎಕ್ಸ್‌ಪ್ಲೋರಿಂಗ್ ಸೊಸೈಟಿ: ಇಂಡಿಯಾ ಅಂಡ್ ಬಿಯಾಂಡ್' ಎಂಬ ಶೀರ್ಷಿಕೆಯನ್ನು ಒಳಗೊಂಡಿರುವ ಸಮಾಜ ವಿಜ್ಞಾನ ಪುಸ್ತಕವು ಮಗಧ, ಮೌರ್ಯ, ಶುಂಗ ಮತ್ತು ಶಾತವಾಹನರನ್ನು ಒಳಗೊಂಡಂತೆ ಪ್ರಾಚೀನ ಕಾಲದ ರಾಜವಂಶಸ್ಥರ ಆಳ್ವಿಕೆ ಕುರಿತ ಪಾಠಗಳನ್ನು ಹೊಂದಿದೆ.
- 'ಭೂಮಿ ಹೇಗೆ ಪವಿತ್ರವಾಗುತ್ತದೆ' ಎಂಬ ಹೊಸ ಪಾಠವನ್ನು ಪರಿಚಯಿಸಲಾಗಿದೆ. ಇದರಲ್ಲಿ ಭಾರತ ಮತ್ತು ವಿದೇಶಗಳಲ್ಲಿರುವ ಹಿಂದೂ, ಇಸ್ಲಾಂ, ಕ್ರೈಸ್ತ, ಜೈನ, ಬೌದ್ಧ, ಸಿಖ್, ಯಹೂದಿ, ಪಾರ್ಸಿ ಧರ್ಮಗಳ ಪವಿತ್ರ ಯಾತ್ರಾ ಕ್ಷೇತ್ರಗಳ ಪರಿಚಯ ನೀಡಲಾಗಿದೆ.
- 'ಪವಿತ್ರ ಭೂಗೋಳ' ಪರಿಕಲ್ಪನೆಯಲ್ಲಿ 12 ಜ್ಯೋತಿರ್ಲಿಂಗಗಳು, ಚಾರ್‌ಧಾಮ್ ಯಾತ್ರೆ ಮತ್ತು 'ಶಕ್ತಿ ಪೀಠ'ಗಳ ಬಗ್ಗೆ ಉಲ್ಲೇಖಿಸಲಾಗಿದೆ. ಈ ಕ್ಷೇತ್ರಗಳ ಬಳಿಯ ನದಿಗಳು, ಪರ್ವತಗಳು ಮತ್ತು ಅರಣ್ಯ ಪ್ರದೇಶಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.
- ಈ ವರ್ಷದ ಆರಂಭದಲ್ಲಿ ಪ್ರಯಾಗರಾಜ್‌ನಲ್ಲಿ ನಡೆದ 'ಮಹಾಕುಂಭ' ಮೇಳದಲ್ಲಿ ಸುಮಾರು 66 ಕೋಟಿ ಜನರು ಭಾಗವಹಿಸಿದ್ದರ ಕುರಿತ ಪ್ರಸ್ತಾಪವೂ ಇದೆ. ಆದರೆ ಮೇಳದಲ್ಲಿ ಕಾಲ್ತುಳಿತದಿಂದ 30 ಜನರು ಮೃತಪಟ್ಟು, ಹಲವರು ಗಾಯಗೊಂಡಿದ್ದರ ಉಲ್ಲೇಖವಿಲ್ಲ.

ಕೋವಿಡ್–19ರ ಸಾಂಕ್ರಾಮಿಕದ ಸಂದರ್ಭದಲ್ಲಿ, ಗುಲಾಮಿ, ಖಿಲ್ಜಿ, ತುಘಲಕ್ ಮತ್ತು ಲೋದಿ ಸಂತತಿಗಳನ್ನು ಒಳಗೊಂಡಂತೆ ದೆಹಲಿ ಸುಲ್ತಾನರು ಮತ್ತು ಮೊಘಲ್ ಚಕ್ರವರ್ತಿಗಳ ಸಾಧನೆಗಳ ಕುರಿತ ಮಾಹಿತಿಯನ್ನು ಎನ್‌ಸಿಇಆರ್‌ಟಿ ಕಡಿತಗೊಳಿಸಿತ್ತು. ಆದರೆ ಈಗಿನ ಹೊಸ ಪಠ್ಯ ಪುಸ್ತಕದಲ್ಲಿ ಈ ರಾಜವಂಶಸ್ಥರ ಎಲ್ಲ ಉಲ್ಲೇಖಗಳನ್ನು ತೆಗೆಯಲಾಗಿದೆ.

ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಟೀಕಿಸಿರುವ ವಿರೋಧ ಪಕ್ಷಗಳು, 'ಕೇಸರೀಕರಣ'ದ ಜತೆ ಸಮೀಕರಿಸಿವೆ.

ಸಂಕ್ಷಿಪ್ತ ಸುದ್ದಿ

ಇಂಡಿಗೊ ವಿಮಾನಕ್ಕೆ ಬಾಂಬ್ ಬೆದರಿಕೆ

ವಾರಾಣಸಿ (ಪಿಟಿಐ): ವಾರಾಣಸಿ–ಬೆಂಗಳೂರು ನಡುವೆ ಸಂಚರಿಸುತ್ತಿದ್ದ ಇಂಡಿಗೊ ವಿಮಾನಕ್ಕೆ ಬಾಂಬ್ ಬೆದರಿಕೆ–ವೊಡ್ಡಿದ ಕೆನಡಾ ಪ್ರಜೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.



ವಾರಾಣಸಿ ವಿಮಾನ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ಬಂಧಿತ ಪ್ರಯಾಣಿಕ ವಿಮಾನದೊಳಗೆ ಬಾಂಬ್ ತೆಗೆದುಕೊಂಡು ಹೋಗಿದ್ದ ಎಂದು ಹೇಳಲಾಗಿದೆ. ಈ ಬಗ್ಗೆ ಇಂಡಿಗೊ ಸಿಬ್ಬಂದಿ, ವಿಮಾನ ಸಂಚಾರ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು.

ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಯಾವುದೇ ಸ್ಫೋಟಕ ವಸ್ತುಗಳು ಆತನ ಬಳಿ ಪತ್ತೆಯಾಗಿಲ್ಲ ಎಂದು ಹೇಳಲಾಗಿದೆ.

ಬಾಂಬ್ ಬೆದರಿಕೆಯಿಂದಾಗಿ ವಿಮಾನದೊಳಗೆ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ವಿಮಾನವನ್ನು ಪ್ರತ್ಯೇಕವಾಗಿ ನಿಲುಗಡೆ ಮಾಡಿ ತಪಾಸಣೆ ನಡೆಸಲಾಯಿತು.

'ತಪಾಸಣೆ ಪೂರ್ಣಗೊಂಡ ಬಳಿಕ ನಿರ್ಗಮನಕ್ಕೆ ಅನುಮತಿ ನೀಡಲಾಗಿದ್ದು, ವಿಮಾನವು ಬೆಂಗಳೂರಿಗೆ ಹಾರಾಟ ಆರಂಭಿಸಿತು. ಈ ಪ್ರಕರಣದ ಬಗ್ಗೆ ತನಿಖೆ ಮುಂದುವರಿಸಲಾಗಿದೆ' ಎಂದು ವಿಮಾನ ನಿಲ್ದಾಣದ ನಿರ್ದೇಶಕ ಪುನೀತ್ ಗುಪ್ತಾ ತಿಳಿಸಿದ್ದಾರೆ.

ತಿರುವನಂತಪುರ ವಿಮಾನ ನಿಲ್ದಾಣಕ್ಕೆ ಹುಸಿ ಬಾಂಬ್ ಬೆದರಿಕೆ

ತಿರುವನಂತಪುರ (ಪಿಟಿಐ): ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಾನುವಾರ ಮುಂಜಾನೆ ಇ–ಮೇಲ್ ಮೂಲಕ ಹುಸಿ ಬಾಂಬ್ ಬೆದರಿಕೆ ಬಂದಿತ್ತು. ವಿಮಾನ ನಿಲ್ದಾಣದ ವ್ಯವಸ್ಥಾಪಕರ ಅಧಿಕೃತ ಇ–ಮೇಲ್‌ಗೆ ಬಾಂಬ್ ಬೆದರಿಕೆಯ ಇ–ಮೇಲ್ ಬಂದಿತ್ತು. ತಕ್ಷಣವೇ ಪೊಲೀಸರು ಹಾಗೂ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿ, ವಿಮಾನ ನಿಲ್ದಾಣದಲ್ಲಿ ತಪಾಸಣೆ ನಡೆಸಿದರು. ಬಳಿಕ, ಅದೊಂದು ಹುಸಿ ಬೆದರಿಕೆಯ ಇ–ಮೇಲ್ ಎಂಬುದು ದೃಢವಾಯಿತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಎಫ್‌ಪಿಐ: ₹17,425 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ಏಪ್ರಿಲ್ 21ರಿಂದ 25ರ ವರೆಗೆ ನಡೆದ ವಹಿವಾಟಿನಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹17,425 ಕೋಟಿ ಹೂಡಿಕೆ ಮಾಡಿದ್ದಾರೆ.

ಅಮೆರಿಕ ಮತ್ತು ಚೀನಾ ನಡುವಿನ ಸುಂಕ ಸಮರ ಸ್ವಲ್ಪಮಟ್ಟಿಗೆ ತಣ್ಣಗಾಗುವ ಸಾಧ್ಯತೆಯಿದೆ. ಇದು ಜಾಗತಿಕ ವ್ಯಾಪಾರ ಬಿಕ್ಕಟ್ಟನ್ನು ಕಡಿಮೆ ಮಾಡಿದ್ದು, ಹೂಡಿಕೆದಾರರಲ್ಲಿನ ಆತಂಕ ದೂರ ಮಾಡಿದೆ. ಇದರಿಂದ ವಿದೇಶಿ ಹೂಡಿಕೆದಾರರು ದೇಶೀಯ ಷೇರು ಪೇಟೆಯಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ' ಎಂದು ತಜ್ಞರು ಹೇಳಿದ್ದಾರೆ.

ಇರಾನ್: ಸಾವಿನ ಸಂಖ್ಯೆ 40ಕ್ಕೆ ಏರಿಕೆ

ಮಸ್ಕತ್ (ಎಪಿ/ಎಎಫ್‌ಪಿ): ಇರಾನ್‌ನ ಬಂದರ್ ಅಬ್ಬಾಸ್ ನಗರದಲ್ಲಿರುವ ಶಾಹಿದ್ ರಜಯೀ ಬಂದರಿನಲ್ಲಿ ಶನಿವಾರ ಸಂಭವಿಸಿದ ಭಾರಿ ಸ್ಫೋಟದಲ್ಲಿ ಇಲ್ಲಿಯವರೆಗೆ 40 ಮಂದಿ ಮೃತಪಟ್ಟು, 800ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ.

ಶನಿವಾರ ರಾತ್ರಿಯಿಂದ ಭಾನುವಾರ ಬೆಳಗ್ಗಿನವರೆಗೂ ಹೆಲಿಕಾಪ್ಟರ್ ಮೂಲಕ ಬೆಂಕಿಯನ್ನು ನಂದಿಸಲಾಗಿದೆ. ಇಸ್ರೇಲ್ ವಿರುದ್ಧ ಬಳಸುವ ರಾಕೆಟ್‌ಗಳಿಗೆ ಮರುಪೂರಣ ಮಾಡಲು ಮಾರ್ಚ್‌ನಲ್ಲಿ ಚೀನಾದಿಂದ ಇಂಧನವನ್ನು ತರಿಸಿಕೊಳ್ಳಲಾಗಿತ್ತು. ಈ ಇಂಧನ ಸಂಗ್ರಹಗಾರದಲ್ಲಿಯೇ ಸ್ಫೋಟ ಸಂಭವಿಸಿದೆ.

ಸೆಂಥಿಲ್ ಬಾಲಾಜಿ, ಪೊನ್ಮುಡಿ ರಾಜೀನಾಮೆ

ಚೆನ್ನೈ (ಪಿಟಿಐ): ಸಚಿವರಾದ ವಿ.ಸೆಂಥಿಲ್ ಬಾಲಾಜಿ ಮತ್ತು ಕೆ. ಪೊನ್ಮುಡಿ ಅವರು ಎಂ.ಕೆ ಸ್ಟಾಲಿನ್ ನೇತೃತ್ವದ ಸಂಪುಟಕ್ಕೆ ರಾಜೀನಾಮೆ ನೀಡಿದ್ದಾರೆ.

ಸಚಿವರ ರಾಜೀನಾಮೆ ಅಂಗೀಕರಿಸುವಂತೆ ಮುಖ್ಯಮಂತ್ರಿ ಸ್ಟಾಲಿನ್ ಮಾಡಿ ರುವ ಶಿಫಾರಸನ್ನು ರಾಜ್ಯಪಾಲ ಆರ್.ಎನ್.ರವಿ ಅನುಮೋದಿಸಿದ್ದಾರೆ ಎಂದು ರಾಜಭವನ ತಿಳಿಸಿದೆ.

ಪದ್ಮನಾಭಪುರಂ ಶಾಸಕ ಟಿ. ಮನೋ ತಂಗರಾಜ್ ಅವರು ಸಂಪುಟಕ್ಕೆ ಹೊಸದಾಗಿ ಸೇರ್ಪಡೆಯಾಗಿದ್ದು, ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಬಾಲಾಜಿ ಅವರು 'ಉದ್ಯೋಗಕ್ಕೆ ಹಣ' ಹಗರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆ ಎದುರಿಸುತ್ತಿದ್ದಾರೆ. ಸಚಿವ ಸ್ಥಾನದಿಂದ ಕೆಳಗಿಳಿಯದೆ ಇದ್ದರೆ ಜಾಮೀನು ರದ್ದು ಮಾಡುವುದಾಗಿ ಈಚೆಗೆ ಸುಪ್ರೀಂ ಕೋರ್ಟ್ ಅವರಿಗೆ ಎಚ್ಚರಿಸಿತ್ತು.

ಪೊನ್ಮುಡಿ ಅವರು ಶೈವ–ವೈಷ್ಣವ ಸಮುದಾಯ, ಮಹಿಳೆಯರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದರು.

ಗಡಿಯಲ್ಲಿ ಉದ್ವಿಗ್ನ ಸ್ಥಿತಿ ಉಲ್ಬಣ

ಒಂದನೇ ಪುಟದಿಂದ...

ಸ್ಥಳೀಯ ಉಗ್ರ ಆದಿಲ್ ಹುಸೇನ್ ಠೋಕರ್ ಮತ್ತು ಪಾಕಿಸ್ತಾನದ ಪ್ರಜೆಗಳಾಗಿರುವ ಅಲಿ ಭಾಯಿ ಅಲಿಯಾಸ್ ತಲ್ಹಾ ಭಾಯಿ ಹಾಗೂ ಹಾಶಿಮ್ ಮೂಸಾ ಅಲಿಯಾಸ್ ಸುಲೇಮಾನ್ ಈ ದಾಳಿ ನಡೆಸಿದ್ದಾರೆ ಎನ್ನಲಾಗಿದೆ.

ಭದ್ರತಾ ಪಡೆಗಳು ಕಳೆದ ಕೆಲ ದಿನಗಳಲ್ಲಿ ಆದಿಲ್ ಠೋಕರ್ ಸೇರಿದಂತೆ ಹಲವು ಉಗ್ರರ ಮನೆಗಳನ್ನು ಧ್ವಂಸಗೊಳಿಸಿವೆ. ಉಗ್ರರಿಗೆ ಸಹಕಾರ ನೀಡಿದ ಆರೋಪದಲ್ಲಿ ನೂರಕ್ಕೂ ಅಧಿಕ ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿವೆ. ಲಷ್ಕರ್–ಎ–ತಯಬಾ, ಜೈಷ್–ಎ–ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದೀನ್ ಸಂಘಟನೆಗಳಿಗೆ ಸೇರಿದ 14 ಉಗ್ರರ ಪಟ್ಟಿಯನ್ನು ಸಿದ್ಧಪಡಿಸಿದ್ದು, ಅವರ ವಿರುದ್ಧವೂ ಕಾರ್ಯಾಚರಣೆಗೆ ಮುಂದಾಗಿವೆ.

ಈ ಎಲ್ಲ ಬೆಳವಣಿಗೆಗಳ ಮಧ್ಯೆ, ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಉದ್ದಕ್ಕೂ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಪಾಕಿಸ್ತಾನ ಸೇನೆಯು 2021ರ ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿ ಕಳೆದ ಐದು ದಿನಗಳಲ್ಲಿ ಹಲವು ಸಲ ಗುಂಡಿನ ದಾಳಿ ನಡೆಸಿದ್ದು, ಭಾರತ ತಕ್ಕ ಪ್ರತ್ಯುತ್ತರ ನೀಡಿದೆ. ಎಲ್‌ಒಸಿಯುದ್ದಕ್ಕೂ ನಡೆಯುತ್ತಿರುವ ನಿರಂತರ ಗುಂಡಿನ ದಾಳಿ, ದೊಡ್ಡ ಪ್ರಮಾಣದ ಸಂಘರ್ಷಕ್ಕೆ ಹಾದಿಯೊದಗಿಸುವ ಆತಂಕವನ್ನು ಹುಟ್ಟುಹಾಕಿದೆ.

ಭೂಗತ ಬಂಕರ್‌ಗಳನ್ನು ಸಜ್ಜಾಗಿರಿಸುವಂತೆ ಮತ್ತು ಬೆಳೆ ಕೊಯ್ಲು ಕೆಲಸವನ್ನು ತ್ವರಿತಗೊಳಿಸುವಂತೆ ಎಲ್‌ಒಸಿ ಬಳಿಯ ಗ್ರಾಮಗಳ ನಿವಾಸಿಗಳಿಗೆ ಭದ್ರತಾ ಪಡೆಗಳು ಸೂಚಿಸಿವೆ.

'ಮುಂದೆ ಏನಾಗಲಿದೆ ಎಂಬುದು ಯಾರಿಗೂ ತಿಳಿದಿಲ್ಲ. ಶೆಲ್ ದಾಳಿ ಪ್ರಾರಂಭವಾದರೆ ಜೀವ ಉಳಿಸಿಕೊಳ್ಳಲು ನಾವು ಬಂಕರ್‌ಗಳನ್ನು ಸ್ವಚ್ಛಗೊಳಿಸುತ್ತಿದ್ದೇವೆ' ಎಂದು ಬಾರಾಮುಲ್ಲಾ ನಿವಾಸಿ ರಂಜಾನ್ ಚೆಚಿ ಹೇಳಿದರು.

ಭದ್ರತಾ ಪಡೆಗಳು ಕಾರ್ಯಾಚರಣೆ ತೀವ್ರಗೊಳಿಸಿರುವಂತೆಯೇ, ಕಣಿವೆಯಾದ್ಯಂತ ಆತಂಕವೂ ಹೆಚ್ಚುತ್ತಿದೆ. ಮತ್ತೊಂದೆಡೆ ಪ್ರವಾಸಿಗರ ಸಂಖ್ಯೆ, ಹಠಾತ್ ಆಗಿ ಕುಸಿದಿದೆ.

ತನಿಖೆ ಆರಂಭಿಸಿದ ಎನ್‌ಐಎ

ಒಂದನೇ ಪುಟದಿಂದ...

ಐಜಿ, ಡಿಐಜಿ ಮತ್ತು ಎಸ್‌ಪಿ ಸೇರಿದಂತೆ ಎನ್‌ಐಎ ಹಿರಿಯ ಅಧಿಕಾರಿಗಳು ತನಿಖೆಯ ಮೇಲ್ವಿಚಾರಣೆಯನ್ನು ವಹಿಸಿಕೊಂಡಿದ್ದಾರೆ. ಈಗಾಗಲೇ ಹಲವು ಪ್ರತ್ಯಕ್ಷದರ್ಶಿಗಳನ್ನು ಪ್ರಶ್ನಿಸಿ ಮಾಹಿತಿ ಕಲೆಹಾಕಿದ್ದಾರೆ. ಎನ್‌ಐಎ ಅಧಿಕಾರಿಗಳ ಜತೆಯಲ್ಲೇ ವಿಧಿವಿಜ್ಞಾನ ತಜ್ಞರು ಮತ್ತು ತಾಂತ್ರಿಕ ತಜ್ಞರು ಭೌತಿಕ ಹಾಗೂ ವೈಜ್ಞಾನಿಕ ಸಾಕ್ಷ್ಯಗಳನ್ನು ಕಲೆಹಾಕಲು ಶ್ರಮಿಸುತ್ತಿದ್ದಾರೆ.

ದಾಳಿಕೋರರು ಪ್ರವಾಸಿ ತಾಣಕ್ಕೆ ಹೇಗೆ ನುಸುಳಿದರು ಮತ್ತು ಹತ್ಯಾಕಾಂಡ ನಡೆಸಿದ ಬಳಿಕ ಪಲಾಯನ ಮಾಡಲು ಹೇಗೆ ಯಶಸ್ವಿಯಾದರು ಎಂಬುದನ್ನು ಪತ್ತೆಹಚ್ಚುವ ನಿಟ್ಟಿನಲ್ಲಿ ಈ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ಹಾದಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಹಲ್ಗಾಮ್ ಉಗ್ರರ ದಾಳಿ ಕುರಿತು ಅಂತರರಾಷ್ಟ್ರೀಯ ತನಿಖೆಗೆ ಪಾಕ್ ಒತ್ತಾಯ

'ತನಿಖಾ ತಂಡದಲ್ಲಿ ರಷ್ಯಾ, ಚೀನಾ ಇರಲಿ'

ಮಾಸ್ಕೊ (ಪಿಟಿಐ): ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಕುರಿತು ತನಿಖೆ ನಡೆಸುವ ತಂಡದಲ್ಲಿ ರಷ್ಯಾ ಹಾಗೂ ಚೀನಾ ಪ್ರತಿನಿಧಿಗಳೂ ಇರಲಿ ಎಂದು ಪಾಕಿಸ್ತಾನ ಹೇಳಿದೆ.



ಖ್ವಾಜಾ ಆಸಿಫ್

ರಷ್ಯಾ ಸರ್ಕಾರ ಒಡೆತನದ ಆರ್‌ಐಎ ನೊವೊಸ್ತಿ ಸುದ್ದಿಸಂಸ್ಥೆಗೆ ಇತ್ತೀಚೆಗೆ ಸಂದರ್ಶನ ನೀಡಿರುವ ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್,'ಪ್ರಧಾನಿ ಶೆಹಬಾಜ್ ಶರೀಫ್ ಅವರು, ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಕುರಿತಂತೆ ಅಂತರ ರಾಷ್ಟ್ರೀಯ ತನಿಖೆ ನಡೆಯಬೇಕು ಎಂಬ ಪ್ರಸ್ತಾವ ಮುಂದಿಟ್ಟಿದ್ದಾರೆ' ಎಂದು ಹೇಳಿದ್ದಾರೆ.

'ಉಗ್ರರ ದಾಳಿಯಿಂದಾಗಿ ಉದ್ಭವಿಸಿರುವ ಈ ಬಿಕ್ಕಟ್ಟಿನಲ್ಲಿ ರಷ್ಯಾ ಅಥವಾ ಚೀನಾ ಜೊತೆಗೆ ಪಶ್ಚಿಮ ರಾಷ್ಟ್ರಗಳು ಕೂಡ ಬಹಳ ಸಕಾರಾತ್ಮಕ ಪಾತ್ರ ವಹಿಸಬಹುದಾಗಿದೆ' ಎಂದೂ ಹೇಳಿದ್ದಾರೆ.

'ಭಾರತ ಸುಳ್ಳು ಹೇಳುತ್ತಿದೆಯೇ? ಪ್ರಧಾನಿ ಮೋದಿ ಸುಳ್ಳು ಹೇಳುತ್ತಿದ್ದಾರೆಯೇ ಅಥವಾ ಅವರು ಹೇಳುವುದು ಸತ್ಯವೇ ಎಂಬ ಕುರಿತು ತನಿಖೆ ನಡೆಸಲು ರಷ್ಯಾ ಅಥವಾ ಚೀನಾ ತನಿಖಾ ತಂಡವೊಂದನ್ನು ರಚಿಸಲಿ. ಈ ಅಂತರ ರಾಷ್ಟ್ರೀಯ ತಂಡ ಸತ್ಯ ಬಯಲಿಗೆಳೆಯಲಿ' ಎಂದೂ ಆಸಿಫ್ ಹೇಳಿದ್ದಾರೆ.

'ಘಟನೆ ಕುರಿತಂತೆ ಕೇವಲ ಮಾತನಾಡುವುದು ಅಥವಾ ಹೇಳಿಕೆಗಳನ್ನು ನೀಡುವುದರಿಂದ ಏನೂ ಉಪಯೋಗವಿಲ್ಲ. ಪಾಕಿಸ್ತಾನವೇ ದಾಳಿ ನಡೆಸಿದೆ ಅಥವಾ ದಾಳಿ ನಡೆಸಿದವರಿಗೆ ಪಾಕಿಸ್ತಾನದ ಬೆಂಬಲ ಇತ್ತು ಎಂಬ ಬಗ್ಗೆ ಸಾಕ್ಷ್ಯಗಳು ಇರಬೇಕು' ಎಂದಿದ್ದಾರೆ.


'ಪಾಕ್‌ನಿಂದ ಭಯೋತ್ಪಾದನೆ ಸಮರ್ಥಿಸುವ ಹೇಳಿಕೆ'

'ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಸಂಬಂಧಿಸಿ ಭಾರತದ ಆರೋಪಗಳನ್ನು ಪಾಕಿಸ್ತಾನ ತಳ್ಳಿ ಹಾಕಿದ್ದು, ಇದು ನಿರೀಕ್ಷಿತ ಪ್ರತಿಕ್ರಿಯೆ. ಅಚ್ಚರಿಯೆಂಬಂತೆ, ಭಯೋತ್ಪಾದನೆಯನ್ನು ಸಮರ್ಥನೆ ಮಾಡುವಂತಹ ಹೇಳಿಕೆಗಳನ್ನು ಉನ್ನತ ಸ್ಥಾನದಲ್ಲಿರುವ ಇಬ್ಬರು ಪಾಕಿಸ್ತಾನಿಯರು ನೀಡಿದ್ದಾರೆ' ಎಂದು ಮಾಸ್ಕೊ ಮೂಲದ ಅಮೆರಿಕದ ಸ್ವತಂತ್ರ ವಿಶ್ಲೇಷಕ ಆ್ಯಂಡ್ರ್ಯೂ ಕೊರಿಬ್ಕೊ ಹೇಳಿದ್ದಾರೆ.

'ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ದಾಳಿ ನಡೆಸಿರುವವರು ಬಹುಶಃ ಸ್ವಾತಂತ್ರ್ಯ ಹೋರಾಟಗಾರರು ಇದ್ದಿರಬೇಕು ಎಂದು ಪಾಕಿಸ್ತಾನದ ಉಪಪ್ರಧಾನಿ ಹಾಗೂ ವಿದೇಶಾಂಗ ಸಚಿವರೂ ಆಗಿರುವ ಇಶಾಕ್ ದರ್ ಹೇಳಿದ್ದಾರೆ. ಪ್ರವಾಸಿಗರನ್ನು ಹತ್ಯೆ ಮಾಡಿದವರು 'ಸ್ವಾತಂತ್ರ್ಯ ಹೋರಾಟಗಾರರು ಇದ್ದಿರಬಹುದು' ಎಂಬ ಹೇಳಿಕೆಯು ವಿಶ್ವದೆಲ್ಲೆಡೆ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿರುವವರ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿದಂತಾಗಿದೆ' ಎಂದು ಆ್ಯಂಡ್ರ್ಯೂ ಹೇಳಿದ್ದಾರೆ.

'ಕಾಶ್ಮೀರ ಬಿಕ್ಕಟ್ಟಿನ ಕುರಿತು ಒಬ್ಬರ ಅಭಿಪ್ರಾಯ ಏನೇ ಇದ್ದಿರಬಹುದು. ಆದರೆ, ಪ್ರವಾಸಿಗರ ಹತ್ಯೆಯು, ಅದರಲ್ಲೂ ಧರ್ಮದ ಆಧಾರದಲ್ಲಿ ಮಾಡಿರುವುದು ಭಯೋತ್ಪಾದಕ ಕೃತ್ಯವೇ ಸರಿ' ಎಂದು ಹೇಳಿದ್ದಾರೆ.

'ಪಹಲ್ಗಾಮ್‌ನಲ್ಲಿ ನಡೆದ ದಾಳಿಯು ಮತ್ತೊಬ್ಬರ ಮೇಲೆ ಗೂಬೆ ಕೂರಿಸುವ ಉದ್ದೇಶದ ಭಾಗವಾಗಿರಬಹುದು ಎಂದು ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅವರು ಅಲ್ ಜಝೀರಾ ಮಾಧ್ಯಮ ಸಂಸ್ಥೆಗೆ ನೀಡಿರುವ ಸಂದರ್ಭದಲ್ಲಿ ಹೇಳಿದ್ದಾರೆ. ಈ ಇಬ್ಬರ ಹೇಳಿಕೆಗಳು ಪಾಕಿಸ್ತಾನದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸುವಂತಿವೆ' ಎಂದು ಆ್ಯಂಡ್ರ್ಯೂ ವಿಶ್ಲೇಷಿಸಿದ್ದಾರೆ.



ಸಮಂತಾ 'ಶುಭಂ' ಟ್ರೇಲರ್

ಸಮಂತಾ ರುತ್ ಪ್ರಭು ನಿರ್ಮಿಸಿ, ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿರುವ ತೆಲುಗು ಚಿತ್ರ 'ಶುಭಂ' ಟ್ರೇಲರ್ ಬಿಡುಗಡೆಗೊಂಡಿದೆ. ರಾತ್ರಿ 9 ಗಂಟೆಗೆ ಧಾರಾವಾಹಿ ನೋಡುವ ಹೆಂಗಸರೆಲ್ಲ ದೆವ್ವ ಆಗಿ ಗಂಡಸರಿಗೆ ಭಯ ಹುಟ್ಟಿಸುವ ವಿಭಿನ್ನ ಕಥೆಯನ್ನು ಹೊಂದಿರುವ ಚಿತ್ರ ಮೇ 9ಕ್ಕೆ ತೆರೆಗೆ ಬರಲಿದೆ.

'ದುನಿಯಾ', 'ಜಾಕಿ' ಸೇರಿದಂತೆ ಸಾಕಷ್ಟು ಸೂಪರ್ ಹಿಟ್ ಚಿತ್ರಗಳ ಹಿಂದೆ ಸತ್ಯ ಹೆಗಡೆ ಕ್ಯಾಮೆರಾ ಕೈಚಳಕವಿದೆ. ಚಿತ್ರರಂಗದಲ್ಲಿ ಮೂರು ದಶಕಗಳನ್ನು ಪೂರೈಸಿರುವ ಅವರು ತಂತ್ರಜ್ಞಾನದ ಅಪ್‌ಡೇಟ್, ಫ್ರೇಮ್‌ಗಳು, ಕಥೆ ಮೊದಲಾದ ಸಂಗತಿಗಳ ಕುರಿತು ಮಾತನಾಡಿದ್ದಾರೆ...



ತಂತ್ರಜ್ಞಾನ ಪರಿಣಾಮಕಾರಿಯಾಗಿ ಬಳಸಿ

ವಿನಾಯಕ ಕೆ.ಎಸ್

'**ಇವತ್ತು** ಮಾತು ಎತ್ತಿದರೆ ತಾಂತ್ರಿಕವಾಗಿ ಅಪ್‌ಡೇಟ್ ಆಗಬೇಕು ಎನ್ನುತ್ತಾರೆ. ಒಂದು ಕಾಲದಲ್ಲಿ ಅಮೆರಿಕದಲ್ಲಿ ಬಳಸುತ್ತಿದ್ದ ಕ್ಯಾಮೆರಾ ಅಥವಾ ಚಿತ್ರೀಕರಣ ಉಪಕರಣ ಬೆಂಗಳೂರಿನಲ್ಲಿ ಸಿಗಲು ಹತ್ತು ವರ್ಷಗಳು ಬೇಕಿತ್ತು. ಈಗ ಹಾಗಲ್ಲ ನಿನ್ನೆ ಅಲ್ಲಿ ಬಿಡುಗಡೆಯಾಗಿರುವುದು ಇವತ್ತು ಬೆಂಗಳೂರಿನ ಮಾರುಕಟ್ಟೆಯಲ್ಲಿಯೂ ಸಿಗುತ್ತದೆ. ಅದನ್ನು ಏಕೆ ಮತ್ತು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯ. ಬೈಕ್ ಚಿಕ್ಕದಾಗಿರಬಹುದು ಅಥವಾ ದೊಡ್ಡದಾಗಿರಬಹುದು. ಅದನ್ನು ಹೇಗೆ ಓಡಿಸಿಕೊಂಡು ಹೋಗಿ ಗುರಿ ತಲುಪುತ್ತೇವೆ ಎಂಬುದೇ ಮುಖ್ಯ' ಎಂದು ಮಾತು ಪ್ರಾರಂಭಿಸಿದರು ಸತ್ಯ ಹೆಗಡೆ.

'ಮನಸಾರೆ', 'ಮೈನಾ', 'ಜಂಗ್ಲಿ' ಮೊದಲಾದ ಚಿತ್ರಗಳಲ್ಲಿ ಇವರು ಕಟ್ಟಿಕೊಟ್ಟ ಫ್ರೇಮ್‌ಗಳನ್ನು ನೋಡುವುದೇ ಚೆಂದ. ಈತನಕ ಸುಮಾರು 40 ಚಿತ್ರಗಳಿಗೆ ಛಾಯಾಚಿತ್ರಗ್ರಾಹಕನಾಗಿ ಕೆಲಸ ಮಾಡಿರುವ ಇವರು ಸದ್ಯ ಅರ್ಜುನ್ ಜನ್ಯ ನಿರ್ದೇಶನದ '45' ಹಾಗೂ ಯುವ ರಾಜ್‌ಕುಮಾರ್ 'ಎಕ್ಕ' ಚಿತ್ರಗಳ ಕ್ಯಾಮೆರಾ ಹಿಂದೆ ನಿಂತಿದ್ದಾರೆ.

'ನಿರ್ದೇಶಕನ ಕಥೆಯನ್ನು ಸಿನಿಮೀಯವಾಗಿ ಹೇಳುವ ಸಾಧನ ಛಾಯಾಚಿತ್ರಗ್ರಹಣ. ಅದನ್ನು ನಿರ್ದೇಶಕನ ಆಲೋಚನೆಯ ಚೌಕಟ್ಟಿನಲ್ಲಿ ಎಷ್ಟು ಚೆಂದವಾಗಿ ಹೇಳುತ್ತೇವೆ ಎನ್ನುವುದು ಮುಖ್ಯ. ಚಿತ್ರ ಪ್ರಾರಂಭವಾಗಿ ಐದು ನಿಮಿಷದೊಳಗೆ ಪ್ರೇಕ್ಷಕ ಕ್ಯಾಮೆರಾ, ಲೆನ್ಸ್, ಲೈಟ್ ಎಲ್ಲ ಮರೆತು ಕಥೆಯೊಳಗೆ ಇಳಿದುಬಿಡಬೇಕು. ಹಾಗೇ ಚಿತ್ರದ ಫ್ರೇಮ್‌ಗಳನ್ನು ಕಟ್ಟಿಕೊಟ್ಟರೆ ಛಾಯಾಚಿತ್ರಗ್ರಾಹಕ ಗೆದ್ದಂತೆ. ಅದನ್ನು ಸುಲಭವಾಗಿಸುವ ತಂತ್ರಜ್ಞಾನ ಮತ್ತು ಪರಿಕರಗಳನ್ನು ಬಳಸಿಕೊಳ್ಳಬೇಕು' ಎನ್ನುತ್ತಾರೆ ಅವರು.

'ಇವತ್ತು ಡಿಜಿಟಲ್ ಯುಗ. ಪ್ರತಿ ದಿನ ತಂತ್ರಜ್ಞಾನ ಅಪ್‌ಡೇಟ್ ಆಗುತ್ತಲೇ ಇರುತ್ತದೆ. ನಮಗೆ ಏನು ಬೇಕು ಎಂಬ ಸ್ಪಷ್ಟತೆ ಬೇಕು. ಛಾಯಾಚಿತ್ರಗ್ರಾಹಕ ಮೊದಲು ನಿರ್ದೇಶಕನ ಆಲೋಚನೆ ಅರ್ಥ ಮಾಡಿಕೊಳ್ಳಬೇಕು. ಸಿನಿಮಾದ ಬಜೆಟ್ ಏನು ಎಂಬುದನ್ನು ನೋಡಿಕೊಳ್ಳಬೇಕು. ಅದಕ್ಕೆ ತಕ್ಕಂತೆ ಪ್ಲಾನಿಂಗ್ ಬಹಳ ಮುಖ್ಯ. ಎಷ್ಟು ಪ್ಲಾನ್ ಮಾಡಿ, ತಂಡದೊಂದಿಗೆ ಚರ್ಚೆ ಮಾಡುತ್ತೇವೋ ಅಷ್ಟು ಉತ್ತಮ. ಆಗ ಕಡಿಮೆ ಖರ್ಚಿನಲ್ಲಿ ಉತ್ತಮ ಔಟ್‌ಪುಟ್ ಸಿಗುತ್ತದೆ' ಎಂದು ಅವರು ಅಭಿಪ್ರಾಯಪಡುತ್ತಾರೆ.

'ಸಿಕ್ಕ ಸಿನಿಮಾದಲ್ಲಿ ಛಾಯಾಚಿತ್ರಗ್ರಹಣವನ್ನು ಎಷ್ಟು ಸಿನಿಮೀಯವಾಗಿಸಬಹುದೆಂದು ಆಲೋಚಿಸಬೇಕು. ಈ ಚಿತ್ರ ಮುಗಿಸಿ, ಮತ್ತೊಂದು ಚಿತ್ರದಲ್ಲಿ ನೋಡಿಕೊಳ್ಳೋಣ ಎಂಬ ಭಾವನೆ ಇರಬಾರದು. ಇಂದಿನ ಹುಡುಗರಲ್ಲಿ ಆ ತಾಳ್ಮೆ ಕಡಿಮೆಯಾಗುತ್ತಿದೆ. ಸಿನಿಮಾ ಪೂರ್ಣಗೊಂಡ ನಂತರ ನಾಲ್ಕು ಜನಕ್ಕೆ ತೋರಿಸಿ ಅಭಿಪ್ರಾಯ ಪಡೆಯುವುದಕ್ಕಿಂತ ಸ್ಕ್ರಿಪ್ಟ್ ಹಂತದಲ್ಲಿಯೇ ಆ ಕೆಲಸ ಮಾಡಬೇಕು. ಚಿತ್ರೀಕರಣ ಬೇಕಾದರೆ ಎರಡು ವರ್ಷ ತಡವಾಗಲಿ. ಆದರೆ ಶುರುವಾಗುವ ಮೊದಲು ಸೂಕ್ತ ಪ್ಲಾನಿಂಗ್ ಇರಲಿ. ಪ್ರಾರಂಭವಾದ ಬಳಿಕ ಎಲ್ಲವನ್ನೂ ಬದಲಿಸಿಕೊಂಡು ಎರಡು ವರ್ಷಗಟ್ಟಲೇ ಎಳೆದರೆ ನಿರ್ಮಾಪಕನ ನಷ್ಟದ ಹೊರತಾಗಿ ಬೇರೆ ಏನೂ ಲಾಭವಿಲ್ಲ' ಎಂದು ಅವರು ಮಾತಿಗೆ ವಿರಾಮವಿತ್ತರು.



ಸತ್ಯ ಹೆಗಡೆ

ಸಿದ್ಧಾರ್ಥ್‌ಗೆ ಜೋಡಿಯಾಗ್ತಾರಾ ಶ್ರೀಲೀಲಾ?



ಶ್ರೀಲೀಲಾ

ಕನ್ನಡದ 'ಕಿಸ್' ಸಿನಿಮಾ ಮೂಲಕ ಜನಪ್ರಿಯತೆ ಪಡೆದ ನಟಿ ಶ್ರೀಲೀಲಾ ಸದ್ಯ ಟಾಲಿವುಡ್‌ನಲ್ಲಿ ಬಹು ಬೇಡಿಕೆಯ ನಟಿ. 'ಆಶಿಕಿ–3' ಚಿತ್ರದಲ್ಲಿ ಕಾರ್ತಿಕ್ ಆರ್ಯನ್‌ಗೆ ನಾಯಕಿಯಾಗಿರುವ ಇವರು ಬಾಲಿವುಡ್‌ನಲ್ಲಿ ಅವಕಾಶ ಪಡೆದಿದ್ದಾರೆ. ಇದೀಗ ಲವರ್ ಬಾಯ್ ಸಿದ್ಧಾರ್ಥ್ ಮಲ್ಹೋತ್ರಾ ಜತೆ ನಾಯಕಿಯಾಗಿ ಶ್ರೀಲೀಲಾ ನಟಿಸುತ್ತಿದ್ದಾರೆ ಎಂಬ ಸುದ್ದಿ ಹರಿದಾಡಿದೆ.

ಈ ಹಿಂದೆ 'ಡ್ರೀಮ್ ಗರ್ಲ್' ಎಂಬ ಸಿನಿಮಾ ನಿರ್ದೇಶನದ ಮಾಡಿದ್ದ ರಾಜ್ ಶಾಂಡಿಲ್ಯ ಅವರು ಸಿದ್ಧಾರ್ಥ್ ಮಲ್ಹೋತ್ರಾಗೆ ಆ್ಯಕ್ಷನ್ ಕಟ್ ಹೇಳಲು ಮುಂದಾಗಿದ್ದಾರೆ. ಕಮರ್ಷಿಯಲ್ ಕಥೆಯನ್ನು ಹೊಂದಿರುವ ಈ ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದು, ಈ ಸಂಬಂಧ ಶ್ರೀಲೀಲಾ ಜತೆ ಚಿತ್ರತಂಡ ಮಾತುಕತೆ ನಡೆಸಿದೆ ಎಂದು ಹಿಂದಿ ಮಾಧ್ಯಮಗಳು ವರದಿ ಮಾಡಿವೆ.

ಮಹಾವೀರ್ ಜೈನ್ ಫಿಲ್ಮ್ಸ್ ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಈ ವರ್ಷ ಸೆಪ್ಟೆಂಬರ್‌ನಿಂದ ಚಿತ್ರೀಕರಣ ಪ್ರಾರಂಭವಾಗುವ ನಿರೀಕ್ಷೆಯಿದೆ. 'ಲೈಗರ್' ನಟಿ ಅನನ್ಯಾ ಪಾಂಡೆ ಜತೆ ಕೂಡ ತಂಡ ಮಾತುಕತೆ ನಡೆಸಿದೆ ಎನ್ನಲಾಗಿದೆ. ಪಾಂಡೆ ಇತ್ತೀಚೆಗೆ ತೆರೆಕಂಡ ಅಕ್ಷಯ್ ಕುಮಾರ್ ನಟನೆಯ 'ಕೇಸರಿ–2'ನಲ್ಲಿ ಕಾಣಿಸಿಕೊಂಡಿದ್ದರು.

ಶ್ರೀಲೀಲಾ ಸುಧಾ ಕೊಂಗರ ಅವರ ತಮಿಳು ಚಿತ್ರ 'ಪರಶಕ್ತಿ'ಯಲ್ಲಿಯೂ ಕಾಣಿಸಿಕೊಂಡಿದ್ದಾರೆ. 'ಪುಷ್ಪ–2' ಚಿತ್ರದಲ್ಲಿ ನಟಿಸಿದ್ದು ಮಾರುಕಟ್ಟೆಯಲ್ಲಿ ಇವರ ಬೇಡಿಕೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಮೇ 23ಕ್ಕೆ 'ಕುಲದಲ್ಲಿ ಕೀಳ್ಯಾವುದೋ' ತೆರೆಗೆ



ಮೌನ ಗುಡ್ಡೆಮನೆ

'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಮಡೆನೂರ್ ಮನು ನಾಯಕನಾಗಿ ನಟಿಸಿರುವ 'ಕುಲದಲ್ಲಿ ಕೀಳ್ಯಾವುದೋ' ಚಿತ್ರದ ಶೀರ್ಷಿಕೆ ಗೀತೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೆ.ರಾಮನಾರಾಯಣ್ ನಿರ್ದೇಶನದ ಚಿತ್ರ ಮೇ 23ಕ್ಕೆ ತೆರೆ ಕಾಣಲಿದೆ.

ಮನೋಮೂರ್ತಿ ಸಂಗೀತ ಸಂಯೋಜಿಸಿದ್ದು, ಚೇತನ್ ಹಾಡಿದ್ದಾರೆ. 'ಈ ಗೀತೆಯಲ್ಲಿ ಯೋಗರಾಜ್ ಭಟ್ ಅಭಿನಯಿಸಿದ್ದಾರೆ. ಅವರೇ ಈ ಗೀತೆಗೆ ಸಾಹಿತ್ಯ ಬರೆಯಬೇಕಾಗಿತ್ತು. ಕಾರಣಾಂತರಗಳಿಂದ ನಾನು ಬರೆಯುವಂತೆ ಆಯಿತು. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಎರಡು ಹಾಡುಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿವೆ' ಎಂದರು ನಿರ್ದೇಶಕರು.

ಯೋಗರಾಜ್ ಸಿನಿಮಾಸ್ ಅರ್ಪಿಸುತ್ತಿರುವ ಈ ಚಿತ್ರಕ್ಕೆ ಪರ್ಲ್ ಸಿನಿ ಕ್ರಿಯೇಷನ್ಸ್ ಬಂಡವಾಳ ಹೂಡಿದೆ. ಮೌನ ಗುಡ್ಡೆಮನೆ ಚಿತ್ರದ ನಾಯಕಿ. ಯೋಗರಾಜ್ ಭಟ್ ಹಾಗೂ ಇಸ್ಲಾಮುದ್ದೀನ್ ಅವರು ಈ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಶರತ್ ಲೋಹಿತಾಶ್ವ, ತಬಲನಾಣಿ, ಸೋನಾಲ್ ಮೊಂತೆರೊ, ಕರಿಸುಬ್ಬು, ಡ್ರ್ಯಾಗನ್ ಮಂಜು, ಸೀನ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಅಟ್ಟಾರಿ–ವಾಘಾ ಗಡಿಯಲ್ಲಿ ಪಾಕ್‌ಗೆ ವಾಪಸ್ ಆಗಲು ಸರತಿಯಲ್ಲಿ ನಿಂತಿದ್ದ ನೂರಾರು ಜನರ ಕತೆ–ವ್ಯಥೆ

'ಇನ್ನೆಂದು ತಾಯಿ ಮುಖ ನೋಡುವೆನೋ'

ಚಂಡೀಗಢ (ಪಿಟಿಐ): 'ನನ್ನ ತಾಯಿ ಭಾರತದವಳು. ಆಕೆ ಬಳಿ ಭಾರತ ಪಾಸ್‌ಪೋರ್ಟ್ ಇರುವುದರಿಂದ ನಮ್ಮ ಜೊತೆ ಪಾಕಿಸ್ತಾನಕ್ಕೆ ಬರುವುದಕ್ಕೆ ಆಕೆಗೆ ಅಧಿಕಾರಿಗಳು ಅನುಮತಿ ನೀಡುತ್ತಿಲ್ಲ. ಹೀಗಾದರೆ, ಇನ್ನು ಯಾವಾಗ ನಾನು ನನ್ನ ತಾಯಿ ಮುಖ ನೋಡುತ್ತೇನೋ ಏನೋ' ಎಂದು ಯುವತಿ ಸರಿತಾ ಕಣ್ಣೀರಾದರು.

ಸಾರ್ಕ್ ವೀಸಾ ಸೇರಿದಂತೆ ಒಟ್ಟು 12 ವಿಧಗಳ ವೀಸಾದೊಂದಿಗೆ ಭಾರತ ಪ್ರವೇಶಿಸಿದ್ದವರು ಪಾಕಿಸ್ತಾನಕ್ಕೆ ವಾಪಸಾಗಲು ಭಾನುವಾರ ಕೊನೇ ದಿನವಾಗಿತ್ತು. ತಮ್ಮ ಸಂಬಂಧಿಕರನ್ನು ನೋಡಲು, ಕುಟುಂಬದೊಂದಿಗೆ ಕಾಲ ಕಳೆಯಲು ಕೆಲವರು 30, 40 ವರ್ಷಗಳ ಬಳಿಕ ಭಾರತಕ್ಕೆ ಬಂದಿದ್ದವರೂ ಭಾನುವಾರ ಅಟ್ಟಾರಿ–ವಾಘಾ ಗಡಿಯಲ್ಲಿ ಸರತಿಯಲ್ಲಿ ನಿಂತಿದ್ದರು.

ಸರಿತಾ, ಆಕೆಯ ಸಹೋದರ ಹಾಗೂ ತಂದೆ, ಪಾಕಿಸ್ತಾನದ ಪ್ರಜೆಗಳು. ಸರಿತಾಳ ಪೋಷಕರು 1991ರಲ್ಲಿ ಮದುವೆಯಾಗಿದ್ದರು. ಒಂದೆಡೆ ತಾಯಿ ಪ್ರಿಯಾ ಕನ್ವರ್ ಕಣ್ಣೀರು ಸುರಿಸಿದರೆ, ಮಗಳು ಸರಿತಾ ತಾಯಿಯನ್ನು ಬಿಟ್ಟು ಹೋಗುವುದು ಹೇಗೆ ಎಂದು ಉಮ್ಮಳಿಸುತ್ತಿದ್ದರು. 'ಏ.29ರಂದು ನಮ್ಮ ಹತ್ತಿರ ಸಂಬಂಧಿಕರೊಬ್ಬರ ಮದುವೆಗಾಗಿ ಭಾರತಕ್ಕೆ ಬಂದಿದ್ದೆವು. 9 ವರ್ಷಗಳ ಬಳಿಕ ನಾವು ಇಲ್ಲಿಗೆ ಬಂದಿದ್ದೆವು' ಎಂದರು.

ಸರಿತಾ ಮಾತ್ರವಲ್ಲ ಮೊಹಮ್ಮದ್ ಅಯಾನ್‌ನದ್ದು ಇದೇ ಕತೆ. ಇಂಥ ಹಲವು ಕತೆಗಳು ಸರತಿ ಸಾಲಿನಲ್ಲಿ ಕೇಳಿಬಂದವು. ಇಲ್ಲಿ ಒಬ್ಬೊಬ್ಬರದು ಒಂದೊಂದು ಕತೆ. ಸಹೋದರರನ್ನು ಬಿಟ್ಟು ಬರಲು ಬಂದಿದ್ದ ಸಹೋದರಿಯರು. ಅತ್ತೆ, ಅಜ್ಜಿಯರನ್ನು ಬಿಟ್ಟು ಹೋಗಲು ಬಂದವರೂ ಇದ್ದರು. ಅತ್ತೆ ರಾಕು, ಪುಟ್ಟ ಮಕ್ಕಳು... ಹೀಗೆ ಸೀತಾ ತನ್ನ ಕುಟುಂಬದವರೊಂದಿಗೆ ಪಾಕ್‌ಗೆ ತೆರಳಲು ನಿಂತಿದ್ದರು.

ಮತ್ತೆಂದು ತಮ್ಮ ಕುಟುಂಬದವರನ್ನು ನೋಡುವ ಭಾಗ್ಯ ಸಿಕ್ಕುವುದೋ ಎನ್ನುವ ಬೇಸರದೊಂದಿಗೆ ತಮ್ಮವರನ್ನು ಕೊನೆಯ ಬಾರಿ ನೋಡುವಂತೆ ನೋಡುತ್ತಾ, ಅತ್ತುಕರೆಯುವ ದೃಶ್ಯಗಳು ಅಟ್ಟಾರಿ ಗಡಿಯ ಬಳಿ ಕಂಡುಬಂದವು. ಉಗ್ರರ ದಾಳಿಯನ್ನು ಖಂಡಿಸುತ್ತಲೇ, ತಮ್ಮನ್ನು ವಾಪಾಸು ಕಳುಹಿಸುವ ಕುರಿತು ತೆಗೆದುಕೊಂಡ ನಿರ್ಧಾರದ ಬಗ್ಗೆ ಸರತಿಯಲ್ಲಿ ನಿಂತಿದ್ದವರು ಬೇಸರ ವ್ಯಕ್ತಪಡಿಸಿದರು. 'ಯಾರೋ ಮಾಡಿದ ತಪ್ಪಿಗೆ ನಮಗೆ ಯಾಕೆ ಶಿಕ್ಷೆ' ಎಂದೂ ಪ್ರಶ್ನಿಸಿದರು.

ಭಾರತದಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುವವರಿಗೆ ಪಾಕಿಸ್ತಾನಕ್ಕೆ ಮರಳಲು ಏಪ್ರಿಲ್ 29 ಕೊನೆಯ ದಿನವಾಗಿದೆ.



ತಾಯಿ ಪ್ರಿಯಾ ಕನ್ವರ್ (ಎಡಬದಿ) ಅವರನ್ನು ಭಾರತದಲ್ಲಿಯೇ ಬಿಟ್ಟು ಹೋಗಬೇಕಿರುವ ಬಗ್ಗೆ ಸರಿತಾ ದುಃಖಿಸಿದರು —ಪಿಟಿಐ ಚಿತ್ರ

ಭಾರತ ತೊರೆದ 509 ಪಾಕ್ ಪ್ರಜೆಗಳು

509 ಭಾನುವಾರದ ಅಂತ್ಯದ ವೇಳೆಗೆ ಭಾರತ ತೊರೆದ ಪಾಕಿಸ್ತಾನದ ನಾಗರಿಕರು, ರಾಯಭಾರ ಅಧಿಕಾರಿಗಳು

745 ಪಾಕಿಸ್ತಾನದಿಂದ ವಾಪಸಾದ ಭಾರತದ ನಾಗರಿಕರು, ರಾಯಭಾರ ಅಧಿಕಾರಿಗಳು

6,050 ಮಹಾರಾಷ್ಟ್ರದಲ್ಲಿರುವ ಪಾಕ್ ಪ್ರಜೆಗಳ ಸಂಖ್ಯೆ (107 ಪಾಕ್ ನಾಗರಿಕರನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ)



ಅಮೃತಸರದ ಅಟ್ಟಾರಿ–ವಾಘಾ ಗಡಿಯಲ್ಲಿ ಬಿಎಸ್‌ಎಫ್ ಯೋಧರು ಪಾಕ್ ಪ್ರಜೆಗಳ ಪಾಸ್‌ಪೋರ್ಟ್‌ಗಳನ್ನು ಭಾನುವಾರ ಪರಿಶೀಲಿಸಿದರು —ಪಿಟಿಐ ಚಿತ್ರ

'ಮಾನವೀಯತೆಯನ್ನೇ ಕೊಂದರು'

'ನನ್ನ ಅರ್ಧದಷ್ಟು ಕುಟುಂಬ ಭಾರತದಲ್ಲಿಯೇ ವಾಸವಿದೆ. ಪಹಲ್ಗಾಮ್‌ನಲ್ಲಿ ನಡೆದಿದ್ದು, ಖಂಡನೀಯ. ಭಯೋತ್ಪಾದಕರು ಮಾನವೀಯತೆಯನ್ನೇ ಹತ್ಯೆ ಮಾಡಿದ್ದಾರೆ. ಅವರು ಮಾಡಿದ ತಪ್ಪಿಗೆ ಯಾರು ಅನುಭವಿಸಬೇಕಾಗಿದೆ ನೋಡಿ. ಹಲವಾರು ಪಾಕಿಸ್ತಾನಿಯರು ವೈದ್ಯಕೀಯ ಚಿಕಿತ್ಸೆಗಾಗಿ ಭಾರತದಲ್ಲಿ ಇದ್ದಾರೆ. ಈಗ ಅವರೆಲ್ಲಾ ವಾಪಸು ಓಡಿ ಹೋಗಬೇಕಾಗಿದೆ' ಎನ್ನುತ್ತಾರೆ ಪಾಕಿಸ್ತಾನದ ಗುರುಬಕ್ಷ್ ಸಿಂಗ್.

ತನ್ನ ಸಂಬಂಧಿಕರನ್ನು ಅಟ್ಟಾರಿ ಗಡಿಯಲ್ಲಿ ಬಿಟ್ಟುಹೋಗಲು ಬಂದಿದ್ದ ದೆಹಲಿಯ ಮೊಹಮ್ಮದ್ ಆರಿಫ್ ಮಾತನಾಡಿ, 'ನಾನು ದಾಳಿಯನ್ನು ಬಲವಾಗಿ ಖಂಡಿಸುತ್ತೇನೆ. ಅವರು ಮಾನವೀಯತೆಯನ್ನೇ ಕೊಂದಿದ್ದಾರೆ. ಅವರನ್ನು ಸಾರ್ವಜನಿಕವಾಗಿ ನೇಣಿಗೆ ಹಾಕಬೇಕು' ಎಂದರು.

70ರ ವೃದ್ಧ ಪೇಶಾವರದ ಜನಮ್ ರಾಜ್ ಅವರು ಇದೇ ಮೊದಲ ಬಾರಿಗೆ ಭಾರತಕ್ಕೆ ಬಂದಿದ್ದರು. 'ಇಲ್ಲಿ ನನ್ನ ಸಂಬಂಧಿಕರಿದ್ದಾರೆ. ಮೂರು ವಾರಗಳ ಹಿಂದಷ್ಟೇ ಬಂದಿದ್ದೆ. ಈಗ ನೋಡಿ ಏನಾಗಿದೆ' ಎಂದು ಬೇಸರಿಸಿದರು.

ಭಾರತ ತೊರೆಯದಿದ್ದರೆ 3 ವರ್ಷ ಜೈಲು

- ಸರ್ಕಾರ ನೀಡಿರುವ ಕಾಲಾವಕಾಶದ ಒಳಗೆ ಭಾರತವನ್ನು ತೊರೆಯದಿದ್ದಲ್ಲಿ 'ವಲಸೆ ಮತ್ತು ವಿದೇಶಿಗರ ಕಾಯ್ದೆ 2025'ರ ಅನ್ವಯ ಕ್ರಮ ಕೈಗೊಳ್ಳಲಾಗುವುದು. ಕಾಯ್ದೆಯಲ್ಲಿ ಹೇಳಿರುವಂತೆ ಭಾರತ ತೊರೆಯದವರಿಗೆ ಮೂರು ವರ್ಷ ಜೈಲು, ₹3 ಲಕ್ಷದವರೆಗೆ ದಂಡ ವಿಧಿಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ
- ದೇಶ ಬಿಟ್ಟು ಹೊರನಡೆಯುವಂತೆ ನವದೆಹಲಿಯ ಪಾಕಿಸ್ತಾನ ಹೈಕಮಿಷನ್ ಕಚೇರಿಯಲ್ಲಿರುವ ಮೂವರು ಸೇನಾ ಸಲಹೆಗಾರರಿಗೆ ಭಾರತ ಒಂದು ವಾರ ಕಾಲಾವಕಾಶ ನೀಡಿದೆ. ಈ ಸಲಹೆಗಾರರ ಸಿಬ್ಬಂದಿಗೂ ದೇಶಬಿಡಲು ಹೇಳಲಾಗಿದೆ.
- ಇಸ್ಲಾಮಾಬಾದ್‌ನಲ್ಲಿರುವ ಭಾರತದ ಹೈಕಮಿಷನ್ ಕಚೇರಿಯಲ್ಲಿರುವ ಸೇನಾ ಸಲಹೆಗಾರರನ್ನು ಕೇಂದ್ರ ಸರ್ಕಾರ ವಾಪಸು ಕರೆಸಿಕೊಂಡಿದೆ
- 'ಪಾಕಿಸ್ತಾನ ಸೇನೆಯು ಮೂರನೇ ಬಾರಿಗೆ ಕದನ ವಿರಾಮ ಉಲ್ಲಂಘಿಸಿದೆ. ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಗುಂಡಿನ ದಾಳಿ ನಡೆಸಿದೆ. ನಮ್ಮ ಸೈನಿಕರು ತಕ್ಕ ಉತ್ತರ ನೀಡಿದ್ದಾರೆ' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

'ಶಿಕ್ಷಕನಾಗಿದ್ದವ ಪಾತಕಿಯಾದ..'

ಪ್ರಜಾವಾಣಿ ವಾರ್ತೆ

ಶ್ರೀನಗರ: ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯ 'ರೂವಾರಿ'ಗಳ ಪೈಕಿ ಆದಿಲ್ ಹುಸೇನ್ ಠೋಕರ್ ಕೂಡ ಒಬ್ಬ ಎಂದು ಎನ್‌ಐಎ ಹೇಳಿದೆ. ಒಂದು ಕಾಲದಲ್ಲಿ ಈತ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕನಾಗಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದ್ದು, ಇದು ಕಾಶ್ಮೀರ ಜನರಲ್ಲಿ ಆಘಾತ ಮೂಡಿಸಿದೆ.

ಆದಿಲ್ ಹುಸೇನ್, ಲಷ್ಕರ್‌– ಎ–ತಯಬಾ (ಎಲ್‌ಇಟಿ) ಸಂಘಟನೆಯೊಂದಿಗೆ ಗುರುತಿಸಿಕೊಂಡಿದ್ದಾನೆ ಎಂದು ಎನ್‌ಐಎ ಹೇಳಿದೆ.

'ಅನಂತನಾಗ್ ಜಿಲ್ಲೆಯ ಗುರಿ ಗ್ರಾಮದ ಆದಿಲ್, ಸ್ನಾತಕೋತ್ತರ ಪದವೀಧರ. ಮೃದು ಭಾಷಿಯಾಗಿದ್ದ ಆತ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕನಾಗಿದ್ದ. ಈತ ಇಂತಹ ದೊಡ್ಡ ಪ್ರಮಾಣದ ದಾಳಿಗೆ ಸಂಚು ರೂಪಿಸುತ್ತಾನೆ ಎಂದು ಯಾರೂ ಊಹಿಸಿರಲಿಲ್ಲ' ಎಂದು ಸ್ಥಳೀಯರು ಹೇಳುತ್ತಾರೆ.

'ಶಿಕ್ಷಕನಾಗಿದ್ದ ಆದಿಲ್ ಹುಸೇನ್ ಕ್ರಮೇಣ ಮೂಲಭೂತವಾದದತ್ತ ಆಕರ್ಷಿತನಾಗಿದ್ದ, ಆದರೆ, ಈ ವಿಚಾರದಲ್ಲಿ ಆತನ ನಿರ್ಧಾರ ದೃಢವಾಗಿತ್ತು. 2010ರಲ್ಲಿ, ಗುಂಡಿನ ಚಕಮಕಿಗಳಲ್ಲಿ ಹತರಾದ ಉಗ್ರರ ಅಂತ್ಯಕ್ರಿಯೆಗಳಲ್ಲಿ ಈತ ಪಾಲ್ಗೊಳ್ಳುತ್ತಿದ್ದ' ಎಂದು ಎನ್‌ಐಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'2018ರಲ್ಲಿ ಆತ ಸಂಪೂರ್ಣವಾಗಿ ಮೂಲಭೂತವಾದಿಯಾಗಿ ಪರಿವರ್ತನೆಗೊಂಡಿದ್ದ. ಕಾನೂನುಬದ್ಧವಾಗಿಯೇ ವೀಸಾ ಪಡೆದು ಆತ ಪಾಕಿಸ್ತಾನಕ್ಕೆ ತೆರಳಿದ್ದ. ವೈಯಕ್ತಿಕ ಕಾರಣಗಳಿಗಾಗಿ ಅಲ್ಲಿಗೆ ತೆರಳಿದ್ದ ಎಂದು ಮೇಲ್ನೋಟಕ್ಕೆ ಕಂಡುಬಂದರೂ ನಂತರ ಆತ ಎಲ್‌ಇಟಿ ಸೇರಿದ್ದ. ಕಳೆದ ವರ್ಷ ಗುಪ್ತವಾಗಿ ಭಾರತ ಪ್ರವೇಶಿಸಿದ್ದ. ದೋಡಾ ಮತ್ತು ಕಿಶ್ತವಾಡ ಪ್ರದೇಶಗಳಲ್ಲಿ ಸಕ್ರಿಯವಾಗಿದ್ದ ಎನ್ನಲಾಗಿದೆ' ಎಂದೂ ಹೇಳಿದ್ದಾರೆ.

'ಸಂತ್ರಸ್ತರಿಗೆ ನ್ಯಾಯ ಖಚಿತ'

ಮನದ ಮಾತು

- ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಇಡೀ ಜಗತ್ತು 140 ಕೋಟಿ ಭಾರತೀಯರೊಂದಿಗೆ ನಿಂತಿದೆ
- ದಾಳಿಯನ್ನು ಇಡೀ ಜಗತ್ತು ಖಂಡಿಸಿದೆ. ವಿವಿಧ ದೇಶಗಳ ನಾಯಕರು ನನಗೆ ಕರೆ ಮಾಡಿ ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ
- ಭಯೋತ್ಪಾದಕರು ಕಾಶ್ಮೀರವನ್ನು ಮತ್ತೆ ನಾಶಪಡಿಸಲು ಬಯಸುತ್ತಾರೆ

ನವದೆಹಲಿ (ಪಿಟಿಐ): ಭಯೋತ್ಪಾದಕ ದಾಳಿಯ ಸಂತ್ರಸ್ತರಿಗೆ ಖಂಡಿತವಾಗಿಯೂ ನ್ಯಾಯ ಸಿಗುತ್ತದೆ ಎಂದು ಹೇಳಿರುವ ಪ್ರಧಾನಿ ನರೇಂದ್ರ ಮೋದಿ, 26 ನಾಗರಿಕರ ಹತ್ಯೆಯ ಹಿಂದಿರುವ ಭಯೋತ್ಪಾದಕರು ಮತ್ತು ಸಂಚುಕೋರರನ್ನು ಹುಡುಕಿ ಕಠಿಣ ಶಿಕ್ಷೆಗೆ ನೀಡಲಾಗುವುದು ಎಂಬುದನ್ನು ಪುನರುಚ್ಚರಿಸಿದರು.

'ಮನದ ಮಾತು' ಮಾಸಿಕ ರೇಡಿಯೊ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು,ಕಾಶ್ಮೀರದ ಪ್ರಸಿದ್ಧ ಪ್ರವಾಸಿ ತಾಣದಲ್ಲಿ ನಡೆದ ದಾಳಿಯು ಭಯೋತ್ಪಾದನೆಯನ್ನು ಪೋಷಿಸುವವರ ಹತಾಶೆ ಮತ್ತು ಹೇಡಿತನವನ್ನು ತೋರಿಸುತ್ತದೆ ಎಂದು ಪಾಕಿಸ್ತಾನದ ಹೆಸರು ಹೇಳದೆಯೇ ಟೀಕಿಸಿದರು.

'ಕಾಶ್ಮೀರದಲ್ಲಿ ಮೂಲಸೌಕರ್ಯಗಳ ನಿರ್ಮಾಣ ಕಾರ್ಯ ವೇಗ ಪಡೆದುಕೊಂಡಿದೆ. ಪ್ರವಾಸಿಗರ ಸಂಖ್ಯೆಯಲ್ಲಿ ದಾಖಲೆ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದಿದೆ' ಎಂದರು.

'ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಿರುವ ಬದಲಾವಣೆ ಮತ್ತು ಅಲ್ಲಿ ನಡೆಯುತ್ತಿರುವ ಅಭಿವೃದ್ಧಿ ಚಟುವಟಿಕೆಗಳು ದೇಶದ ಶತ್ರುಗಳಿಗೆ ಇಷ್ಟವಾಗಲಿಲ್ಲ. ಆದ್ದರಿಂದ ಇಂತಹ ದೊಡ್ಡ ದಾಳಿ ನಡೆಸಿದರು' ಎಂದು ಹೇಳಿದರು.

ವಿಪಕ್ಷಗಳು ತಮ್ಮ ಹೇಳಿಕೆ ತಿರುಚಿವೆ: ಸಿದ್ದರಾಮಯ್ಯ ತರಾಟೆ

ಪಾಕಿಸ್ತಾನದ ವಿರುದ್ಧ ಯುದ್ಧ ಬೇಡ ಎಂದಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: 'ಪಾಕಿಸ್ತಾನದ ಮೇಲೆ ಯುದ್ಧ ಬೇಡ ಎಂದು ನಾನು ಹೇಳಿಲ್ಲ. ಅನಿವಾರ್ಯವಾದರೆ ಯುದ್ಧಕ್ಕೂ ಸಿದ್ಧ. ಯುದ್ಧ ಅಂತಿಮ ಆಯ್ಕೆಯೇ ಹೊರತು, ಏಕೈಕ ಆಯ್ಕೆ ಅಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಮೈಸೂರಿನಲ್ಲಿ ನಾನು ಹೇಳಿದ್ದು ಇದನ್ನೇ. ಆದರೆ, ಬಿಜೆಪಿಯವರು ಅದನ್ನು ತಿರುಚಿ, ಪಾಕಿಸ್ತಾನದ ವಿರುದ್ಧ ಸಿದ್ದರಾಮಯ್ಯ ಯುದ್ಧ ಬೇಡ ಅನ್ನುತ್ತಿದ್ದಾರೆ ಎಂದು ಅಪಪ್ರಚಾರ ಆರಂಭಿಸಿದ್ದಾರೆ' ಎಂದು ವಿರೋಧ ಪಕ್ಷದವರನ್ನು ತರಾಟೆಗೆ ತೆಗೆದುಕೊಂಡರು.

ಬೈರದೇವನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸರ್ಕಾರದ ಎರಡನೇ ವರ್ಷದ ಸಾಧನಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಭಾರತ ಬುದ್ಧ ಮತ್ತು ಬಸವಣ್ಣನ ನಾಡು. ನಾವು ಶಾಂತಿಪ್ರಿಯರು. ಯಾರ ಮೇಲೂ ಅನಗತ್ಯವಾಗಿ ಕಾಲು ಕೆರೆದುಕೊಂಡು ಯುದ್ಧಕ್ಕೆ ದಂಡೆತ್ತಿ ಹೋಗುವುದಿಲ್ಲ. ಆದರೆ, ನಮ್ಮನ್ನು ಕೆಣಕಿದರೆ ಸುಮ್ಮನೇ ಕೂರಲ್ಲ. ಅನಿವಾರ್ಯವಾದರೆ ಪಾಕಿಸ್ತಾನದ ವಿರುದ್ಧವೂ ಯುದ್ಧಕ್ಕೆ ಹಿಂಜರಿಯುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ದೇಶದ ಏಕತೆ ಮತ್ತು ಸಾರ್ವಭೌಮತೆಗೆ ಧಕ್ಕೆಯಾದರೆ ಯುದ್ಧ ಅನಿವಾರ್ಯ. ಪಾಕಿಸ್ತಾನವೇ ಆಗಲಿ ಇನ್ನಾವುದೇ ದೇಶವಾಗಲಿ ಯುದ್ಧಕ್ಕೆ ಭಾರತ ಸಿದ್ಧ. ರಾಷ್ಟ್ರದ ಅಖಂಡತೆ ಮತ್ತು ಸಮಗ್ರತೆಗೆ ಕಳಂಕ ತಂದರೆ ಸುಮ್ಮನೆ ಕೂರುವ ಪ್ರಶ್ನೆಯೇ ಇಲ್ಲ. ಇದರಲ್ಲಿ ಯಾವುದೇ ರಾಜಿ ಇಲ್ಲ. ದೇಶದ ನೆಲ, ಜಲ ಮತ್ತು ಜೀವಗಳಿಗೆ ಕಂಟಕ ತರುವ ಯಾರೇ ಆದರೂ ಅವರನ್ನು ಸುಮ್ಮನೆ ಬಿಡುವುದಿಲ್ಲ. ಅವರು ಎಷ್ಟೇ ಶಕ್ತಿಶಾಲಿಯಾದರೂ ಬಗ್ಗು ಬಡಿಯುತ್ತೇವೆ' ಎಂದು ಗುಡುಗಿದರು.

'ಭಯೋತ್ಪಾದನೆಯಂತಹ ವಿಧ್ವಂಸಕ ಕೃತ್ಯವನ್ನು ಯಾರಿಂದಲೂ ಸಹಿಸಲು ಸಾಧ್ಯವಿಲ್ಲ. ಉಗ್ರರನ್ನು ಮಟ್ಟ ಹಾಕಿ, ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತು ಹಾಕಬೇಕು. ಭಾರತೀಯರ ರಕ್ಷಣೆಯ ವಿಚಾರದಲ್ಲಿ ರಾಜಿ ಇಲ್ಲ. ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯನ್ನು ಯಾವುದೇ ಮುಲಾಜಿಲ್ಲದೆ ಕಟುವಾದ ಶಬ್ದಗಳಲ್ಲಿ ಖಂಡಿಸುತ್ತೇನೆ' ಎಂದು ಸ್ಪಷ್ಟಪಡಿಸಿದರು.

'ಅನಿವಾರ್ಯ ಸಂದರ್ಭ ಎದುರಾದರೆ ಯುದ್ಧ ಮಾಡಿ ದೇಶದ ಸಾರ್ವಭೌಮತ್ವ ಕಾಪಾಡಿಕೊಳ್ಳುವುದು ಭಾರತಕ್ಕೆ ಗೊತ್ತಿದೆ. ಇದನ್ನು ಭಾರತ ಪ್ರತಿ ಬಾರಿ ಸಾಬೀತು ಮಾಡಿರುವುದನ್ನು ಇತಿಹಾಸ ಪುಟ, ಪುಟಗಳೂ ಹೇಳುತ್ತಿವೆ' ಎಂದರು.

> **ಪುಲ್ವಾಮಾದಲ್ಲಿ 40 ಸೈನಿಕರ ಬಲಿ ತೆಗೆದುಕೊಂಡ ಉಗ್ರರ ದಾಳಿಯ ನಂತರವಾದರೂ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡಿದ್ದರೆ ಇಂದು ಪಹಲ್ಗಾಮ್ ಘಟನೆ ನಡೆಯುತ್ತಿರಲಿಲ್ಲ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಯುದ್ಧ ಬೇಡವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಶಾಂತಿ ದೃಷ್ಟಿಯಿಂದಷ್ಟೇ. ಆ ಹೇಳಿಕೆಯನ್ನು ನಾವು ದೌರ್ಬಲ್ಯ ಎಂದು ಅರ್ಥೈಸಿಕೊಳ್ಳಬಾರದು**
> **ಜಿ.ಪರಮೇಶ್ವರ,** ಗೃಹ ಸಚಿವ

> **ಹಿಂದೂಗಳನ್ನು ಗುರಿ ಮಾಡಿ ದಾಳಿ ನಡೆಸಿದರೂ ಸಿದ್ದರಾಮಯ್ಯ ಹೀಗೆ ಹೇಳುತ್ತಾರೆಂದರೆ ಅವರೊಬ್ಬ ಮುಸ್ಲಿಂ ಏಜೆಂಟ್, ಪಾಕಿಸ್ತಾನದ ಏಜೆಂಟ್**
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

'ಪಾಕ್ ಬಗ್ಗೆ ಸಹಾನುಭೂತಿ ಏಕೆ?

ಪಾಕಿಸ್ತಾನವು ಉಗ್ರರ ಮೂಲಕ ಭಾರತದ ಮೇಲೆ ದಾಳಿ ಮಾಡುತ್ತಿದ್ದರೂ ಅವರ ವಿರುದ್ಧ ಯುದ್ಧ ಮಾಡಬಾರದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಇದು ಅಕ್ಷಮ್ಯ ಅಪರಾಧ. ಅವರು ದೇಶದ ಕ್ಷಮೆ ಕೇಳಬೇಕು. ಅಲ್ಪಸಂಖ್ಯಾತರ ಓಲೈಕೆಗಾಗಿ ಪಾಕಿಸ್ತಾನ ಪರ ಮಾತನಾಡುವುದು ಸರಿಯಲ್ಲ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ


'ಪಾಕ್‌ನಲ್ಲಿ ಸಿ.ಎಂ ಫೇಮಸ್'

ತಮ್ಮ (ಸಿದ್ದರಾಮಯ್ಯ) ಬಾಲಿಶ ಹೇಳಿಕೆಗಳಿಂದ ಈಗ ರಾತ್ರೋರಾತ್ರಿ ಪಾಕಿಸ್ತಾನದಲ್ಲಿ ವರ್ಲ್ಡ್ ಫೇಮಸ್ ಆಗಿ ಬಿಟ್ಟಿದ್ದೀರಿ; ಅಭಿನಂದನೆಗಳು. ಮುಂದೆಂದಾದರೂ ತಾವು ಪಾಕಿಸ್ತಾನಕ್ಕೆ ಭೇಟಿ ಕೊಟ್ಟರೆ ತಮಗೆ ರಾಜಾತಿಥ್ಯ ಗ್ಯಾರಂಟಿ

ಆರ್.ಅಶೋಕ, ವಿರೋಧ ಪಕ್ಷದ ನಾಯಕ

'ಬೆಂಬಲದ ಮಾತಿಗೆ ಬದ್ಧ'

ಬೆಂಗಳೂರು: 'ಭಯೋತ್ಪಾದಕರ ದಾಳಿಗೆ ಪ್ರತ್ಯುತ್ತರವಾಗಿ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ಯಾವುದೇ ಕ್ರಮಗಳಿಗೂ ನಾವು ಬೆಂಬಲ ಘೋಷಿಸಿದ್ದೇವೆ. ಅದಕ್ಕೆ ನಾವು ಬದ್ಧರಾಗಿದ್ದೇವೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿದ ಅವರು, 'ದಾಳಿಯ ವಿಚಾರದಲ್ಲಿ ಧರ್ಮ ಮತ್ತು ಜಾತಿಯನ್ನು ಮುಂದೆ ತರುವುದು ಸರಿಯಲ್ಲ. ಇಲ್ಲಿ ನಾವು ಮುಖ್ಯವೇ ಅಲ್ಲ. ನಾನು ಇಂದು ಇರುತ್ತೇನೆ, ಆಮೇಲೆ ಹೋಗುತ್ತೇನೆ. ಮೋದಿ ಅವರೂ ಇಂದು ಇರುತ್ತಾರೆ, ಆಮೇಲೆ ಹೋಗುತ್ತಾರೆ. ಆದರೆ ದೇಶ ಶಾಶ್ವತವಾಗಿ ಇರುತ್ತದೆ. ಹೀಗಾಗಿ ದೇಶ ಹಾಗೂ ದೇಶದ ರಕ್ಷಣೆಯೇ ಮುಖ್ಯ' ಎಂದರು.

'ಕೇಂದ್ರ ಸರ್ಕಾರಕ್ಕೆ ನಾವು ಬೆಂಬಲ ಘೋಷಿಸಿದ್ದೇವೆ. ದೇಶದ ರಕ್ಷಣೆಗಾಗಿ ಕೇಂದ್ರವು ಹೋರಾಟಕ್ಕೆ ಇಳಿದರೆ, ನಾವು ಅದರ ಜತೆಗೆ ನಿಲ್ಲುತ್ತೇವೆ' ಎಂದರು.



ವಿರಾಟ್ ಅರ್ಧಶತಕ; ತವರಿನಾಚೆ ಆರ್‌ಸಿಬಿಯ ಅಜೇಯ ಓಟ; ಭುವಿ, ಹೇಜಲ್‌ವುಡ್ ಮಿಂಚು

ಕೃಣಾಲ್ ಕಮಾಲ್; ಮಣಿದ ಕ್ಯಾಪಿಟಲ್ಸ್

ನವದೆಹಲಿ (ಪಿಟಿಐ): ಮಿಂಚಿನ ಅರ್ಧಶತಕ ಗಳಿಸಿದ ಕೃಣಾಲ್ ಪಾಂಡ್ಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಜಯದ ಕಾಣಿಕೆ ನೀಡಿದರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ 6 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಿಸಿತು. ಇದರೊಂದಿಗೆ ಈ ಸಲದ ಟೂರ್ನಿಯಲ್ಲಿ ಆರ್‌ಸಿಬಿಯು ತವರಿನಾಚೆಯ ಪಂದ್ಯಗಳಲ್ಲಿ ಅಜೇಯ ಓಟವನ್ನು ಮುಂದುವರಿಸಿತು. ಈಚೆಗೆ ಬೆಂಗಳೂರಿನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಜಯಿಸಿತ್ತು. ಅದರ ಮುಯ್ಯಿ ತೀರಿಸಿಕೊಳ್ಳುವಲ್ಲಿಯೂ ರಜತ್ ಪಾಟೀದಾರ್ ಬಳಗ ಇಲ್ಲಿ ಯಶಸ್ವಿಯಾಯಿತು. ಅಷ್ಟೇ ಅಲ್ಲ; ಆರ್‌ಸಿಬಿ ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

163 ರನ್‌ಗಳ ಗೆಲುವಿನ ಗುರಿಯನ್ನು ಸುಲಭವಾಗಿ ಸಾಧಿಸುವ ವಿಶ್ವಾಸದಲ್ಲಿ ಆರ್‌ಸಿಬಿ ಇತ್ತು. ಅದಕ್ಕೆ ತಕ್ಕಂತೆ ಯುವಪ್ರತಿಭೆ ಜೇಕಬ್ ಬೆಥೆಲ್ (12 ರನ್) ಮತ್ತು ವಿರಾಟ್ ಕೊಹ್ಲಿ ಉತ್ತಮ ಆರಂಭ ನೀಡುವ ವಿಶ್ವಾಸ ಮೂಡಿಸಿದರು. ಆದರೆ ಇನಿಂಗ್ಸ್‌ನ 3ನೇ ಓವರ್ ಬೌಲಿಂಗ್ ಮಾಡಿದ ಡೆಲ್ಲಿ ತಂಡದ ನಾಯಕ ಅಕ್ಷರ್ ಪಟೇಲ್ ಸತತ ಎರಡು ಎಸೆತಗಳಲ್ಲಿ ಜೇಕಬ್ ಮತ್ತು ದೇವದತ್ತ ಪಡಿಕ್ಕಲ್ ವಿಕೆಟ್‌ಗಳನ್ನು ಕಬಳಿಸಿದರು. ಜೇಕಬ್ ಅವರು ದೊಡ್ಡ ಹೊಡೆತ ಆಡುವ ಭರದಲ್ಲಿ ಕರುಣ್ ನಾಯರ್‌ಗೆ ಕ್ಯಾಚ್ ಆದರೆ, ಪಡಿಕ್ಕಲ್ ಕ್ಲೀನ್‌ಬೌಲ್ಡ್ ಆದರು.

ಕ್ರೀಸ್‌ಗೆ ಬಂದ ರಜತ್ ಪಾಟೀದಾರ್ (6 ರನ್) ಫೀಲ್ಡರ್ ಕರುಣ್ ಅವರು ಮಾಡಿದ ನಿಖರ ಥ್ರೋಗೆ ರನ್‌ಔಟ್ ಆದರು. ಆಗ ತಂಡದ ಸ್ಕೋರ್ 26 ರನ್‌ಗಳಿಗೆ 3 ವಿಕೆಟ್‌ಗಳು. ಈ ಹಂತದಲ್ಲಿ ಕೊಹ್ಲಿ ಕೂಡ ತಮ್ಮ ಆಟದ ವೇಗವನ್ನು ತಗ್ಗಿಸಿದರು. ಆದರೆ ವೇಗಿ ಮಿಚೆಲ್ ಸ್ಟಾರ್ಕ್ ಅವರ ಎಸೆತಗಳಲ್ಲಿ ಬೌಂಡರಿಗಳನ್ನು ಬಾರಿಸುವ ಮೂಲಕ ತಮ್ಮ ಪರಾಕ್ರಮ ಮೆರೆದರು.

ಕ್ರಮಾಂಕದಲ್ಲಿ ಬಡ್ತಿ ಪಡೆದು ಬಂದ ಕೃಣಾಲ್ ಇನಿಂಗ್ಸ್ ದಿಕ್ಕು ಬದಲಿಸಿದರು. ಕೃಣಾಲ್ ಬೀಡುಬೀಸಾಗಿ ಬ್ಯಾಟ್ ಝಳಪಿಸಿದರು. ಅವರು ವಿರಾಟ್ ಗಿಂತ ಮುನ್ನವೇ ಅರ್ಧಶತಕದ ಗಡಿ ದಾಟಿದರು. 47 ಎಸೆತಗಳಲ್ಲಿ ಅಜೇಯ 73 ರನ್ ಗಳಿಸಿದರು. ಅಲ್ಲದೇ ವಿರಾಟ್ ಅವರೊಂದಿಗೆ ನಾಲ್ಕನೇ ವಿಕೆಟ್ ಜತೆಯಾಟದಲ್ಲಿ 119 ರನ್ ಸೇರಿಸಿದರು. ವಿರಾಟ್ 45 ಎಸೆತಗಳಲ್ಲಿ 50ರ ಗಡಿ ಮುಟ್ಟಿದರು. ಟೂರ್ನಿಯಲ್ಲಿ ಇದು ಅವರ ಆರನೇ ಅರ್ಧಶತಕ. ಅಲ್ಲದೇ 'ಆರೆಂಜ್ ಕ್ಯಾಪ್' ಕೂಡ ಪಡೆದರು. ಗೆಲುವಿಗೆ 17 ರನ್‌ಗಳ ಅಗತ್ಯವಿದ್ದ ಸಂದರ್ಭದಲ್ಲಿ ಚಾಮೀರಾ ಎಸೆತದಲ್ಲಿ ವಿರಾಟ್ ಅವರು ಸ್ಟಾರ್ಕ್‌ಗೆ ಕ್ಯಾಚ್ ಆದರು. ಟಿಮ್ ಡೇವಿಡ್ ಅವರು ಕೃಣಾಲ್ ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಭುವಿ, ಹೇಜಲ್‌ವುಡ್ ದಾಳಿ: ಟಾಸ್ ಗೆದ್ದ ಆರ್‌ಸಿಬಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ವೇಗಿಗಳಾದ ಭುವನೇಶ್ವರ್ ಕುಮಾರ್ (33ಕ್ಕೆ3) ಮತ್ತು ಜೋಶ್ ಹೇಜಲ್‌ವುಡ್ (36ಕ್ಕೆ2) ಅವರ ನಿಖರ ದಾಳಿಯಿಂದಾಗಿ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 162 ರನ್ ಗಳಿಸಿತು.

ಕನ್ನಡಿಗ ಕೆ.ಎಲ್. ರಾಹುಲ್ (41; 39ಎ, 4X3) ಹಾಗೂ ಟ್ರಿಸ್ಟನ್ ಸ್ಟಬ್ಸ್ (34; 18ಎ, 4X5, 6X1) ಆಟ ಚೇತೋಹಾರಿಯಾಗಿತ್ತು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 8ಕ್ಕೆ162 (ಅಭಿಷೇಕ್ ಪೊರೆಲ್ 28, ಫಾಫ್ ಡುಪ್ಲೆಸಿ 22, ಕೆ.ಎಲ್. ರಾಹುಲ್ 41, ಟ್ರಿಸ್ಟನ್ ಸ್ಟಬ್ಸ್ 34, ಭುವನೇಶ್ವರ್ ಕುಮಾರ್ 33ಕ್ಕೆ3, ಜೋಶ್ ಹೇಜಲ್‌ವುಡ್ 36ಕ್ಕೆ2) **ರಾಯಲ್ ಚಾಲೆಂಜರ್ಸ್ ಬೆಂಗಳೂರು:** 18.3 ಓವರ್‌ಗಳಲ್ಲಿ 4ಕ್ಕೆ165 (ವಿರಾಟ್ ಕೊಹ್ಲಿ 51, ಕೃಣಾಲ್ ಪಾಂಡ್ಯ ಅಜೇಯ 73, ಟಿಮ್ ಡೇವಿಡ್ ಅಜೇಯ 19, ಅಕ್ಷರ್ ಪಟೇಲ್ 19ಕ್ಕೆ2, ದುಷ್ಮಂತ ಚಾಮೀರ 24ಕ್ಕೆ1) **ಫಲಿತಾಂಶ:** ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ ಕೃಣಾಲ್ ಪಾಂಡ್ಯ



ಆರ್‌ಸಿಬಿ ತಂಡದ ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಬ್ಯಾಟಿಂಗ್ ಚಿತ್ರ: ಪಿಟಿಐ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	10	7	3	14	0.521
ಗುಜರಾತ್ ಟೈಟನ್ಸ್	8	6	2	12	1.104
ಮುಂಬೈ ಇಂಡಿಯನ್ಸ್	10	6	4	12	0.889
ಡೆಲ್ಲಿ ಕ್ಯಾಪಿಟಲ್ಸ್	9	6	3	12	0.482
ಪಂಜಾಬ್ ಕಿಂಗ್ಸ್	9	5	3	11	0.177
ಲಖನೌ ಸೂಪರ್ ಜೈಂಟ್ಸ್	10	5	5	10	-0.325
ಕೋಲ್ಕತ್ತ ನೈಟ್ ರೈಡರ್ಸ್	9	3	5	7	0.212
ಸನ್‌ರೈಸರ್ಸ್ ಹೈದರಾಬಾದ್	9	3	6	6	-1.103
ರಾಜಸ್ಥಾನ ರಾಯಲ್ಸ್	9	2	7	4	-0.625
ಚೆನ್ನೈ ಸೂಪರ್ ಕಿಂಗ್ಸ್	9	2	7	4	-1.302

ಆರೇಂಜ್ ಕ್ಯಾಪ್
ವಿರಾಟ್ ಕೊಹ್ಲಿ
(ಆರ್‌ಸಿಬಿ) **443** ರನ್

ಪರ್ಪಲ್ ಕ್ಯಾಪ್
ಜೋಶ್ ಹೇಜಲ್‌ವುಡ್
(ಆರ್‌ಸಿಬಿ) 18 ವಿಕೆಟ್

ಮುಂಬೈ ಸತತ ಐದನೇ ಜಯ

ಜ್ಯಾಕ್ಸ್ ಆಲ್‌ರೌಂಡ್ ಆಟ; ಟ್ರೆಂಟ್– ಬೂಮ್ರಾ ಮಿಂಚು

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಸತತ ಐದನೇ ಜಯ ದಾಖಲಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮುಂಬೈ 54 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಜಯಿಸಿತು. ವಿಲ್ ಜ್ಯಾಕ್ಸ್ (29; 21ಎ, 4X3, 6X1 ಮತ್ತು 18ಕ್ಕೆ2) ಆಲ್‌ರೌಂಡ್ ಆಟವಾಡಿದ್ದು ಮುಂಬೈ ಜಯದಲ್ಲಿ ಪ್ರಮುಖ ಪಾತ್ರ ವಹಿಸಿತು. 216 ರನ್‌ಗಳ ಗುರಿ ಬೆನ್ನಟ್ಟಿದ್ದ ಲಖನೌ ತಂಡದ ಸಿಡಿಲಬ್ಬರದ ಶೈಲಿಯ ಬ್ಯಾಟರ್ ನಿಕೊಲಸ್ ಪೂರನ್ (27; 15ಎ, 4X1, 6X3) ಮತ್ತು ರಿಷಭ್ ಪಂತ್ (4 ರನ್) ಅವರ ವಿಕೆಟ್‌ಗಳನ್ನು ವಿಲ್ ಜ್ಯಾಕ್ಸ್ ಗಳಿಸಿದರು. ಇದರಿಂದಾಗಿ ಮುಂಬೈ ಜಯದ ಹಾದಿ ಸುಗಮವಾಯಿತು.

ಟಾಸ್ ಗೆದ್ದ ಲಖನೌ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಿಯಾನ್ ರಿಕೆಲ್ಟನ್ (58; 32ಎ, 4X6, 6X4) ಮತ್ತು ಸೂರ್ಯಕುಮಾರ್ ಯಾದವ್ (54; 28ಎ, 4X4, 6X4) ಅವರು ಅರ್ಧಶತಕ ಗಳಿಸಿದರು. ಐಪಿಎಲ್‌ನಲ್ಲಿ ಸೂರ್ಯಕುಮಾರ್ ಯಾದವ್ 4000 ರನ್ ಪೂರೈಸಿದ್ದಾರೆ. ಇದರಿಂದಾಗಿ ಮುಂಬೈ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 215 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಲಖನೌ ತಂಡವು 20 ಓವರ್‌ಗಳಲ್ಲಿ 161 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಎಡಗೈ ವೇಗಿ ಟ್ರೆಂಟ್ ಬೌಲ್ಟ್ (20ಕ್ಕೆ3) ಮತ್ತು ಜಸ್‌ಪ್ರೀತ್ ಬೂಮ್ರಾ (22ಕ್ಕೆ4) ಅವರ ದಾಳಿಯ ಮುಂದೆ ಲಖನೌ ಕುಸಿಯಿತು.

ಲಖನೌ ತಂಡದ ಆರಂಭಿಕ ಬ್ಯಾಟರ್ ಮಿಚೆಲ್ ಮಾರ್ಷ್ (34; 24ಎ) ಮತ್ತು ಆಯುಷ್ ಬಡೋಣಿ (35; 22ಎ) ಅವರ ಬೌಲರ್‌ಗಳಿಗೆ ಒಂದಿಷ್ಟು ಪ್ರತಿರೋಧ ತೋರಿಸಿದರು. ಆದರೆ ದೊಡ್ಡ ಮೊತ್ತದ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ.

ಲಖನೌ ತಂಡದ ವೇಗಿ ಮಯಂಕ್ ಯಾದವ್ ಅವರು ಕೂಡ 2 ವಿಕೆಟ್ ಗಳಿಸಿದರು. ಅವರು ಈಚೆಗಷ್ಟೇ ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮುಂಬೈ: 20 ಓವರ್‌ಗಳಲ್ಲಿ 7ಕ್ಕೆ215 (ರಿಯಾನ್ ರಿಕೆಲ್ಟನ್ 58, ವಿಲ್ ಜ್ಯಾಕ್ಸ್ 29, ಸೂರ್ಯಕುಮಾರ್ ಯಾದವ್ 54, ನಮನ್ ಧೀರ್ ಔಟಾಗದೇ 25, ಕಾರ್ಬಿನ್ ಬಾಷ್ 20, ಮಯಂಕ್ ಯಾದವ್ 40ಕ್ಕೆ2, ಆವೇಶ್ ಖಾನ್ 42ಕ್ಕೆ2) **ಲಖನೌ ಸೂಪರ್‌ಜೈಂಟ್ಸ್:** 20 ಓವರ್‌ಗಳಲ್ಲಿ 161 (ಮಿಚೆಲ್ ಮಾರ್ಷ್ 34, ನಿಕೊಲಸ್ ಪೂರನ್ 27, ಆಯುಷ್ ಬಡೋನಿ 35, ಡೇವಿಡ್ ಮಿಲ್ಲರ್ 24, ಟ್ರೆಂಟ್ ಬೌಲ್ಟ್ 20ಕ್ಕೆ3, ಜಸ್‌ಪ್ರೀತ್ ಬೂಮ್ರಾ 22ಕ್ಕೆ4, ವಿಲ್ ಜ್ಯಾಕ್ಸ್ 18ಕ್ಕೆ2) **ಪಂದ್ಯದ ಆಟಗಾರ:** ವಿಲ್ ಜ್ಯಾಕ್ಸ್.



ಮುಂಬೈ ಇಂಡಿಯನ್ಸ್ ತಂಡದ ವಿಲ್ ಜ್ಯಾಕ್ಸ್, ಹಾರ್ದಿಕ್ ಪಾಂಡ್ಯ ಮತ್ತು ಜಸ್‌ಪ್ರೀತ್ ಬೂಮ್ರಾ ಅವರು ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ಭಾರತ ಶುಭಾರಂಭ

ಕೊಲಂಬೊ (ಪಿಟಿಐ): ಪ್ರತೀಕಾ ರಾವಲ್ ಅರ್ಧಶತಕ ಮತ್ತು ಸ್ನೇಹ ರಾಣಾ ಅವರ ಉತ್ತಮ ಬೌಲಿಂಗ್ ನೆರವಿನಿಂದ ಭಾರತ ಮಹಿಳಾ ಕ್ರಿಕೆಟ್ ತಂಡವು ಭಾನುವಾರ ಆರಂಭವಾದ ಏಕದಿನ ಕ್ರಿಕೆಟ್ ತ್ರಿಕೋನ ಸರಣಿಯ ಮೊದಲ ಪಂದ್ಯದಲ್ಲಿ ಜಯಿಸಿತು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 9 ವಿಕೆಟ್‌ಗಳಿಂದ ಆತಿಥೇಯ ಶ್ರೀಲಂಕಾ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ 38.1 ಓವರ್‌ಗಳಲ್ಲಿ 147 (ಹಾಸಿನಿ ಪೆರೇರಾ 30, ಕವಿಶಾ ದಿಲಾರಿ 25, ಅನುಷ್ಕಾ ಸಂಜೀವನಿ 22, ದೀಪ್ತಿ ಶರ್ಮಾ 22ಕ್ಕೆ2, ಸ್ನೇಹಾ ರಾಣಾ 31ಕ್ಕೆ3, ಎನ್. ಚರಣಿ 26ಕ್ಕೆ2) **ಭಾರತ:** 29.4 ಓವರ್‌ಗಳಲ್ಲಿ 1 ವಿಕೆಟ್‌ಗೆ 149 (ಪ್ರತಿಕಾ ರಾವಲ್ ಔಟಾಗದೇ 50, ಸ್ಮೃತಿ ಮಂದಾನ 43, ಹರ್ಲೀನ್ ಡಿಯೊಲ್ ಔಟಾಗದೇ 48, **ಪಂದ್ಯದ ಆಟಗಾರ್ತಿ:** ಪ್ರತಿಕಾ ರಾವಲ್.



ಪ್ರಶಸ್ತಿಯೊಂದಿಗೆ ಕರ್ಣ ಕಡೂರು ಮತ್ತು ಕೇರಳದ ಮೂಸಾ ಶರೀಫ್

ಕರ್ಣ–ಶರೀಫ್ ಜೋಡಿಗೆ ಪ್ರಶಸ್ತಿ

ಚೆನ್ನೈ (ಪಿಟಿಐ): ಹಾಲಿ ರಾಷ್ಟ್ರೀಯ ಚಾಂಪಿಯನ್ ಕರ್ಣ ಕಡೂರು ಮತ್ತು ಅನುಭವಿ ಸಹಚಾಲಕ ಮೂಸಾ ಶರೀಫ್ ಅವರು ಭಾನುವಾರ ಎಫ್‌ಐಎ ಏಷ್ಯಾ ಪೆಸಿಫಿಕ್ ರ್‍ಯಾಲಿ ಚಾಂಪಿಯನ್‌ಷಿಪ್‌ನ ಇಂಡಿಯಾ ಸುತ್ತಿನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ಭಾನುವಾರ ಮುಕ್ತಾಯವಾದ ರೇಸ್‌ನಲ್ಲಿ ಅರ್ಕ ಮೋಟಾರ್ ಸ್ಪೋರ್ಟ್ಸ್‌ನ ಬೆಂಗಳೂರಿನ ಕರ್ಣ– ಕೇರಳದ ಮೂಸಾ ಜೋಡಿಯು (2 ಗಂಟೆ 03 ನಿಮಿಷ 44 ಸೆಕೆಂಡ್) ನಾಲ್ಕು ಹಂತಗಳಲ್ಲಿ ಅಮೋಘ ಪ್ರದರ್ಶನ ನೀಡಿ 1 ನಿಮಿಷ 50.8 ಸೆಕೆಂಡುಗಳ ಮುನ್ನಡೆಯೊಂದಿಗೆ ಚಾಂಪಿಯನ್ ಆಯಿತು. 36 ವರ್ಷ ವಯಸ್ಸಿನ ಕರ್ಣ ಅವರಿಗೆ ಇದು ಮೂರನೇ ಅಂತರರಾಷ್ಟ್ರೀಯ ಪ್ರಶಸ್ತಿಯಾಗಿದೆ.

ಸನಯಾ, ವೆಂಕಟಗೆ 'ಡಬಲ್' ಚಿನ್ನ

ಮಂಗಳೂರು: ಬೆಂಗಳೂರಿನ ಸನಯಾ ಮತ್ತು ವೆಂಕಟ ರೇಯಾಂಶ್ ಭಾನುವಾರ ಆರಂಭಗೊಂಡ ರಾಜ್ಯ ವುಷು ಚಾಂಪಿಯನ್‌ಷಿಪ್‌ನ ಸಬ್ ಜೂನಿಯರ್ ವಿಭಾಗದ ಥಾವ್ಲು ಸ್ಪರ್ಧೆಯ ಗುನ್ಶು ಮತ್ತು ಚಾಂಖ್ವಾನ್ ವಿಭಾಗಗಳಲ್ಲಿ ಮೇಲುಗೈ ಸಾಧಿಸಿದರು.



ವೆಂಕಟ

ಕರ್ನಾಟಕ ರಾಜ್ಯ ವುಷು ಸಂಸ್ಥೆಯ ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವುಷಿ ಸಂಸ್ಥೆ ನಗರದ ಯು.ಎಸ್. ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಬಾಲಕಿಯರ ಮತ್ತು ಬಾಲಕರ ವಿಭಾಗಗಳಲ್ಲಿ ಇವರಿಬ್ಬರೂ ತಲಾ ಎರಡು ಚಿನ್ನ ಗೆದ್ದುಕೊಂಡರು.ಬಾಲಕಿಯರ ಗುನ್ಶು ಸ್ಪರ್ಧೆಯಲ್ಲಿ ಸನಯಾ 8.20 ಪಾಯಿಂಟ್‌ಗಳೊಂದಿಗೆ ಮೊದಲಿಗರಾದರು. ಬಾಲಕರ ವಿಭಾಗದಲ್ಲಿ ವೆಂಕಟ 7.27 ಪಾಯಿಂಟ್ ಗಳಿಸಿ ಚಿನ್ನ ತಮ್ಮದಾಗಿಸಿಕೊಂಡರು.

ಫಲಿತಾಂಶಗಳು: ಬಾಲಕಿಯರ ಗುನ್ಶು ಸನಯಾ (ಬೆಂಗಳೂರು)–1,ತನ್ವಿ ರೆಡ್ಡಿ (ಬೆಂಗಳೂರು)–2, ದಿವ್ಯಾ (ಬೆಂಗಳೂರು)–3; ಚಾಂಖ್ವಾನ್: ಸಾನಿಯಾ (ಬೆಂಗಳೂರು)–1, ಯಶ್ವಿತಾ (ಬೆಂಗಳೂರು)–2, ಪ್ರಣತಿ (ಮೈಸೂರು)–3; ಬಾಲಕರ ಗುನ್ಶು: ವೆಂಕಟ ರೇಯಾಂಶ್ (ಬೆಂಗಳೂರು)–1, ತನ್ಮಯ ಕೆ (ಬೆಂಗಳೂರು)–2, ಹರ್ಷಿತ್ ಕುಮಾರ್ (ಬೆಂಗಳೂರು)–3; ಚಾಂಖ್ವಾನ್: ವೆಂಕಟ (ಬೆಂಗಳೂರು)–1, ತನ್ಮಯ (ಬೆಂಗಳೂರು)–2, ಹರ್ಷಿತ್ ಕುಮಾರ್ (ಬೆಂಗಳೂರು)–3.

ಗಿಲ್ ಬಳಗಕ್ಕೆ ರಾಯಲ್ಸ್ ಸವಾಲು ಇಂದು

ಜೈಪುರ (ಪಿಟಿಐ): ಅಮೋಘ ಲಯದಲ್ಲಿರುವ ಗುಜರಾತ್ ಟೈಟನ್ಸ್ ತಂಡವು ಸೋಮವಾರ ರಾಜಸ್ಥಾನ ರಾಯಲ್ಸ್ ಎದುರು ಕಣಕ್ಕಿಳಿಯಲಿದೆ.

ಆತಿಥೇಯ ರಾಜಸ್ಥಾನ ತಂಡವು ಪ್ಲೇ ಆಫ್ ಹಾದಿಯಿಂದ ಬಹುತೇಕ ಹೊರಗೆ ಬಿದ್ದಂತಾಗಿದೆ. ಗುಜರಾತ್ ಮಾತ್ರ 12 ಅಂಕಗಳೊಂದಿಗೆ ಅಗ್ರ ತಂಡಗಳಲ್ಲಿದೆ. 6 ಪಂದ್ಯಗಳನ್ನು ಗೆದ್ದಿರುವ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡವು ಪ್ಲೇ ಆಫ್ ಹಂತದ ಸಮೀಪದಲ್ಲಿದೆ. ಇನ್ನುಳಿದಿರುವ ಪಂದ್ಯಗಳಲ್ಲಿ ಕನಿಷ್ಠ ಎರಡು ಗೆದ್ದರೂ ನಾಕೌಟ್ ಪ್ರವೇಶ ಖಚಿತವಾಗಲಿದೆ. ತಂಡವು ಎಲ್ಲ ವಿಭಾಗಗಳಲ್ಲಿಯೂ ಉತ್ತಮವಾಗಿರುವುದರಿಂದ ಈ ಸ್ಥಾನ ಕಾಪಾಡಿಕೊಳ್ಳಲು ಸಾಧ್ಯವಾಗಿದೆ.

ಎಲ್ಲ ವಿಭಾಗಗಳಲ್ಲಿಯೂ ಆಟಗಾರರು ಉತ್ತಮವಾಗಿ ಆಡತ್ತಿರುವುದರಿಂದ ತಂಡವು ಯಶಸ್ಸಿನತ್ತ ಮುನ್ನಡೆಯುತ್ತಿದೆ. ಅದರಲ್ಲೂ ಆರಂಭಿಕ ಬ್ಯಾಟರ್ ಸಾಯಿ ಸುದರ್ಶನ್ ಮತ್ತು ವೇಗಿ, ಕನ್ನಡಿಗ ಪ್ರಸಿದ್ಧ ಕೃಷ್ಣ ಅವರು ಸತತವಾಗಿ ಉತ್ತಮ ಲಯದಲ್ಲಿರುವುದು ತಂಡದ ಬಲ ಹೆಚ್ಚಿಸಿದೆ.



ಪ್ರಸಿದ್ಧ ಕೃಷ್ಣ

ಸುದರ್ಶನ್ ಜೊತೆಗೆ ಗಿಲ್ ಮತ್ತು ಜೋಸ್ ಬಟ್ಲರ್ ಅವರೂ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಗಿಲ್ ಮತ್ತು ಬಟ್ಲರ್ ಅವರು 150ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸುತ್ತಿದ್ದಾರೆ.ಕಗಿಸೊ ರಬಾಡ ಅವರ ಅನುಪಸ್ಥಿತಿಯಲ್ಲಿಯೂ ಪ್ರಸಿದ್ಧ ತಮ್ಮ ಹೊಣೆಯನ್ನು ಉತ್ತಮವಾಗಿ ನಿಭಾಯಿಸುತ್ತಿದ್ದಾರೆ. ಇನ್ನೊಬ್ಬ ವೇಗಿ ಮೊಹಮ್ಮದ್ ಸಿರಾಜ್ (12 ವಿಕೆಟ್) ಕೂಡ ಪರಿಣಾಮಕಾರಿಯಾಗಿದ್ದಾರೆ. ಸ್ಪಿನ್ನರ್ ಸಾಯಿಕಿಶೋರ್(12 ವಿಕೆಟ್) ಅವರು 8.22ರ ಎಕಾನಮಿ ಹೊಂದಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಕೊಡವ ಹಾಕಿ: ಮಂಡೇಪಂಡಕ್ಕೆ 'ಮುದ್ದಂಡ ಕಪ್'

ಮಡಿಕೇರಿ: ಮಂಡೇಪಂಡ ತಂಡವು ಭಾನುವಾರ ಇಲ್ಲಿ ಮುಕ್ತಾಯಗೊಂಡ 'ಮುದ್ದಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿತು.

ಅಪಾರ ಸಂಖ್ಯೆಯ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದ ಮೊದಲಾರ್ಧದಲ್ಲಿ ಮಂಡೇಪಂಡ 1–0ಯಿಂದ ಚೇದಂಡ ತಂಡದ ವಿರುದ್ಧ ಮುನ್ನಡೆ ಕಾಯ್ದುಕೊಂಡಿತ್ತು. ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದ ಗೌತಮ್ ಕೊಡುಗೆ ನೀಡಿದರು.

ದ್ವಿತೀಯಾರ್ಧದ ಕೆಲವೇ ನಿಮಿಷದಲ್ಲಿ ಮಳೆ ಆರಂಭಗೊಂಡಿದ್ದು, ಕ್ರಮೇಣ ಬಿರುಸಾದ ಕಾರಣ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ಮತ್ತೆ ಮತ್ತೆ ಮಳೆಯಾಗಿದ್ದು, ಇಡೀ ಮೈದಾನ ನೀರು ತುಂಬಿದ ಕಾರಣ ಪಂದ್ಯ ಅಲ್ಲಿಗೆ ಮುಕ್ತಾಯಗೊಂಡು, ಮಂಡೇಪಂಡ ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು.

3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ನೆಲ್ಲಮಕ್ಕಡ 2–1ರಿಂದ ಕುಪ್ಪಂಡ (ಕೈಕೇರಿ) ತಂಡವನ್ನು ಮಣಿಸಿತು.

ಚಾಂಪಿಯನ್ ಮಂಡೇಪಂಡ ₹ 5 ಲಕ್ಷ, ದ್ವಿತೀಯ ಸ್ಥಾನ ಪಡೆದ ಚೇಂದಂಡ ₹ 3 ಲಕ್ಷ ಹಾಗೂ ಸೆಮಿಫೈನಲ್ ಪ್ರವೇಶಿಸಿದ್ದ ನೆಲ್ಲಮಕ್ಕಡ ಮತ್ತು ಕುಪ್ಪಂಡ (ಕೈಕೇರಿ) ತಂಡಗಳು ತಲಾ ₹ 1 ಲಕ್ಷ ಬಹುಮಾನ ಪಡೆದವು.

ದಾಖಲೆ ನಿರ್ಮಾಣ: ಈ ಬಾರಿಯ ಬೆಳ್ಳಿ ಹಬ್ಬದ 'ಮುದ್ದಂಡ ಕಪ್' ಹಾಕಿ ಉತ್ಸವದಲ್ಲಿ 396 ತಂಡಗಳಿಂದ 5,544 ಆಟಗಾರರು ಪಾಲ್ಗೊಂಡಿದ್ದು, ಒಟ್ಟು 397 ಪಂದ್ಯಗಳು ನಡೆದವು. ಮಹಿಳೆಯರ 5ಎ ಸೈಡ್ ಟೂರ್ನಿಯಲ್ಲಿ 58 ತಂಡಗಳಿಂದ 464 ಆಟಗಾರ್ತಿಯರು ಆಡಿದ್ದು, 57 ಪಂದ್ಯಗಳ ಮೂಲಕ ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ ಎಂದು ಸಂಸ್ಥೆಯ ಪ್ರತಿನಿಧಿ ಸಿಂಧುಜಾ ಘೋಷಿಸಿ, ಪ್ರಮಾಣಪತ್ರ ನೀಡಿದರು.

ಟಿಸಿಎಸ್ 10ಕೆ ಓಟ: ಅಭಿಷೇಕ್ ಕೂಟ ದಾಖಲೆ, ಸಂಜೀವನಿಗೆ 3ನೇ ಸ್ವರ್ಣ

ಯುಗಾಂಡಾದ ಚೆಪ್ಟೆಗಿ, ಸಾರಾ ಚಾಂಪಿಯನ್

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್, ಯುಗಾಂಡಾದ ಜೋಷುವಾ ಚೆಪ್ಟೆಗಿ ಅವರು ಭಾನುವಾರ ನಡೆದ 17ನೇ ಆವೃತ್ತಿಯ ಟಿಸಿಎಸ್ ವಿಶ್ವ 10ಕೆ ಓಟದ ಎಲೀಟ್ ಪುರುಷರ ವಿಭಾಗದ ಚಿನ್ನ ಗೆದ್ದರು. ಅವರದೇ ದೇಶದ ದೂರ ಅಂತರದ ಓಟಗಾರ್ತಿ ಸಾರಾ ಚೆಲಂಗತ್ ಅವರು ಮಹಿಳೆಯರ ವಿಭಾಗದಲ್ಲಿ ಸ್ವರ್ಣ ಪದಕಕ್ಕೆ ಕೊರಳೊಡ್ಡಿದರು. ಜೊತೆಗೆ ಬೆಂಗಳೂರಿನಲ್ಲಿ ಟಿಸಿಎಸ್ ಪ್ರಶಸ್ತಿ ಗೆದ್ದ ಯುಗಾಂಡಾದ ಮೊದಲ ಅಥ್ಲೀಟ್‌ಗಳು ಎಂಬ ಹಿರಿಮೆಗೆ ಅವರಿಬ್ಬರೂ ಪಾತ್ರರಾದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವಳಿ ಪದಕ ಗೆದ್ದಿರುವ 28 ವರ್ಷ ವಯಸ್ಸಿನ ಚೆಪ್ಟೆಗಿ (27 ನಿಮಿಷ 53 ಸೆಕೆಂಡ್) ಮೊದಲಿಗರಾಗಿ ಗುರಿ ತಲುಪಿ ₹22.19 ಲಕ್ಷ ಬಹುಮಾನ ತನ್ನದಾಗಿಸಿಕೊಂಡರು. 2014ರಲ್ಲಿ ಇದೇ ಕೂಟದಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆಗೆ ಪದಾರ್ಪಣೆ ಮಾಡಿದ್ದ ಚೆಪ್ಟೆಗಿ ಮೊದಲ ಪ್ರಯತ್ನದಲ್ಲೇ ಬೆಳ್ಳಿ ಪದಕ ಗೆದ್ದಿದ್ದರು.

ಇದೇ ಸ್ಪರ್ಧೆಯಲ್ಲಿ ವಿಶ್ವದಾಖಲೆ ಹೊಂದಿರುವ (26 ನಿ.11 ಸೆ.) ಚೆಪ್ಟೆಗಿ ಅವರಿಗೆ ಎರಿಟ್ರಿಯಾದ 17 ವರ್ಷ ವಯಸ್ಸಿನ ಸೇಮನ್ ಟೆಸ್‌ಫಜಿರೋಜೆಸ್ ಅವರಿಂದ ಪ್ರಬಲ ಪೈಪೋಟಿ ಎದುರಾಯಿತು.

ಎರಡು ಸೆಕೆಂಡ್ ಅಂತರದಲ್ಲಿ ಸೇಮನ್ ಚಿನ್ನದ ಅವಕಾಶ ಕಳೆದುಕೊಂಡರು. ಕೆನ್ಯಾದ ವಿನ್ಸೆಂಟ್ ಲ್ಯಾಂಗಟ್ ಕಂಚಿನ ಪದಕ ಜಯಿಸಿದರು.

ಸಾರಾಗೆ ಚಿನ್ನ: 23 ವರ್ಷ ವಯಸ್ಸಿನ ಸಾರಾ 31 ನಿಮಿಷ 07 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಅವರ 11 ಸೆಕೆಂಡ್‌ಗಳ ಅಂತರದಿಂದ ಕೂಟ ದಾಖಲೆಯ ಅವಕಾಶದಿಂದ ವಂಚಿತರಾದರು.

ಅಭಿಷೇಕ್‌ಗೆ ಎರಡನೇ ಚಿನ್ನ: ಉತ್ತರ ಪ್ರದೇಶದ ಅಭಿಷೇಕ್ ಪಾಲ್ ಅವರು ಎಲೀಟ್ ಪುರುಷರ ಭಾರತೀಯರ ವಿಭಾಗದಲ್ಲಿ (29ನಿ.12ಸೆ). ಕೂಟ ದಾಖಲೆ ನಿರ್ಮಿಸಿದರು.

ಕಳೆದ ಆವೃತ್ತಿಯಲ್ಲಿ ಮಹಾರಾಷ್ಟ್ರದ ಕಿರಣ್ ಮಾತ್ರೆ (29ನಿ. 32ಸೆ.) ನಿರ್ಮಿಸಿದ್ದ ದಾಖಲೆ ಅಳಿಸಿದರು. ₹3 ಲಕ್ಷ ಬಹುಮಾನದೊಂದಿಗೆ ಕೂಟ ದಾಖಲೆಗಾಗಿ ₹1 ಲಕ್ಷ ಬೋನಸ್ ಜೇಬಿಗಿಳಿಸಿಕೊಂಡರು.

ಸಂಜೀವನಿಗೆ ನಾಲ್ಕನೇ ಪದಕ: ಮಹಾರಾಷ್ಟ್ರದ ಸಂಜೀವನಿ ಜಾಧವ್ ಅವರು ಎಲೀಟ್ ಮಹಿಳೆಯರ ಭಾರತೀಯರ ವಿಭಾಗದಲ್ಲಿ (34ನಿ. 16ಸೆ) ಪ್ರಶಸ್ತಿ ಉಳಿಸಿಕೊಳ್ಳುವ ಜೊತೆಗೆ ಇಲ್ಲಿ ನಾಲ್ಕನೇ ಪದಕಕ್ಕೆ ಕೊರಳೊಡ್ಡಿದರು. 2018ರಲ್ಲಿ ಕೂಟ ದಾಖಲೆ (33ನಿ.38ಸೆ) ಬರೆದಿದ್ದ ಅವರು, 2022ರಲ್ಲಿ ಬೆಳ್ಳಿಯ ಸಾಧನೆ ಮೆರೆದಿದ್ದರು.



ಬೆಂಗಳೂರಿನಲ್ಲಿ ಭಾನುವಾರ ನಡೆದ ಟಿಸಿಎಸ್ ವಿಶ್ವ 10ಕೆ ಓಟದಲ್ಲಿ ಚಿನ್ನ ಗೆದ್ದವರು. ಯುಗಾಂಡದ ಜೊಷುವಾ ಚೆಪ್ಟೆಗಿ (ಎಲೀಟ್ ಪುರುಷರು), ಯುಗಾಂಡಾದ ಸಾರಾ ಚೆಲಂಗತ್ (ಎಲೀಟ್ ಮಹಿಳೆಯರು), ಅಭಿಷೇಕ್ ಪಾಲ್ (ಭಾರತೀಯ ಎಲೀಟ್ ಪುರುಷರು), ಸಂಜೀವನಿ ಜಾಧವ್ (ಭಾರತೀಯ ಎಲೀಟ್ ಮಹಿಳೆಯರು) –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಟಿಸಿಎಸ್ ವಿಶ್ವ 10ಕೆ ಓಟದ ಫಲಿತಾಂಶ

ಎಲೀಟ್ ಪುರುಷರ ವಿಭಾಗ

ಪದಕ	ಅಥ್ಲೀಟ್	ದೇಶ	ಸಮಯ	ಬಹುಮಾನ
ಚಿನ್ನ	ಜೊಷುವಾ ಚೆಪ್ಟೆಗಿ	ಯುಗಾಂಡಾ	27ನಿ. 53ಸೆ	₹22.19 ಲಕ್ಷ
ಬೆಳ್ಳಿ	ಸೇಮನ್ ಟಿ	ಎರಿಟ್ರಿಯಾ	27ನಿ. 55ಸೆ	₹14.51 ಲಕ್ಷ
ಕಂಚು	ವಿನ್ಸೆಂಟ್ ಲ್ಯಾಂಗಟ್	ಕೆನ್ಯಾ	28ನಿ. 02ಸೆ	₹8.53 ಲಕ್ಷ

ಎಲೀಟ್ ಮಹಿಳೆಯರ ವಿಭಾಗ

ಪದಕ	ಅಥ್ಲೀಟ್	ದೇಶ	ಸಮಯ	ಬಹುಮಾನ
ಚಿನ್ನ	ಸಾರಾ ಚೆಲಂಗತ್	ಯುಗಾಂಡಾ	31ನಿ. 07ಸೆ	₹22.19 ಲಕ್ಷ
ಬೆಳ್ಳಿ	ಸಿಂಥಿಯಾ ಚೆಪ್ಜೆನೊ	ಕೆನ್ಯಾ	32ನಿ. 04ಸೆ.	₹14.51 ಲಕ್ಷ
ಕಂಚು	ಗುಟೇನಿ ಶಾಂಕೊ	ಇಥಿಯೋಪಿಯಾ	32ನಿ. 06ಸೆ	₹8.53 ಲಕ್ಷ

ಎಲೀಟ್ ಪುರುಷರು (ಭಾರತೀಯ ವಿಭಾಗ)

ಪದಕ	ಅಥ್ಲೀಟ್	ರಾಜ್ಯ	ಸಮಯ	ಬಹುಮಾನ
ಚಿನ್ನ	ಅಭಿಷೇಕ್ ಪಾಲ್	ಉತ್ತರಪ್ರದೇಶ	29ನಿ. 12ಸೆ	₹3 ಲಕ್ಷ
ಬೆಳ್ಳಿ	ಸಾವನ್ ಬರ್ವಾಲ್	ಹಿಮಾಚಲ ಪ್ರದೇಶ	29ನಿ. 45ಸೆ	₹2.25 ಲಕ್ಷ
ಕಂಚು	ಕಿರಣ್ ಮಾತ್ರೆ	ಮಹಾರಾಷ್ಟ್ರ	30ನಿ. 01ಸೆ	₹1.50 ಲಕ್ಷ

ಎಲೀಟ್ ಮಹಿಳೆಯರು (ಭಾರತೀಯ ವಿಭಾಗ)

ಪದಕ	ಅಥ್ಲೀಟ್	ರಾಜ್ಯ	ಸಮಯ	ಬಹುಮಾನ
ಚಿನ್ನ	ಸಂಜೀವನಿ ಜಾಧವ್	ಮಹಾರಾಷ್ಟ್ರ	34ನಿ. 16ಸೆ	₹2.75 ಲಕ್ಷ
ಬೆಳ್ಳಿ	ಭಾರ್ತಿ ನೈನ್	ಉತ್ತರಪ್ರದೇಶ	35ನಿ. 36ಸೆ	₹2 ಲಕ್ಷ
ಕಂಚು	ಪೂನಮ್ ಸೋನುನೆ	ಮಹಾರಾಷ್ಟ್ರ	35ನಿ. 57ಸೆ	₹1.50 ಲಕ್ಷ

ಮುಖ್ಯಾಂಶಗಳು

- ವಿಜೇತರಿಗೆ ಒಟ್ಟು ₹1.79 ಕೋಟಿ ಬಹುಮಾನ ವಿತರಣೆ
- ವಿಶ್ವ 10ಕೆ ಓಟದಲ್ಲಿ 35 ಸಾವಿರಕ್ಕೂ ಅಧಿಕ ಮಂದಿ ಭಾಗಿ